Editor: **S.Y.GURUSHANTH** Publisher: **G.N.NAGARAJ** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ-19 । ಸಂಚಿಕೆ-29 । ಜುಲೈ 14-20, 2025 । ಪುಟ 16 । ರೂ.10
Volume-19 | Issue-29 | July 14-20, 2025 | Pages:16 | Price: 10/-



ಜುಲೈ 09 2025

ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಶಸ್ವಿ

25 ಕೋಟಿ ಕಾರ್ಮಿಕರು ಭಾಗಿ

ನೈಸ್ ಯೋಜನೆಯಲ್ಲಿ ಸ್ವಾಧೀನಪಡಿಸಿಕೊಂಡ 111 ಎಕರೆ ಜಮೀನು ರೈತರಿಗೆ ವಾಪಸ್ ಸರ್ಕಾರ ಪಾಠ ಕಲಿಯಲಿ

ESI ಕಾಯ್ದೆ ತಂದದ್ದು ಸುಗಮ ವ್ಯಾಪಾರಕ್ಕಾಗಿ ಅಲ್ಲ



ದೇವನಹಳ್ಳಿ ರೈತರು ಎತ್ತುತ್ತಿರುವ ಪ್ರಶ್ನೆ

ದುಡಿಯುವ ಜನರಿಗೆ ದ್ರೋಹ, ದೌರ್ಜನ್ಯ ಲೆವಲರ್ಸ್ ಸೈನಿಕರ ಮೇಲೆ ದಾಳಿ ಜನರ ಮೇಲೆ ದಬ್ಬಾಳಿಕೆ

ಭಾಗ 32

ಜಿ.ಎನ್. ನಾಗರಾಜ್

ಲೆವೆಲ್ಲರ್ಸ್‌ಗಳು ಈಗ ಗ್ರಾಂಡಿಗಳ ಆಡಳಿತಕ್ಕೆ ಬಹಳ ಅಪಾಯಕಾರಿಗಳಾಗಿ ಬಿಟ್ಟಿದ್ದರು. ಕ್ರೋಮ್‌ವೆಲ್, ಲಿಲ್‌ಬರ್ನ್ ಮೊದಲಾದ ಲೆವಲರ್ಸ್‌ಗಳಿಗೆ ಶಿಕ್ಷೆ ವಿಧಿಸಿರೆಂದು ಪ್ರಭುತ್ವ ಸಮಿತಿಗೆ ಒತ್ತಾಯಿಸುವಾಗ ಹೇಳಿದ ಮಾತು ಅವರಿಗೆ ಈ ಅರಿವು ಬಹಳ ಚೆನ್ನಾಗಿತ್ತು ಎಂಬುದನ್ನು ತೋರಿಸುತ್ತದೆ. "ಅವರನ್ನು ತುಂಡು ತುಂಡು ಮಾಡಿ. ಇಲ್ಲದಿದ್ದರೆ ಅವರು ನಮ್ಮನ್ನು ತುಂಡು ಮಾಡುತ್ತಾರೆ." ಹೇಗೆ, ಎಂಬುದರ ಬಗ್ಗೆ ಕೂಡಾ ಅವರಿಗೆ ಚೆನ್ನಾಗಿ ಗೊತ್ತಿತ್ತು. ಲೆವಲರ್ಸ್‌ಗಳ ಬಹಳ ಶಕ್ತಿಯುತವಾದ ಬರಹಗಳು, ಅದು ಸಾಮಾನ್ಯ ಜನರಲ್ಲಿ ಪಡೆಯುತ್ತಿದ್ದ ಜನಪ್ರಿಯತೆ ಅವರನ್ನು ಆತಂಕಕ್ಕೆ ದೂಡಿತ್ತು. ಕ್ರೋಮ್‌ವೆಲ್ ಮುಂದುವರೆದು ಹೇಳಿದ್ದನ್ನು ಅರ್ಥೈಸಿಕೊಳ್ಳಿ. ಅವರು, ರಾಜ್ಯದಲ್ಲಿ ಹರಿದ ನೆತ್ತರು, ಹಣ ಎಲ್ಲದಕ್ಕೂ ಗ್ರಾಂಡಿಗಳೇ ಕಾರಣ ಎಂದು ಜನರ ಮುಂದೆ ಬಿಂಬಿಸುವರು. ಅದರಿಂದ ವಿಚಾರಶೀಲರೆಲ್ಲ, ಗ್ರಾಂಡಿಗಳು, ಇಡೀ ಭೂಮಿಯ ಮೇಲಿನ ನಿಕೃಷ್ಟ ಜೀವಿಗಳಲ್ಲಿ ಅತ್ಯಂತ ಹೇಯ, ತಿರಸ್ಕಾರಾರ್ಹ ಎಂದು ನಂಬುವಂತೆ ಮಾಡುವರು.

ಲೆವಲರ್ಸ್‌ಗಳು ತಮ್ಮ ಕರಪತ್ರ, ಕಿರುಪುಸ್ತಿಕೆಗಳಲ್ಲಿ ಇಲ್ಲಿವರೆಗೆ ಮುಂದಿಡುತ್ತಿದ್ದ ಪ್ರಜಾಪ್ರಭುತ್ವೀಯ ವಿಚಾರಗಳು, ಜನರ ಕೆಲ ಸಮಸ್ಯೆಗಳ ಬಗ್ಗೆ ಕ್ರೋಮ್‌ವೆಲ್ ಮತ್ತವನ ಸಂಗಡಿಗರು ಅನುಸರಿಸುತ್ತಿದ್ದ ನಂಬಿಸಿ ಮೋಸ ಮಾಡುವ ನೀತಿಗಳನ್ನು ಬಯಲು ಮಾಡುತ್ತಿದ್ದ ರೀತಿ, ಅದು ಜನರಲ್ಲಿ ಪಡೆಯುತ್ತಿದ್ದ ಸುಮುಖ ಪ್ರತಿಕ್ರಿಯೆ ಅವರು ಭಯಪಡುವಂತೆ ಮಾಡಿತ್ತು.

ಲೆವಲರ್ಸ್‌ಗಳು ಈ ವಿಷಯದಲ್ಲಿ ಯಾವ ಮುಲಾಜನ್ನೂ ಇಟ್ಟುಕೊಳ್ಳದೆ ಲೆವಲರ್ಸ್‌ಗಳು ತಮ್ಮ ಒಂದು ಕಿರುಪುಸ್ತಿಕೆಯಲ್ಲಿ ಹೀಗೆ ಹೇಳಿದ್ದರು 'ಯಾರಾದರೂ ಕ್ರೋಮ್‌ವೆಲ್ ಮುಂದೆ ಏನಾದರೂ ಸಮಸ್ಯೆಗಳನ್ನು ಹೇಳಿದರೆ ಅವನು ತನ್ನ ಎದೆಯ ಮೇಲೆ ಕೈಯಿಟ್ಟು ಕಣ್ಣು ಮೇಲಕ್ಕೆತ್ತಿ ದೇವರನ್ನು ತನ್ನ ಸಾಕ್ಷಿಗಾಗಿ ಕರೆಯುತ್ತಾನೆ. ಅವನು ಕಣ್ಣೀರು ಸುರಿಸುತ್ತಾನೆ, ಕಿರುಚಾಡುತ್ತಾನೆ, ಪಶ್ಚಾತ್ತಾಪ ನಟಿಸುತ್ತಾನೆ. ಅದೇ ಸಮಯದಲ್ಲಿ ನಿಮ್ಮ ಪಕ್ಕೆಲುಬುಗಳನ್ನು ತಿವಿದು ಮುರಿಯಲೆತ್ನಿಸುತ್ತಿರುತ್ತಾನೆ.'

ಈ ಮಾತುಗಳು ಬಂಡಬಾಳಶಾಹಿ ಪ್ರಜಾಪ್ರಭುತ್ವದಲ್ಲಿನ ಆಳುವ ವರ್ಗದ ಟಿಪಿಕಲ್ ಮಾದರಿಯನ್ನು ನಮ್ಮ ಮುಂದಿಡುತ್ತದೆಯಲ್ಲವೇ! ಈ ಮಾತುಗಳನ್ನು ಓದುವಾಗ ನಮ್ಮ ಕಣ್ಣ ಮುಂದೆ ಇಂದಿನ ಕೆಲವು ರಾಜಕಾರಣಿಗಳ ಮುಖಗಳು ಕುಣಿಯುತ್ತಿದೆಯಲ್ಲವೇ?

ಇಂತಹ ಮಾತುಗಳನ್ನು ಓದಿದಾಗ ಆ ಸರ್ವಾಧಿಕಾರಿಗೆ ನಮ್ಮನ್ನು ಇಡೀ ಭೂಮಿಯಲ್ಲಿ ನಿಕೃಷ್ಟ, ಹೇಯ ಎಂದು ಬಿಂಬಿಸುತ್ತಾರೆ ಎಂದೆನಿಸಿದ್ದು ಸಹಜವಲ್ಲವೇ? ಪ್ರಜಾಪ್ರಭುತ್ವ ಇನ್ನೂ ಸ್ಥಾಪಿತವಾಗಿರದ ಆ ಕಾಲದಲ್ಲಿ ಇಂತಹ ಕಟು ಟೀಕೆ ಬಹಳ ದಿಟ್ಟತನದ ಮಾತೇ ಸರಿ. ಆ ಸರ್ವಾಧಿಕಾರಿಗೆ ಇವರನ್ನು ಹೊಸಕಿ ಹಾಕಿಬಿಡಬೇಕು ಎಂದು ಅನ್ನಿಸಿತು.

ಇದರ ಜೊತೆಗೆ ಸೈನ್ಯದಲ್ಲಿ ಹೊಸದಾಗಿ ಹೊರಡಿಸಲಾದ, ಸೈನಿಕರು, ಅಧಿಕಾರಿಗಳು ನೇರವಾಗಿ ಪಾರ್ಲಿಮೆಂಟ್‌ಗೆ ಮನವಿ ಸಲ್ಲಿಸುವಂತಿಲ್ಲ ಎಂಬ ಆಜ್ಞೆಯನ್ನು ಧಿಕ್ಕರಿಸಿ ಮನವಿ ಸಲ್ಲಿಸಿದರು. ಅದನ್ನು ಸಲ್ಲಿಸಿದವರನ್ನು ಸೈನ್ಯದಿಂದ ವಜಾ ಮಾಡಿದ ನಂತರ ಆ ಕ್ರಮವನ್ನು ಕಟುವಾಗಿ ಟೀಕಿಸಿ ಕಿರುಪುಸ್ತಿಕೆಯನ್ನು ಪ್ರಕಟಿಸಿದರು. ಜೊತೆಗೆ ಈ ಲೇಖನದ ಜೊತೆಗಿರುವ ಪ್ರತ್ಯೇಕ ಬರಹದಲ್ಲಿ ವಿವರಿಸಲಾದ ಸೈನಿಕರ ಘೋಷಣೆಯ ವಿಚಾರಗಳು ಗ್ರಾಂಡಿಗಳನ್ನು ಇನ್ನು ತಡಮಾಡುವಂತಿಲ್ಲ. ಈ ಹಕ್ಕುಗಳ ಪ್ರತಿಪಾದನೆಯನ್ನು ಇಲ್ಲವಾಗಿಸಬೇಕು ಎಂಬ ತೀರ್ಮಾನಕ್ಕೆ ಬಂದರು.

ಸೈನ್ಯದ ಲೆವಲರ್ಸ್‌ಗಳ ದಮನ

ಸೈನ್ಯದಲ್ಲಿ ಲೆವಲರ್ಸ್‌ಗಳ ವಿಚಾರವನ್ನು ಒಪ್ಪುವ ಧೀರೋದಾತ್ತವಾಗಿ ಹೋರಾಡಿದ್ದ ಅಧಿಕಾರಿಗಳನ್ನು ಕಿತ್ತು ಹಾಕಿದರು. ತಮ್ಮ ಹೊಗಳುಭಟ್ಟರನ್ನು ನೇಮಿಸಿಕೊಂಡರು. ಅಲ್ಲದೇ ರಾಜಪ್ರಭುತ್ವದ ವಿರುದ್ಧ ಬದ್ಧತೆಯಿಂದ ಹೋರಾಡಿದ ಲೆವಲರ್ಸ್ ಸೈನಿಕರ ಸಂಖ್ಯೆ ಮತ್ತು ಶಕ್ತಿಯನ್ನು ಕುಗ್ಗಿಸಲು ಕೇವಲ ಸಂಬಳಕ್ಕಾಗಿ ಕೆಲಸ ಮಾಡುವ ಸೈನಿಕರನ್ನು ಹೊಸದಾಗಿ ನೇಮಿಸಿಕೊಂಡರು.



AN AGREEMENT OF THE PEOPLE FOR A firme and present Peace, upon grounds of common-right and freedome;

As it was proposed by the Agents of the five Regiments of Horse; and since by the generall approbation of the Army, offered to the joynt concurrence of all the free COMMONS of ENGLAND.

Printed Anno Dom. 1647.

ಇದರ ಜೊತೆಗೆ ಕ್ರಾಂತಿಕಾರಿ ಪ್ರಜಾಪ್ರಭುತ್ವದ ವಿಚಾರಗಳಿಗಾಗಿ ಒತ್ತಾಯಿಸುತ್ತಿರುವ ಸೈನ್ಯವನ್ನು ಒಡೆಯಬೇಕು ಎಂದು ಹಿಂದೆ ಗ್ರಾಂಡಿಗಳ ವಿರುದ್ಧವಾದ, ಪಾರ್ಲಿಮೆಂಟ್‌ನಲ್ಲಿ ಬಹುಮತ ಹೊಂದಿದ್ದ ದೊಡ್ಡ ಶ್ರೀಮಂತರ ಗುಂಪು ಗ್ರಾಂಡಿಗಳ ಶಕ್ತಿಯನ್ನು ಉಡುಗಿಸಲು ಪ್ರಯೋಗಿಸಿದ ಕುತಂತ್ರವನ್ನೇ ಗ್ರಾಂಡಿಗಳೂ ಬಳಸಲು ತೀರ್ಮಾನಿಸಿದರು. ಸೈನ್ಯದ ತುಕಡಿಗಳನ್ನು ಐರ್ಲೆಂಡನ್ನು ವಶಪಡಿಸಿಕೊಳ್ಳುವುದಕ್ಕೆ ಕಳಿಸುವ ಮೂಲಕ ಸೈನ್ಯವನ್ನು ವಿಭಜಿಸಲು ತೀರ್ಮಾನಿಸಿದರು. ಯಾವ ತುಕಡಿಗಳು ಹೋಗಬೇಕು ಎಂಬ ಬಗ್ಗೆ ಲಾಟರಿ ಮೂಲಕ ತೀರ್ಮಾನಿಸಿದರು.

ಈ ತೀರ್ಮಾನ ಪ್ರಕಟವಾದ ಕೂಡಲೇ ಸೈನ್ಯದಲ್ಲಿ ಕಲಮಲವೆದ್ದಿತು. ಲಂಡನ್‌ನಲ್ಲಿಯೇ ಒಂದು ತುಕಡಿ ಐರ್ಲೆಂಡ್‌ಗೆ ತೆರಳಲು ನಿರಾಕರಿಸಿತು. ಸೈನ್ಯದ ಲೆವಲರ್ಸ್ ಮೊದಲು ದನಿ ಎತ್ತಿದ್ದೇ ಪಾರ್ಲಿಮೆಂಟಿನ ಬಹುಮತದ ಗುಂಪು 1647ರಲ್ಲಿ ಈ ರೀತಿ ಸೈನ್ಯವನ್ನು ವಿಭಜಿಸುವ ಆಜ್ಞೆಯ ವಿರುದ್ಧ. ಆಗನಿಂದ ಅವರ ಒತ್ತಾಯ ಇಂಗ್ಲೆಂಡ್‌ನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪನೆಯಾಗುವ ತನಕ ನಾವು ಎಲ್ಲಿಯೂ ಹೋಗುವುದಿಲ್ಲ ಎಂದು. ಅದನ್ನು ಸೈನ್ಯದ ದಂಡನಾಯಕರೂ, ಪಾರ್ಲಿಮೆಂಟಿನ ಬಹುಮತದ ಶ್ರೀಮಂತರ ಗುಂಪೂ ಒಪ್ಪಬೇಕಾಗಿ ಬಂದಿತ್ತು. ಆ ಬಗ್ಗೆ ಒಂದು ಒಪ್ಪಂದವೂ ಆಗಿತ್ತು.

ಹೀಗೆ ಐರ್ಲೆಂಡ್‌ಗೆ ಹೋಗಬೇಕು ಎಂದು ಗುರುತಿಸಲಾಗಿದ್ದ ಒಂದು ತುಕಡಿಯಲ್ಲಿ ಸೈನಿಕರು ದಂಗೆ ಎದ್ದರು. ಒಬ್ಬ ಸೈನಿಕನ ನಾಯಕತ್ವದಲ್ಲಿ ಆ ತುಕಡಿಯ ಧ್ವಜವನ್ನು ವಶಪಡಿಸಿಕೊಂಡರು. ಕೂಡಲೇ ಅಲ್ಲಿಗೆ ಬಂದ ಕ್ರೋಮ್‌ವೆಲ್ ಹದಿನೈದು ಸೈನಿಕರನ್ನು ಬಂಧಿಸಿ ಮಿಲಿಟರಿ ಟ್ರಿಬ್ಯುನಲ್ ಮುಂದೆ ವಿಚಾರಣೆಗೆ ಒಳಪಡಿಸಿದ. ಆಗ ಅದರ ನಾಯಕನಾಗಿದ್ದ ಕೇವಲ ಇಪ್ಪತ್ತು ಮೂರು ವರ್ಷದ ಯುವಕ, ಹಲವು ಕಾಳಗಗಳಲ್ಲಿ ಶೌರ್ಯವನ್ನು ಮೆರೆದು ಕೀರ್ತಿ ಪಡೆದಿದ್ದ ಸೈನಿಕನನ್ನು ಮರಣ ದಂಡನೆಗೆ ಗುರಿಪಡಿಸಿ ಗುಂಡಿಟ್ಟು ಕೊಲ್ಲಲಾಯಿತು.

ಆ ಸೈನಿಕನ ಅಂತಿಮ ಸಂಸ್ಕಾರ ಒಂದು ದೊಡ್ಡ ರಾಜಕೀಯ ಪ್ರತಿಭಟನೆಯಾಗಿ ಪರಿಣಮಿಸಿತು. ಸಾವಿರಾರು ಲೆವಲರ್ಸ್ ಸೈನಿಕರ ಜೊತೆಗೆ ಲಂಡನ್‌ನ ದುಡಿಯುವ ಜನರ ನಡುವಿನ ಸಾವಿರಾರು ಲೆವಲರ್ಸ್‌ಗಳು ಲೆವಲರ್ಸ್ ಧ್ವಜದ ಗುರುತನ್ನು ಧರಿಸಿ ಭಾಗವಹಿಸಿದರು.

ಈ ಹಿನ್ನೆಲೆಯಲ್ಲಿ ಸ್ವತಃ ಸರ್ವಾಧಿಕಾರಿ ಕ್ರೋಮ್‌ವೆಲ್ ಸೈನ್ಯದ ಪೆರೇಡ್ ಪರಿಶೀಲನೆಯನ್ನು ನಡೆಸಿದ. ಆಗ ಹಾಜರಾದ ತುಕಡಿಗಳಲ್ಲಿ ಹಲವು ಲೆವಲರ್ಸ್ ವಿಚಾರಗಳ ಹೆಗ್ಗುರುತಾಗಿ ಜನಪ್ರಿಯವಾಗಿದ್ದ ಹಸಿರು ಬಣ್ಣದ ರಿಬ್ಬನ್‌ಗಳನ್ನು ತಲೆಯ ಮೇಲೆ ಧರಿಸಿ ಹಾಜರಾದರು. ಹಿಂದೆ ಇಂತಹುದೇ ಪೆರೇಡ್‌ನಲ್ಲಿ ಕ್ರೋಮ್‌ವೆಲ್ ಮಾಡಿದಂತೆ ತಕ್ಷಣ ಶೂಟ್ ಮಾಡುವುದಕ್ಕೆ ಕೈ ಹಾಕಲಿಲ್ಲ. ಸಂಯಮದಿಂದ ಅವರ ಮುಖ್ಯ ಬೇಡಿಕೆಗಳಾದ ತುಂಡು ಪಾರ್ಲಿಮೆಂಟ್ ವಿಸರ್ಜನೆ, ಅಗ್ರಿಮೆಂಟ್ ಆಫ್ ಪೀಪಲ್‌ನ ಜಾರಿ, ಚುನಾವಣೆಗಳು, ಸೈನಿಕರ ಸಂಬಳದ ಬಾಕಿ ನೀಡುವ ಭರವಸೆಗಳನ್ನು ನೀಡಿದ. ಆದರೆ ಯಾವೊಂದೂ ಕಾರ್ಯಗತಗೊಳಿಸಲಿಲ್ಲ. ಎಂದಿನಂತೆ ಕೇವಲ ಪೊಳ್ಳು ಭರವಸೆ ನೀಡಿದ್ದನಷ್ಟೇ.

ಆದರೆ ಸೈನ್ಯದ ಒಳಗೆ ಪ್ರತಿಭಟನೆ ಮತ್ತು ದಂಗೆ ವಿವಿಧ ಪ್ರಾಂತ್ಯದ ಹಲವು ತುಕಡಿಗಳಿಗೆ ಹಬ್ಬಿತು. ದಂಗೆ ಎದ್ದ, ವಿವಿಧ ಜಾಗಗಳಲ್ಲಿ ಪ್ರತ್ಯೇಕವಾಗಿದ್ದ ತುಕಡಿಗಳು ಒಂದು ಕಡೆ ಸೇರಲು ಪ್ರಯಾಣ ಪ್ರಾರಂಭಿಸಿದರು. ಆದರೆ ಸೈನ್ಯದ ಮಹಾ ದಂಡನಾಯಕ ಫೈರ್‌ಫಾಕ್ಸ್ ಮತ್ತು ಕ್ರೋಮ್‌ವೆಲ್ ಅವರನ್ನು ಒಟ್ಟಾಗಲು ಬಿಡದಂತೆ ಸಡನ್ ಆಗಿ ತಮ್ಮ ವಿಧೇಯ ಸೈನ್ಯದ ತುಕಡಿಗಳೊಂದಿಗೆ ಲೆವಲರ್ಸ್ ಸೈನ್ಯವನ್ನು ಅಡ್ಡಗಟ್ಟಿದರು. ನೂರಾರು ಸೈನಿಕರನ್ನು ಬಂಧಿಸಿದರು. ಮರುದಿನವೇ ಮೂರು ಸೈನಿಕರನ್ನು ಎಲ್ಲರ ಎದುರಿಗೆ ಗುಂಡಿಕ್ಕಿ ಕೊಲ್ಲಲಾಯಿತು.

ಹೀಗೆ ಈ ತುಕಡಿಗಳನ್ನು ದಮನಿಸಿದ ನಂತರ ಇಂಗ್ಲೆಂಡಿನ ಹತ್ತಾರು ಬೇರೆ ಬೇರೆ ಕಡೆಗಳಲ್ಲಿ ಪ್ರತಿಭಟನೆಗಳು ಸ್ಫೋಟಗೊಂಡವು. ಹೀಗೆ ಇಂಗ್ಲೆಂಡಿನ ವಿವಿಧೆಡೆಗಳಲ್ಲಿ ನಡೆದ ಪ್ರತಿಭಟನೆಗಳು ಲೆವಲರ್ಸ್ ಸಂಘಟನೆ ಇಂಗ್ಲೆಂಡಿನ ಗ್ರಾಮೀಣ ಪ್ರದೇಶಗಳಲ್ಲೂ ಹಬ್ಬಿತ್ತು ಎಂಬುದನ್ನು ತೋರಿಸುತ್ತದೆ. ಅವೆಲ್ಲವನ್ನೂ ನಿರ್ದಯೆಯಿಂದ ಹತ್ತಿಕ್ಕಲಾಯಿತು. ಇಲ್ಲಿಗೆ ಸೈನ್ಯದೊಳಗಿನ ಲೆವಲರ್ಸ್‌ಗಳ ಶಕ್ತಿ ಉಡುಗಿತು. ಸೈನ್ಯದೊಳಗಿನ ಲೆವಲರ್ಸ್‌ಗಳೇ ಲೆವಲರ್ಸ್‌ಗಳ ಪ್ರಬಲ, ಗ್ರಾಂಡಿಗಳು ಹೆದರುತ್ತಿದ್ದ ಶಕ್ತಿ.ಅದು ಅಡಗಿದ ಮೇಲೆ ಲೆವಲರ್ಸ್‌ಗಳು ತಮ್ಮ ಎಂದಿನ ಪ್ರಾಬಲ್ಯ ಹೊಂದಲಾಗಲಿಲ್ಲ.

ಹೀಗೆ ಲೆವಲರ್ಸ್‌ಗಳ ಸೈನ್ಯದ ಬಲವನ್ನು ದಮನದ ಮೂಲಕ ಅಡಗಿಸಲಾಯಿತು. ಒಂದು ಕಡೆ ಲೆವಲರ್ಸ್‌ಗಳ ಮುಖ್ಯ ನಾಯಕರಾದ ಲಿಲ್‌ಬರ್ನ್ ಮೊದಲಾದವರನ್ನು ಬಂಧನದಲ್ಲಿಟ್ಟಿದ್ದರು. ಜೊತೆಗೆ ವಿವಿಧ ತುಕಡಿಗಳ ಲೆವಲರ್ಸ್‌ಗಳು ಐಕ್ಯತೆಯಿಂದ ತಮ್ಮೆಲ್ಲ ಶಕ್ತಿಯನ್ನು ಕ್ರೋಢೀಕರಿಸಿ ಈ ಬಿಕ್ಕಟ್ಟನ್ನು ಎದುರಿಸಲಾಗಲಿಲ್ಲ.

ಮತ್ತೊಂದು ಕಡೆ ಕ್ರೋಮ್‌ವೆಲ್ ಮತ್ತವನ ಗ್ರಾಂಡಿಗಳು ಪ್ರತಿ ಹಂತದಲ್ಲಿಯೂ ಇವರ ಅಭಿಪ್ರಾಯಗಳಿಗೆ ಮನ್ನಣೆ ನೀಡುತ್ತಾ ಬಂದ ವರ್ತನೆಯನ್ನು ನಂಬಿಕೊಂಡು ಬಂದದ್ದು, ಅದೆಲ್ಲಕ್ಕಿಂತ ಮುಖ್ಯವಾಗಿ ಕ್ರೋಮ್‌ವೆಲ್ ಮತ್ತು ಮಹಾದಂಡನಾಯಕ ಫೇರ್‌ಫಾಕ್ಸ್‌ಗಳು ರಾಜನ ಸೈನ್ಯದ ವಿರುದ್ಧ ಯುದ್ಧದಲ್ಲಿ ತೋರಿಸಿದ್ದ ಪರಾಕ್ರಮ, ಹೂಡಿದ್ದ ರಣತಂತ್ರಗಳ ಬಗ್ಗೆ ಸೈನಿಕರಲ್ಲಿ ಅಪಾರ ಮೆಚ್ಚುಗೆ ಮತ್ತು ಗೌರವಗಳಿದ್ದವು.

ಆದ್ದರಿಂದ ಸೈನಿಕ ಲೆವಲರ್ಸ್‌ಗಳು ಒಂದು ಕಡೆ ಸೈನಿಕರಾಗಿ ಕ್ರೋಮ್‌ವೆಲ್ ಮತ್ತು ಇತರ ದಂಡನಾಯಕರ ಬಗ್ಗೆ ಮೆಚ್ಚುಗೆ ಮತ್ತು ಸೈನಿಕ ಶಿಸ್ತು ಮತ್ತೊಂದು ಕಡೆ ಲೆವಲರ್ಸ್ ವಿಚಾರಧಾರೆ ಹೊಂದಿದ ಪ್ರಜೆಗಳಾಗಿ ಇಬ್ಬಂದಿತನದ ಇಕ್ಕಟ್ಟಿನಲ್ಲಿ ಸಿಲುಕಿಕೊಂಡದ್ದೂ ಕೂಡಾ ಅವರ ಈ ಸೋಲಿಗೆ ಕಾರಣವಾಯಿತು.

ಲಿಲ್‌ಬರ್ನ್ ಮತ್ತು ಲೆವಲರ್ಸ್ ನಾಯಕರ ವಿಚಾರಣೆ ಮತ್ತು ಬಿಡುಗಡೆ:

ಲಿಲ್‌ಬರ್ನ್ ಮತ್ತು ಜೊತೆಗಾರರಾದ ನಾಲ್ಕು ಜನ ಲೆವಲರ್ಸ್‌ಗಳ ಪ್ರಧಾನ ನಾಯಕರನ್ನು ಬಂಧಿಸಿದ ಮೇಲೆ ವಿಚಾರಣೆಗೆ ಹಾಜರುಪಡಿಸಲಾಯಿತು. ಈ ನಾಯಕರು ತಮ್ಮನ್ನು ವಿಚಾರಣೆಗೆ ಒಳಪಡಿಸಲು ಪ್ರಭುತ್ವ ಮಂಡಳಿಗೆ, ಅದು ನೇಮಿಸಿದ ಕೋರ್ಟ್‌ಗೆ ಅಧಿಕಾರ ಇಲ್ಲ ಎಂದು ವಾದಿಸಿದರು. ಹೀಗೆ ಈ ಪ್ರಕರಣ ದೀರ್ಘಕಾಲ ಎಳೆಯಿತು. ಪ್ರತಿ ವಿಚಾರಣೆಗೂ ಲಂಡನ್‌ನ ನೂರಾರು ಜನರು ನೆರೆಯುತ್ತಿದ್ದರು. ಲಿಲ್‌ಬರ್ನ್ ಮತ್ತು ಸಂಗಡಿಗರು ಮಂಡಿಸುತ್ತಿದ್ದ ವಾದಗಳು ಬಹಳ ಜನಪ್ರಿಯತೆ ಪಡೆದವು. ಅವರು ಮಂಡಿಸುತ್ತಿದ್ದ ವಾದಗಳನ್ನು ನೆರೆದಿದ್ದ ಜನ ಚಪ್ಪಾಳೆ, ಶ್ಲಾಘನೆಯ ಕೂಗುಗಳಿಂದ ಮೆಚ್ಚುಗೆ ವ್ಯಕ್ತ ಪಡಿಸುತ್ತಿದ್ದರು.

ಈ ಅವಧಿಯಲ್ಲೂ ಈ ನಾಯಕರು ಹಲವು ಕಿರುಪುಸ್ತಿಕೆಗಳನ್ನು ಪ್ರಕಟಿಸಿದರು. ಜನರನ್ನು ಪ್ರಜ್ಞಾವಂತರಾಗಿಸಲು ನಿರಂತರವಾಗಿ ಪ್ರಯತ್ನಿಸಿದರು.

ಒಂದು ಕಡೆ ಲೆವಲರ್ಸ್ ನಾಯಕರ ಜನಪ್ರಿಯತೆ, ಅವರ ವಾದಗಳ ಗಟ್ಟಿತನದ ಜೊತೆಗೆ ಸೈನಿಕ ಲೆವಲರ್ಸ್‌ಗಳ ದಮನ ಈ ಎಲ್ಲ ಅಂಶಗಳ ಕಾರಣ ಈ ನಾಯಕರ ಬಿಡುಗಡೆ ಮಾಡಲಾಯಿತು.

ಈ ಆಜ್ಞೆ ಹೊರಬಿದ್ದ ದಿನ ಕೋರ್ಟ್‌ನಲ್ಲಿ ಅರ್ಧ ಗಂಟೆ ಕಾಲ ಚಪ್ಪಾಳೆಗಳು ಕೂಗಾಟಗಳು ಇವರ ಬಿಡುಗಡೆಯಾದ ಜನರ ಸಂತೋಷವನ್ನು ವ್ಯಕ್ತಪಡಿಸಿದರು. ಲಂಡನ್‌ನ ಬೀದಿ ಬೀದಿಗಳಲ್ಲಿ ಸಂಭ್ರಮ ಆಚರಿಸಲಾಯಿತು. ಇದು ಲೆವಲರ್ಸ್‌ಗಳ ವಿಚಾರಗಳ ಜನಪ್ರಿಯತೆಯ ಸೂಚಕವಾಯಿತು.

ಈ ಘಟನೆಗಳ ನಂತರ ಲೆವಲರ್ಸ್ ನಾಯಕರು ವಿವಿಧ ವೃತ್ತಿಗಳಲ್ಲಿ ತೊಡಗಿದರು.

ನೈಸ್ ಯೋಜನೆಯಲ್ಲಿ ಸ್ವಾಧೀನಪಡಿಸಿಕೊಂಡ 111 ಎಕರೆ ಜಮೀನು ರೈತರಿಗೆ ವಾಪಾಸು. ಸರ್ಕಾರ ಪಾಠ ಕಲಿಯಲಿ

ಈ ವಾರ

ಎಸ್.ವೈ.ಗುರುಶಾಂತ್

ದೇವನಹಳ್ಳಿಯ ಚನ್ನರಾಯಪಟ್ಟಣದ ಭೂಸ್ವಾಧೀನ ವಿರೋಧಿ ಹೋರಾಟ ರಾಜಧಾನಿಯಲ್ಲಿ ಧೃಡ ಸಂಕಲ್ಪದೊಂದಿಗೆ ಮುಂದುವರಿದಿದೆ. ಕಳೆದ ವಾರ ನಿಯೋಗದೊಂದಿಗೆ ಮಾತುಕತೆ ನಡೆಸಿದ್ದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಪರಿಹಾರ ಕಂಡುಕೊಳ್ಳುವ ಸಾಧ್ಯತೆಗಳಿಗಾಗಿ ಜುಲೈ 15ಕ್ಕೆ ಮತ್ತೊಂದು ಸುತ್ತಿನ ಮಾತುಕತೆ ನಿಗದಿಮಾಡಿದ್ದಾರೆ. ಸಾವಿರಾರು ದಿನಗಳಿಂದ ಸತ್ಯಾಗ್ರಹ ಮಾಡುತ್ತಿರುವ ರೈತರು ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿ ಇನ್ನು ಒಂದು ವಾರ ಹೆಚ್ಚಿಗೆ ಕಾಯಲು ಸಿದ್ಧರಿದ್ದಾರೆ.

ಆದರೆ ಸರ್ಕಾರದ ಮಟ್ಟದಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲರು ನಡೆಸಿದ ಪತ್ರಿಕಾಗೋಷ್ಠಿ, ಹೋರಾಟದ ಕಣದಲ್ಲಿರುವವರ ಮೇಲೆ, ಬೆಂಬಲಿಸಿದ ಪ್ರಕಾಶ್ ರೈ ಮೇಲೆ ವಿಕೃತ ಟೀಕಾ ಪ್ರಹಾರ, ಕೇಂದ್ರ ರಕ್ಷಣಾ ಸಚಿವರಿಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ತಮ್ಮ ಉದ್ದೇಶಿತ ರಕ್ಷಣಾ ಕಾರಿಡಾರ್ ಮಂಜೂರಿಗೆ ಮನವಿ ಸಲ್ಲಿಕೆ, ಇತ್ಯಾದಿಗಳ ಮೂಲಕ ಮಾತುಕತೆಗೂ ಮೊದಲು ಒಂದು ಸ್ಪಷ್ಟ ಸಂದೇಶ ನೀಡಿದ್ದಾರೆ. ರಾಜ್ಯದ ಅಭಿವೃದ್ಧಿಗೆ ರೈತರ ಬೇಡಿಕೆಗಳು ಮತ್ತು ಈ ಚಳುವಳಿ ಮಾರಕ ಎಂದು ಬಿಂಬಿಸುವ ಪೂರ್ವೋಪಾದಿ ಸಿದ್ಧತೆಯನ್ನು ಮಾಡಿ ಮುಗಿಸಿದ್ದಾರೆ.

ಅಂತಿಮ ಅಧಿಸೂಚನೆ ಹೊರಡಿಸಿರುವ ಕಾರಣದಿಂದ ನಿರ್ಧಾರದಿಂದ ಹಿಂದೆ ಸರಿಯುವುದು ಆಗದು, ಅದಕ್ಕೆ ಕಾನೂನಿನ ತೊಡಕುಗಳಿವೆ ಎಂಬ ಮುಖ್ಯಮಂತ್ರಿ ಮತ್ತು ಕೈಗಾರಿಕಾ ಮಂತ್ರಿಗಳ ಹೇಳಿಕೆಗಳಿಗೆ ಹೆಚ್ಚಿನ ಅರ್ಥವಿಲ್ಲ. ಮತ್ತು ಸತ್ಯಾಂಶ ಇಲ್ಲ. ಈ ಬಗ್ಗೆ ಸಾರ್ವಜನಿಕವಾಗಿಯೇ ಮಾತನಾಡಿದ ಸುಪ್ರಿಂಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡರು, ಆ ಎಲ್ಲಾ ತೊಡಕುಗಳನ್ನು ನಿವಾರಿಸುವ ಕಾನೂನಾತ್ಮಕ ಕ್ರಮಗಳ ಬಗ್ಗೆ ನಿರ್ದಿಷ್ಟ ಪರಿಹಾರಾತ್ಮಕ ಸಲಹೆಗಳನ್ನು ನೀಡುವುದಾಗಿ ಹೇಳಿದ್ದಾರೆ. ಆದರೆ ಸರ್ಕಾರ ಕೇಳಿಸಿಯೇ ಇಲ್ಲ ಎಂಬಂತೆ ತನ್ನದೇ ಶಂಖ ಊದುತ್ತಿದೆ!

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಎಂಬುದು ಸರ್ಕಾರದ ಅಧೀನ ಸಂಸ್ಥೆಯೇ ಹೊರತು, ಸರ್ಕಾರವನ್ನೇ ಸ್ವಾಧೀನಕ್ಕೆ ತೆಗೆದುಕೊಂಡ ಸಂಸ್ಥೆ ಅಲ್ಲ ಎನ್ನುವ ಪ್ರಾಥಮಿಕ ಪಾಠವನ್ನು ಹೇಳಿಸಿಕೊಳ್ಳಬೇಕಾದ ಸ್ಥಿತಿಯಲ್ಲಿ ಸರ್ಕಾರ ಇರುವಂತೆ ಕಾಣುತ್ತಿದೆ. ಉದಾರೀಕರಣದ ಹುಚ್ಚಾಟದಲ್ಲಿ ತಿಂದುಂಡು ತೇಗುವ ಮನೆಮುರುಕ ಕೆಲಸಕ್ಕೆ ಈ ಕೆಐಎಡಿಬಿ ಎಂಬ ಸಂಸ್ಥೆ ಸೃಷ್ಟಿಸಿರುವುದಕ್ಕೆ ಈ ಹಲವು ದಶಕಗಳಲ್ಲಿನ ಅನುಭವವು ಸ್ಪಷ್ಟ ನಿದರ್ಶನ ನೀಡಿದೆ. ಕೈಗಾರಿಕೆ ಅಭಿವೃದ್ಧಿಗಿಂತ ಹಣವುಳ್ಳವರ, ಮುಖ್ಯವಾಗಿ ಕಾರ್ಪೋರೇಟ್ ಕಂಪನಿಗಳು, ರಿಯಲ್ ಎಸ್ಟೇಟ್ ದಂಧೆಖೋರರ ಮನಸೋ ಇಚ್ಛೆ ಲೂಟಿಗೆ ಕಟಿಬದ್ಧವಾಗಿ ಕೆಲಸ ಮಾಡುತ್ತಿದೆ. ರಾಜ್ಯದಲ್ಲಿ ಈ ಸಂಸ್ಥೆ ಉದ್ಯಮಕ್ಕೆಂದು ರೈತರಿಂದ ಸ್ವಾಧೀನಪಡಿಸಿಕೊಂಡ ಒಟ್ಟು ಜಮೀನಿನಲ್ಲಿ ಎಷ್ಟು ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ, ಎಷ್ಟು ಲಕ್ಷ ಎಕರೆ ಉದ್ಯಮಿಗಳಿಗೆ ಹಂಚಿ ಕೈಗಾರಿಕೆಗಳೇ ಆರಂಭಗೊಳ್ಳದೇ ಜಾಲಿ ಬೇಲಿ ಬೆಳೆಸಿದೆ, ತಾನೇ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿದೆ, ರೈತರಿಗೆ ಪ್ರತಿ ಯೋಜನೆಯಲ್ಲೂ ಎಷ್ಟೊಂದು ಮಹಾ ವಂಚನೆ, ಮೋಸ ಎಸಗಲಾಗಿದೆ ಎಂಬುದು ಎಲ್ಲೆಡೆಗಳಲ್ಲಿ ಕಾಣುವಂತಹುದೇ.

ಚನ್ನರಾಯಪಟ್ಟಣದಂತೆ, ಈಗಲೂ ಸಾವಿರಾರು ದಿನಗಳಿಂದ ಬಳ್ಳಾರಿಯ ಕುಡಿತಿನಿ ಪ್ರದೇಶದಲ್ಲಿನ ವಂಚನೆಯ ಭೂಸ್ವಾಧೀನ, ಬೆಲೆ ನಿಗದಿಯಲ್ಲಿ ಉದ್ಯಮಿಗಳ ಮಹಾ ಮೋಸದ ವಿರುದ್ಧ 940 ದಿನಗಳಿಂದ ನಡೆದಿರುವ ರೈತರ ಸತ್ಯಾಗ್ರಹ ಜೀವಂತ ಸಾಕ್ಷಿ.

ಕರ್ನಾಟಕದಲ್ಲಿ ಕೆಐಡಿಬಿ ಮೂಲಕ ಸರ್ಕಾರದಲ್ಲಿರುವ ಮತ್ತು ಕಾರ್ಪೋರೇಟ್ ಉದ್ಯಮಿಗಳು ನಡೆಸಿದ ಭಾನಗಡಿ ಪ್ರಕರಣಗಳು ಒಂದೆರಡಲ್ಲ. ಈ ಲೂಟಿ, ದೌರ್ಜನ್ಯಗಳಿಂದ ನಲುಗಿದ, ಬೇಸತ್ತ ಜನ ನ್ಯಾಯಾಲಯದ ಕದ ತಟ್ಟಿದಾಗ ಕೆಲವು ಪ್ರಕರಣಗಳಲ್ಲಿ ದೊರೆತ ನ್ಯಾಯಾಲಯದ ತೀರ್ಪುಗಳಿಂದ ಸರ್ಕಾರ ಪಾಠ ಕಲಿಯಬೇಕಿತ್ತು. ಆದರೆ ಕಲಿಯಲಿಲ್ಲ. ನ್ಯಾಯಾಲಯದ ಕಪಾಳ ಮೋಕ್ಷವೂ ನಿಂತಿಲ್ಲ.

ಫಲವತ್ತಾದ ಕೃಷಿ ಜಮೀನಿನ ಬಲವಂತದ ಭೂಸ್ವಾಧೀನ, ಸರ್ಕಾರ, ಆಳುವ ರಾಜಕಾರಣಿಗಳು, ಉದ್ಯಮಿಗಳು, ಅಧಿಕಾರಶಾಹಿ ವಂಚನೆಗಳ ವಿರುದ್ಧ ಹೋರಾಟ ಹೊಸ ಮಜಲಿನಲ್ಲಿ ನಡೆದಿರುವಾಗ, ಸರ್ಕಾರದ ಕುಂಟು ನೆವದ ಸಬೂಬು, ಮೊಂಡು ಹಠ ಹಿಡಿದಿರುವಾಗ 'ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ'ಯಲ್ಲಿ (ನೈಸ್) 111 ಕಿ.ಮೀ. ರಸ್ತೆ ನಿರ್ಮಾಣಕ್ಕೆಂದು ಸ್ವಾಧೀನ ಪಡಿಸಿಕೊಂಡಿದ್ದ ಸುಮಾರು 300 ಎಕರೆ ಭೂಸ್ವಾಧೀನ ಪ್ರಕರಣದಲ್ಲಿ ಇದೇ ಕೆಐಎಡಿಬಿ ಗೆ ಕರ್ನಾಟಕ ನ್ಯಾಯಾಲಯ ತಪರಾಕಿ ಕೊಟ್ಟಿದೆ. ಯಾವ ಉದ್ದೇಶಕ್ಕೆಂದು ವಶಪಡಿಸಿಕೊಳ್ಳಲಾಗಿದೆಯೋ ಆ ಉದ್ದೇಶಕ್ಕೆ ಭೂಮಿಯ ಸದ್ಬಳಕೆ ಆಗದೇ ಇರುವುದರಿಂದ, ಮತ್ತು 23 ವರ್ಷಗಳು ಕಳೆದರೂ ನಿಗದಿತ ಕಾಲ ಮಿತಿಯಲ್ಲಿ ಬಳಸದೇ ಇರುವುದರಿಂದ ಇಡೀ ಭೂಸ್ವಾಧೀನ ಪ್ರಕ್ರಿಯೆಯನ್ನೇ ನ್ಯಾಯಾಲಯದ ವಿಭಾಗೀಯ ಪೀಠ ರದ್ದುಮಾಡಿದೆ. ಎರಡು ದಶಕಗಳಾದರೂ ಉದ್ದೇಶಿತ ಯೋಜನೆ ಜಾರಿಗೊಳಿಸದೇ ನಿಷ್ಕ್ರಿಯತೆ ತೋರಿದ ಸರ್ಕಾರದ ವೈಫಲ್ಯವನ್ನು ಕಟುವಾಗಿ ಟೀಕಿಸಿದೆ. ಇದರಿಂದಾಗಿ ಕೃಷಿಯನ್ನೇ ನಂಬಿ ಬದುಕು ಕಟ್ಟಿಕೊಂಡಿದ್ದ ರೈತರ ಜೀವನವನ್ನು ಅಸ್ತವ್ಯಸ್ತಗೊಳಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದೆ. ಇಂತಹ ಪ್ರಕರಣಗಳಲ್ಲಿ ಸುಪ್ರಿಂ ಕೋರ್ಟ್ ನೀಡಿದ ಹಲವು ತೀರ್ಪುಗಳನ್ನೂ ಉದ್ಧರಿಸಿದೆ. ಅಂತಿಮವಾಗಿ ಭೂಸ್ವಾಧೀನವನ್ನು ರದ್ದು ಪಡಿಸಿದ ನ್ಯಾಯಾಲಯ ಅದನ್ನು ಭೂಮಿ ಕಳೆದುಕೊಂಡಿದ್ದ 50 ರೈತರಿಗೆ ಮರಳಿಸಿದೆ. ಕೆಐಡಿಬಿಯ ದುಷ್ಟತನ ಎಷ್ಟು ಮೀರಿದೆ ಎಂದರೆ, ಈ ರೈತರಿಗೆ ನೀಡಬೇಕಾಗಿದ್ದ ಪರಿಹಾರಧನವನ್ನೂ ನೀಡರಲಿಲ್ಲ ಎಂಬುದು.

ಭೂಸ್ವಾಧೀನ ಮಾಡಿಕೊಂಡ ಜಮೀನಿನ ನೋಟಿಫಿಕೇಷನ್ ರದ್ದುಮಾಡಲಾಗದು ಎಂದು ನೆಪ ಹೇಳುವ ಸರ್ಕಾರ, ಈ ಎಲ್ಲ ನಿದರ್ಶನಗಳಿಂದ ಕನಿಷ್ಟ ಪಾಠ ಕಲಿಯಬಲ್ಲದೇ? ರೈತರ ಇಚ್ಛೆಗೆ ವಿರುದ್ಧವಾಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವಂತಿಲ್ಲ ಎಂಬ ಕಾನೂನಿನ ಅರಿವಾದರೂ ಸರ್ಕಾರಕ್ಕೆ ಇದೆಯೇ? ದೇವನಹಳ್ಳಿಯ ರೈತರು ಯೋಜಿತ ಸ್ವಾಧೀನಕ್ಕೆ ಆಕ್ಷೇಪಿಸಿ ಮೂರು ವರ್ಷಗಳಿಂದ ಚಳುವಳಿ ನಡೆಸುತ್ತಿರುವಾಗಲೇ, ಮಾತುಕತೆ ಜಾರಿಯಲ್ಲಿ ಇರುವಾಗಲೇ ಅಂತಿಮ ಅಧಿಸೂಚನೆ ಹೊರಡಿಸಿದ್ದು ಸಿದ್ದು ಸರ್ಕಾರದ ದೌರ್ಜನ್ಯ, ದುರಂಹಕಾರ ಅಲ್ಲವೇ? ರಕ್ಷಣಾ ಉದ್ಯಮಕ್ಕೆ ಬೇಕಾಗಿರುವ ಜಮೀನೆಷ್ಟು? ಅದಕ್ಕೆ ಕೊಡಲು ಈಗಲೂ ಸರ್ಕಾರದ ಬಳಿ ಜಮೀನಿದೆ. ಅದನ್ನೇಕೆ ಕೊಡಬಾರದು?

2013ರಲ್ಲಿ ಯುಪಿಎ ಸರ್ಕಾರ ತಂದಿದ್ದ ಭೂಸ್ವಾಧೀನ ಕಾಯ್ದೆಗೆ ಮೋದಿ ಸರ್ಕಾರ, ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ (ಕಾಂಗ್ರೆಸ್–ಜೆಡಿಎಸ್ ಸರ್ಕಾರ) ತಂದ ತಿದ್ದುಪಡಿಗಳನ್ನು ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ತಿದ್ದುಪಡಿ ಮಾಡುವುದಾಗಲೀ, ರದ್ದು ಪಡಿಸುವುದಾಗಲೀ ಮಾಡದೇ ಇರುವುದರಲ್ಲಿ ಕಾರ್ಪೋರೇಟ್ ಕಂಪನಿಗಳು, ಭೂ ದಂಧೆಖೋರರು, ಮಾಫಿಯಾಗಳ ಹಿತಾಸಕ್ತಿ ಇದೆ. ಈ ವಿಷಯದಲ್ಲಿ ಕಾಂಗ್ರೆಸ್, ಬಿಜೆಪಿ. ಜೆಡಿಎಸ್ ಪಕ್ಷಗಳ ನೀತಿಗಳು ಒಂದೇ ಆಗಿವೆ. ಆ ಪಕ್ಷಗಳಿಗಿಂತ ಭಿನ್ನವಾದ ನೀತಿ, ಆಡಳಿತವನ್ನು ನೀಡದೇ ಇರುವುದರಿಂದ ಜನರ ಅತೃಪ್ತಿ ಹೆಚ್ಚಾಗುತ್ತಿರುವುದನ್ನು ಕಾಂಗ್ರೆಸ್ ಅರ್ಥ ಮಾಡಿಕೊಳ್ಳಬೇಕು. ಜುಲೈ 15ರಂದಿನ ಸಭೆಯಲ್ಲಿ ಸೂಕ್ತ ನಿರ್ಧಾರ ಪ್ರಕಟಿಸಬೇಕು. ಈ ಬೇಡಿಕೆ ಒಪ್ಪಿದರೆ ಬೇರೆ ಕಡೆ ರೈತರು ಅಂತಹುದೇ ಬೇಡಿಕೆ ಮಂಡಿಸುತ್ತಾರೆ ಎನ್ನುವುದು ನೆಪ ಅಷ್ಟೇ. ಅಂದರೆ ಹೇಗಾದರೂ, ಏನಾದರೂ ಮಾಡಿ ರೈತರಿಂದ ಭೂಮಿ ಕಿತ್ತಿಕೊಳ್ಳುವುದು ಹಕ್ಕು ಎನ್ನುವ ನಿರ್ಧಾರವೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಸಂಬದ್ಧ ಎನ್ನುವುದನ್ನು ಅರಿಯಬೇಕು.

ನೈಸ್ ಪ್ರಕರಣದಲ್ಲಿನ ನ್ಯಾಯಾಲಯದ ತೀರ್ಪಿನಿಂದ ಕಾಂಗ್ರೆಸ್ ಸರ್ಕಾರ ಪಾಠಕಲಿಯಲು ಇನ್ನೂ ಸಮಯ ಇದೆ. ಕಲಿಯುವುದೇ?

ಪಾಳೆಯಗಾರಿ ದರ್ಪದ ಅಧಿಕಾರಶಾಹಿ:

ಮಂಡ್ಯ ಜಿಲ್ಲೆಯನ್ನು ಹಾಳುಮಾಡುತ್ತಿರುವ ಸಿಇಓ ರವರನ್ನು ಜಿಲ್ಲೆಯಿಂದ ಹೊರಗೆ ಹಾಕಿ

ನರಗುಂದ ರೈತ ಬಂಡಾಯಕ್ಕೆ ಕಾರಣವಾಗಿದ್ದು, ಗುಂಡೂರಾವ್ ಮೂಲಕ ಕರ್ನಾಟಕದಲ್ಲಿ ಕಾಂಗ್ರೆಸ್ 2947–83 ರವರೆಗಿನ ನಿರಂತರ ಆಡಳಿತ ಕೊನೆಗೊಂಡು, ಮೊತ್ತಮೊದಲ ಕಾಂಗ್ರೆಸ್ಸೇತರ ಸರಕಾರ ಅಧಿಕಾರಕ್ಕೆ ಬಂದದ್ದು.

ಧಾರವಾಡದಲ್ಲಿ ಒಬ್ಬ ಜಿಲ್ಲಾಧಿಕಾರಿಣಿ ಇದ್ದರು. ಆಗ ಜಿಲ್ಲಾ ಪಂಚಾಯತ್ ಇಲ್ಲದ ಕಾಲ. ಆದ್ದರಿಂದ ಆಕೆಯೇ ಈಗಿನ ಸಿಇಒ ರೀತಿಯ ಹೊಣೆಗಾರಿಕೆಯೂ ಇದ್ದವರು. ನರಗುಂದ, ನವಲಗುಂದದಲ್ಲಿ ರೈತ ಬಂಡಾಯ ಭುಗಿಲೇಳಲು ಈ ಅಧಿಕಾರಿಣಿಯ ದರ್ಪ, ಜನರ ಸಮಸ್ಯೆಗಳನ್ನು ತಾಳ್ಮೆಯಿಂದ ಆಲಿಸದ, ಅವುಗಳ ಕಾರಣವನ್ನು ತಿಳಿದು ಪರಿಹರಿಸುವ ಮನಸ್ಥಿತಿ ಇಲ್ಲದವರು ಆ ಅಧಿಕಾರಿಣಿ. ಆ ಕಾಲದಲ್ಲಿ ನರಗುಂದದಲ್ಲಿ ಅಧಿಕಾರಿಯಾಗಿದ್ದ ನಾನು ಆಕೆಯ ಆಟಾಟೋಪವನ್ನು ಕಣ್ಣಾರೆ ಕಂಡವನು. ರೈತರ ಸಮಸ್ಯೆಗಳನ್ನು ಮನವರಿಕೆ ಮಾಡಲು ಪ್ರಯತ್ನಿಸಿದವನು. ಆರು ತಿಂಗಳುಗಳಿಂದ ನಡೆಯುತ್ತಿದ್ದ ರೈತ ಹೋರಾಟವನ್ನು ಕಾಲ ಕಸದಂತೆ ಕಡೆಗಣಿಸಿ, ತಹಸೀಲ್ದಾರರುಗಳಿಗೆ ತನ್ನಂತೆಯೇ ದರ್ಪದಿಂದ ವರ್ತಿಸಲು ಆದೇಶ ನೀಡಿ, ಆ ಪ್ರದೇಶದ ರೈತ ಹೋರಾಟವು ರೈತ ಬಂಡಾಯವಾಗಿ ಪರಿವರ್ತನೆಯಾಗಲು, ಕೊನೆಗೆ ಗುಂಡೂರಾವ್ ಆಡಳಿತ ಮಾತ್ರವಲ್ಲ, ನಿರಂತರ ಕಾಂಗ್ರೆಸ್ ಆಡಳಿತವೇ ಕೊನೆಗೊಳ್ಳಲು ಕಾರಣವಾದರು. ಮಂಡ್ಯದಲ್ಲಿ ಈಗ ಜಿಲ್ಲಾ ಪಂಚಾಯತ್ ಸಿಇಓ ಆಗಿರುವ ಒಬ್ಬ ಅಧಿಕಾರಿಣಿ ಇಂತಹುದೇ ದರ್ಪ ತೋರಿಸಿದ್ದಾರೆ. ಉದ್ಯೋಗ ಖಾತರಿ ಯೋಜನೆ ಕೃಷಿ ಕೂಲಿಕಾರರ ಸ್ನೇಹಿ ಕಾನೂನು ಮತ್ತು ಯೋಜನೆ. ಅದರಲ್ಲಿ ಮಹಿಳಾ ಕೂಲಿಕಾರರೇ ಅತಿ ಹೆಚ್ಚು ಪ್ರಯೋಜನ ಪಡೆಯುವವರು. ತಮ್ಮ ಮಕ್ಕಳಿಗೆ ಒಂದಷ್ಟು ಊಟ, ವಿದ್ಯಾಭ್ಯಾಸ ಕೊಡಿಸಲು ನೆರವಾಗಿದೆ.

ಇಂತಹ ಜನಪರ ಯೋಜನೆ ವಿಶ್ವಮಟ್ಟದಲ್ಲಿ ಪ್ರಶಂಸೆ ಪಡೆದಿದೆ. ಇದನ್ನು ಜಾರಿ ಮಾಡಲು ಹೊಣೆ ಹೊಂದಿರುವ ಅಧಿಕಾರಿ, ಅಧಿಕಾರಶಾಹಿ ಆಕಾಶದಲ್ಲಿ ತೇಲಾಡದೆ, ನೆಲಕ್ಕಿಳಿದು ಕೂಲಿಕಾರರ ಬವಣೆ ಮತ್ತು ಯೋಜನೆಯ ಉದ್ದೇಶ ಅರಿತು ಕೆಲಸ ಮಾಡಬೇಕು. ಅಂತಹ ಹಲವು ಜನಪರ ಅಧಿಕಾರಿಗಳನ್ನು ಕರ್ನಾಟಕ ಕಂಡಿದೆ. ಜನರು ಅಂತವರನ್ನು ಮೆರೆಸಿದ್ದಾರೆ.

ಆದರೆ ಮಂಡ್ಯ ಜಿಲ್ಲೆಯ ಸಿಇಓ ಆಗಿರುವ ಈ ಅಧಿಕಾರಿಣಿ ತಾನು ಜಿಲ್ಲೆಯ ಸಿಇಓ ಆಗಿ ಅಧಿಕಾರ ವಹಿಸಿಕೊಂಡಂದಿನಿಂದ ಈ ಯೋಜನೆಯ ಮೂಲಕ ಮಹಿಳಾ ಕೂಲಿಕಾರರಿಗೆ ದಕ್ಕಬೇಕಾದ ಹಕ್ಕಿನ ಈ ಯೋಜನೆ ಅಡಿಯಲ್ಲಿ ವಿವಿಧ ಪಂಚಾಯತ್‌ಗಳ ಪ್ರಸ್ತಾವಗಳಿಗೆ ಅನುಮತಿ ನೀಡದೆ, ಕೂಲಿಕಾರರಿಗೆ ಕೆಲಸ ಮತ್ತು ಕೂಲಿ ವಂಚನೆಯಾಗುವಂತೆ ಮಾಡಿದ್ದಾರೆ. ಈ ನಾಲ್ಕು ತಿಂಗಳುಗಳೇ ಕೃಷಿ ಕೂಲಿಕಾರರಿಗೆ ಕೃಷಿ ಕೆಲಸಗಳಿಲ್ಲದ ಕಾಲ. ಕೂಲಿಕಾರರು ಕೆಲಸವಿಲ್ಲದೆ ಕೂಲಿಗಾಗಿ ಪರದಾಡುವ ಕಾಲ. ಈ ಯೋಜನೆಯ ಜಾರಿಗೆ ಅಮೂಲ್ಯ ಕಾಲ. ಅಂತಹ ನಾಲ್ಕು ತಿಂಗಳುಗಳು ವ್ಯರ್ಥವಾಗಿ ಹೋಗಿವೆ.

ಕೆಲಸವಿಲ್ಲ, ಕೆಲಸ ಕೊಡಿ ಎಂದು ಅರ್ಜಿ ಹಾಕಿದ ಎಲ್ಲ ಕೂಲಿಕಾರರಿಗೂ 15 ದಿನಗಳ ಒಳಗೆ ಕೆಲಸ ಕೊಡಲೇಬೇಕೆಂಬ ನಿಯಮ ಇರುವ ಈ ಕಾನೂನಿಡಿ ಅರ್ಜಿ ಹಾಕಿದ ಕೂಲಿಕಾರರಲ್ಲಿ ಮೂರನೇ ಎರಡು ಭಾಗದ ಕೂಲಿಕಾರರಿಗೆ ಕೆಲಸ ಸಿಕ್ಕಿಲ್ಲ. ಹೀಗೆ ಭಾರತದ ಅತ್ಯಂತ ಜನಪರ ಕಾಯಿದೆ, ಸಂವಿಧಾನದಲ್ಲಿ ಇರುವ ಉದ್ಯೋಗದ ಹಕ್ಕನ್ನು ಜಾರಿಮಾಡಲು ಇರುವ ಏಕಮಾತ್ರ ಕಾಯಿದೆಯ ಜಾರಿಯನ್ನು ಹಾಳು ಮಾಡಿದ್ದಾರೆ. ಇದು ಕೇವಲ ಕೂಲಿಕಾರರಿಗೆ ಕೆಲಸದ ಪ್ರಶ್ನೆ ಮಾತ್ರವಲ್ಲ, ಗ್ರಾಮೀಣ ಪ್ರದೇಶದ ಸಣ್ಣ ಸಣ್ಣ ತುರ್ತು ಅಭಿವೃದ್ಧಿ ಕಾರ್ಯಗಳೂ ಇದರಲ್ಲಿ ಒಳಗೊಂಡಿದೆ.

ಅದರ ಬಗ್ಗೆ ಸಾವಿರಾರು ಕೂಲಿಕಾರರು ಜಿಲ್ಲಾ ಪಂಚಾಯತ್ ಕಛೇರಿಗೆ ಹೋದರೆ ಗಂಟೆಗಟ್ಟಲೆ ಕಾಯಿಸಿ, ಬಹಳ ಒತ್ತಾಯಮಾಡಿದ ಮೇಲೆ ಬಂದ ಅಧಿಕಾರಿ, ಕೂಲಿಕಾರರುಗಳ ಅಹವಾಲನ್ನು ಕೇಳದೆ, ಅದಕ್ಕೆ –ಪುಟ 5 ಕ್ಕೆ

ಧರ್ಮಸ್ಥಳದಲ್ಲಿ ನೂರಾರು ಶವಗಳ ಸಮಾಧಿ ಪ್ರಕರಣ ನಿಷ್ಪಕ್ಷಪಾತ ತನಿಖೆ ನಡೆಸಿ, ದೂರುದಾರ ಹಾಗು ನ್ಯಾಯವಾದಿಗಳಿಗೆ ರಕ್ಷಣೆ ಒದಗಿಸಿ: ಸಿಪಿಐ(ಎಂ) ಆಗ್ರಹ

ಧರ್ಮಸ್ಥಳದಲ್ಲಿ ದಶಕದ ಹಿಂದೆ ಕೊಲೆಯಾದ ಮತ್ತು ಅತ್ಯಾಚಾರಕ್ಕೊಳಗಾದ ಅನೇಕ ಶವಗಳನ್ನು ಸಮಾಧಿ ಮಾಡಿರುವುದಾಗಿ ಹೇಳಿಕೊಂಡಿದ್ದ ಮುಖವಾಡ ಧರಿಸಿದ ವ್ಯಕ್ತಿ ಜುಲೈ 11, 2025 ರಂದು ಬೆಳ್ತಂಗಡಿ ನ್ಯಾಯಾಲಯದ ಮುಂದೆ ಹಾಜರಾಗಿ ತನ್ನ ಹೇಳಿಕೆಯನ್ನು ದಾಖಲಿಸಿದರು. ಆ ವ್ಯಕ್ತಿ ಸ್ವತಃ ಹೊರತೆಗೆದಿದ್ದಾರೆಂದು ಹೇಳಲಾದ ಶವಗಳ ಕೆಲವು ಅಸ್ಥಿಪಂಜರ ಅವಶೇಷಗಳನ್ನು, ದೂರುದಾರರನ್ನು ಪ್ರತಿನಿಧಿಸುವ ವಕೀಲರು ಮತ್ತು 'ಪಂಚ್' ಸಾಕ್ಷಿಗಳ ಮುಂದೆ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ವರದಿಯಾಗಿದೆ. ಈ ದೂರಿನ ಕುರಿತು ರಾಜ್ಯ ಸರಕಾರ ನಿಷ್ಪಕ್ಷಪಾತ ತನಿಖೆಗೆ ಕ್ರಮ ಕೈಗೊಳ್ಳಬೇಕು, ದೂರುದಾರ ಹಾಗು ಆತನ ಜೊತೆಗಿರುವ ನ್ಯಾಯವಾದಿಗಳಿಗೆ ಭದ್ರತೆ ಒದಗಿಸಬೇಕು ಎಂದು ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಮುಖ್ಯಮಂತ್ರಿಗಳನ್ನು ಆಗ್ರಹಿಸಿದೆ. ಆ ವ್ಯಕ್ತಿ ನೀಡಿದ ದೂರಿನಲ್ಲೇನಿದೆ?

"ದಶಕಗಳ ಅವಧಿಯಲ್ಲಿ ಧರ್ಮಸ್ಥಳದಲ್ಲಿ ಹತ್ಯೆಗಳು, ಅತ್ಯಾಚಾರಗಳು ಸರಣಿಯಾಗಿ ನಡೆದಿವೆ, ನನ್ನನ್ನು ಬೆದರಿಸಿ, ನನ್ನಿಂದಲೇ ಇಂತಹ ಅನಾಥ ಶವಗಳನ್ನು ಹೂತು ಹಾಕಿಸುವ, ವಿಲೇವಾರಿ ಮಾಡಿಸುವ ಕಾರ್ಯ ನಡೆದಿತ್ತು. ನಾನು ಆ ಸಂದರ್ಭದಲ್ಲಿ ಧರ್ಮಸ್ಥಳ ದೇವಸ್ಥಾನದ ಆಡಳಿತದಡಿ ನೈರ್ಮಲ್ಯ ಕಾರ್ಮಿಕನಾಗಿದ್ದೆ. ನನಗೆ ಹಾಗು ಕುಟುಂಬಕ್ಕೆ ಪೊಲೀಸ್ ಭದ್ರತೆ ಒದಗಿಸಿದರೆ, ಎಲ್ಲವನ್ನೂ ಸಾಕ್ಷ್ಯ ಸಮೇತ ಬಯಲುಗೊಳಿಸುವೆ" ಎಂದು ಗುರುತು ಮರೆಮಾಚಲ್ಪಟ್ಟ ವ್ಯಕ್ತಿಯೋರ್ವ ವಕೀಲರ ಮೂಲಕ ದೂರು ದಾಖಲಿಸಿದ್ದರು. ಮೃತರ ಮೃತದೇಹಗಳನ್ನು ಹೊರತೆಗೆದು ತನಿಖೆ ನಡೆಸುವಂತೆ ಪೊಲೀಸರನ್ನು ಕೇಳಿಕೊಂಡಿದ್ದ ದೂರುದಾರರು, ಪೊಲೀಸ್ ರಕ್ಷಣೆ ಕೋರಿದ್ದರು. ತಾವು ಹೂಳಿರುವುದಾಗಿ ಹೇಳಿಕೊಳ್ಳುವ ಶವಗಳನ್ನು ಪೊಲೀಸರಿಗೆ ತೋರಿಸುವುದಾಗಿಯೂ ಅವರು ಹೇಳಿದರು.

ಜಿಲ್ಲೆಯ ಸಕ್ಷಮ ಪ್ರಾಧಿಕಾರವು ಜುಲೈ 10, 2025ರಂದು ದೂರುದಾರರ ರಕ್ಷಣೆಯನ್ನು ಅನುಮೋದಿಸಿದೆ. ನ್ಯಾಯಾಲಯದ ಅನುಮತಿ ಪಡೆದ ನಂತರ, ಧರ್ಮಸ್ಥಳ ಪೊಲೀಸರು ಜುಲೈ 4 ರಂದು ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 211 (ಎ) ಅಡಿಯಲ್ಲಿ ಅಪರಾಧ ಪ್ರಕರಣ ದಾಖಲಿಸಿದರು. ಜುಲೈ 11, 2025 ರಂದು ಮುಖವಾಡ ಧರಿಸಿದ ಆ ವ್ಯಕ್ತಿ ಬೆಳ್ತಂಗಡಿ ನ್ಯಾಯಾಲಯದ ಮುಂದೆ ಹಾಜರಾಗಿ ಮ್ಯಾಜಿಸ್ಟ್ರೇಟ್ ಮುಂದೆ ಹೇಳಿಕೆ ನೀಡಿದರು. ಆ ವ್ಯಕ್ತಿ ಸ್ವತಃ ಹೊರತೆಗೆದಿದ್ದಾರೆಂದು ಹೇಳಲಾದ ಶವಗಳ ಕೆಲವು ಅಸ್ಥಿಪಂಜರ ಅವಶೇಷಗಳನ್ನು, ದೂರುದಾರರನ್ನು ಪ್ರತಿನಿಧಿಸುವ ವಕೀಲರು ಮತ್ತು 'ಪಂಚ್' ಸಾಕ್ಷಿಗಳ ಮುಂದೆ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ವರದಿಯಾಗಿದೆ. ದೂರುದಾರರು ತಮ್ಮ ಗುರುತನ್ನು ಬಹಿರಂಗಪಡಿಸದಂತೆ ಕೋರಿದ್ದರಿಂದ, ಪೊಲೀಸರು ಆ ವ್ಯಕ್ತಿಯ ಹೆಸರನ್ನು ಬಹಿರಂಗಪಡಿಸಲಿಲ್ಲ. ಕರ್ನಾಟಕ ಪೊಲೀಸರ ಎಫ್‌ಐಆರ್ ಪೋರ್ಟಲ್ ನಲ್ಲಿ ಪೊಲೀಸರು ಎಫ್‌ಐಆರ್ ಅನ್ನು ಪೋಸ್ಟ್ ಮಾಡಲಿಲ್ಲ.

ಆ ವ್ಯಕ್ತಿ ನೀಡಿದ ದೂರಿನಲ್ಲೇನಿದೆ?

ನಾನು ಹುಟ್ಟಿದ್ದು ಅತ್ಯಂತ ಕೆಳಗಿನದೆಂದು ಕರೆಯಲಾಗುವ ಜಾತಿಯಲ್ಲಿ. ನಾನು 1995 ರಿಂದ ಡಿಸೆಂಬರ್ 2014ರ ವರೆಗೆ ಧರ್ಮಸ್ಥಳ ದೇವಸ್ಥಾನದಡಿ ನೈರ್ಮಲ್ಯ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದೆ. ಪ್ರತಿನಿತ್ಯ, ನೇತ್ರಾವತಿ ನದಿಯ ಬಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತೆ ಕೆಲಸ ನಿರ್ವಹಿಸುತ್ತಿದ್ದೆ. ನಿಯಮಿತ ಉದ್ಯೋಗವಾಗಿ ಪ್ರಾರಂಭವಾದದ್ದು ನಂತರದ ದಿನಗಳಲ್ಲಿ ಅತ್ಯಂತ ಭಯಾನಕ ಅಪರಾಧಗಳ ಸಾಕ್ಷ್ಯಗಳನ್ನು ಮರೆಮಾಚುವ ಕೆಲಸವಾಗಿ ಬದಲಾಯಿತು. ನನ್ನ ಉದ್ಯೋಗದ ಆರಂಭದಲ್ಲಿ ಮೃತ ದೇಹಗಳು ಕಾಣಿಸಿಕೊಳ್ಳುವುದನ್ನು ನಾನು ಗಮನಿಸಿದೆ. ಮೊದಲಿಗೆ, ಇವು ಆತ್ಮಹತ್ಯೆ ಅಥವಾ ನದಿಯಲ್ಲಿ ಆಕಸ್ಮಿಕವಾಗಿ ಮುಳುಗಿದ ಮೃತ ದೇಹಗಳು ಎಂದು ನಾನು ಭಾವಿಸಿದ್ದೆ. ಅದರಲ್ಲಿ, ಮಹಿಳೆಯರ ಶವಗಳೇ ಹೆಚ್ಚಾಗಿದ್ದವು.

ನನ್ನ ಮತ್ತು ನನ್ನ ಕುಟುಂಬವನ್ನು ಕೊಲ್ಲುವುದಾಗಿ ಬೆದರಿಕೆ

ಅನೇಕ ಮಹಿಳಾ ಶವಗಳು ಬಟ್ಟೆ ಅಥವಾ ಒಳ ಉಡುಪುಗಳಿಲ್ಲದೆ ಕಂಡು ಬಂದವು. ಲೈಂಗಿಕ ಆಕ್ರಮಣ ಮತ್ತು ಹಿಂಸೆಯ ಸ್ಪಷ್ಟ ಲಕ್ಷಣಗಳನ್ನು ಕೆಲವು ಶವಗಳು ಹೊಂದಿದ್ದವು. ಆ ದೇಹಗಳ ಮೇಲೆ ಹಿಂಸೆಯನ್ನು ಸೂಚಿಸುವ ಗಾಯಗಳು ಅಥವಾ ಕತ್ತುಹಿಸುಕುವಿಕೆಯು ಕಂಡು ಬರುತ್ತಿದ್ದವು. 1998ರ ಸುಮಾರಿಗೆ ನನ್ನ ಮೇಲ್ವಿಚಾರಕರು ಈ ದೇಹಗಳನ್ನು ಪೊಲೀಸರಿಗೆ ವರದಿ ಮಾಡುವ ಬದಲು, ಈ ದೇಹಗಳನ್ನು ರಹಸ್ಯವಾಗಿ ವಿಲೇವಾರಿ ಮಾಡುವಂತೆ ನನಗೆ ಸೂಚಿಸಿದರು. ನಾನು ತಕ್ಷಣವೇ ನಿರಾಕರಿಸಿ, ಆ ಸಾವುಗಳನ್ನು ಪೊಲೀಸರಿಗೆ ತಿಳಿಸಬೇಕು ಎಂದು ಪ್ರತಿಕ್ರಿಯಿಸಿದಾಗ ತೀವ್ರವಾಗಿ ಥಳಿಸಲ್ಪಟ್ಟೆ. ನಾನೇನಾದರೂ ಅವರ ನಿರ್ದೇಶನಗಳನ್ನು ಅನುಸರಿಸಲು ನಿರಾಕರಿಸಿದರೆ ಅಥವಾ ಅದರ ಬಗ್ಗೆ ಯಾರಿಗಾದರೂ ತಿಳಿಸಿದರೆ, "ನಿನ್ನನ್ನು ತುಂಡು ತುಂಡಾಗಿ ಕತ್ತರಿಸುತ್ತೇವೆ., ನಿನ್ನ ದೇಹವೂ ಉಳಿದ ಶವಗಳಂತೆ ಹೂಳಲ್ಪಡುತ್ತದೆ, ನಿನ್ನ ಕುಟುಂಬದವರೆಲ್ಲರನ್ನೂ ಬಲಿ ಮಾಡುತ್ತೇವೆ" ಎಂದು ಬೆದರಿಸಿದರು.

ಈ ಹಿಂದೆ, ಆ ಕೆಲಸವನ್ನು ನಿರ್ವಹಿಸುತ್ತಿದ್ದ ವ್ಯಕ್ತಿಯು ಹಿಂಜರಿದೊಡನೆಯೇ "ಕಣ್ಮರೆಯಾದ" ಎಂದು ಅವರು ಹೇಳುತ್ತಿದ್ದರು. ಅವರ ಬೆದರಿಕೆಯಲ್ಲಿ ಸಂಶಯವೇ ಇರಲಿಲ್ಲ. "ಪಾಲಿಸು ಇಲ್ಲವೇ ಕುಟುಂಬ ಸಮೇತವಾಗಿ ತುಂಡು ತುಂಡಾಗಿ ಕತ್ತರಿಸಲ್ಪಡು" ಎಂದಾಗಿತ್ತು. ಮೃತದೇಹಗಳಿರುವ ನಿರ್ದಿಷ್ಟ ಸ್ಥಳಗಳಿಗೆ ಮೇಲ್ವಿಚಾರಕರು ನನ್ನನ್ನು ಕರೆಯುತ್ತಿದ್ದರು. ಅನೇಕ ಬಾರಿ, ಈ ದೇಹಗಳು ಅಪ್ರಾಪ್ತ ಹೆಣ್ಣು ಮಕ್ಕಳು/ ಮಹಿಳೆಯರದಾಗಿದ್ದವು. ಒಳ ಉಡುಪು ಇರದ, ಹರಿದ ಬಟ್ಟೆ ಮತ್ತು ಅವರ ಖಾಸಗಿ ಭಾಗಗಳಿಗೆ ಆಗಿದ್ದ ಗಾಯಗಳು ಅವರ ಮೇಲೆ ಕ್ರೂರ ಲೈಂಗಿಕ ಆಕ್ರಮಣವನ್ನು ಸೂಚಿಸುತ್ತಿದ್ದವು. ಕೆಲವು ದೇಹಗಳ ಮೇಲೆ ಆಸಿಡ್ ನಿಂದ ಸುಟ್ಟ ಗುರುತುಗಳೂ ಸಹ ಇರುತ್ತಿದ್ದವು.

ಶಾಲಾ ಸಮವಸ್ತ್ರದ ಶರ್ಟ್ ಧರಿಸಿದ್ದ ಹುಡುಗಿಯ ದೇಹ

ನನ್ನನ್ನು ಬಹಳವಾಗಿ ಕಾಡಿರುವ ಘಟನೆಯೊಂದಿದೆ; 2010ರಲ್ಲಿ ಕಲ್ಲೇರಿಯಲ್ಲಿರುವ ಪೆಟ್ರೋಲ್ ಬಂಕ್ ನಿಂದ ಸುಮಾರು 500 ಮೀಟರ್ ದೂರದಲ್ಲಿರುವ ಸ್ಥಳಕ್ಕೆ ನನ್ನನ್ನು ಮೇಲ್ವಿಚಾರಕರು ಕಳುಹಿಸಿದರು. ಅಲ್ಲಿ ನಾನು ಹದಿಹರೆಯದ ಹುಡುಗಿಯ ದೇಹವನ್ನು ಕಂಡೆ. ವಯಸ್ಸು ಅಂದಾಜು 12 ರಿಂದ 15 ವರ್ಷಗಳ ನಡುವೆ ಇರಬಹುದು. ಅವಳು ಶಾಲಾ ಸಮವಸ್ತ್ರದ ಶರ್ಟ್ ಧರಿಸಿದ್ದಳು. ಆದರೆ, ಅವಳ ಲಂಗ ಮತ್ತು ಒಳಉಡುಪುಗಳು ಇರಲಿಲ್ಲ. ಅವಳ ದೇಹವು ಲೈಂಗಿಕ ಆಕ್ರಮಣದ ಸ್ಪಷ್ಟ ಲಕ್ಷಣಗಳನ್ನು ಹೊಂದಿತ್ತು. ಅವಳ ಕುತ್ತಿಗೆಯ ಮೇಲೆ ಕತ್ತುಹಿಸುಕಿರುವ ಗುರುತುಗಳಿದ್ದವು. ಗುಂಡಿಯನ್ನು ಅಗೆದು ಅವಳ ಶಾಲಾ ಚೀಲದೊಂದಿಗೆ ಹೂಳಲು ನನಗೆ ಸೂಚಿಸಲಾಯಿತು. ಆ ಸನ್ನಿವೇಶವು ಇಂದಿಗೂ ಮಾಸಿಲ್ಲ.

ಮಹಿಳೆಯ ಮುಖವನ್ನು ಆಸಿಡ್ ನಿಂದ ಸುಡಲಾಗಿತ್ತು

ಮತ್ತೊಂದು ಮರೆಯಲಾಗದ ಘಟನೆಯು 20ರ ಹರೆಯದ ಮಹಿಳೆಯ ಮೃತ ದೇಹದ್ದಾಗಿತ್ತು. ಆಕೆಯ ಮುಖವನ್ನು ಆಸಿಡ್ ನಿಂದ ಸುಡಲಾಗಿತ್ತು. ಆ ದೇಹವನ್ನು ದಿನಪತ್ರಿಕೆಯಿಂದ ಮುಚ್ಚಲಾಗಿತ್ತು. ಅಕೆಯ ದೇಹವನ್ನು ಹೂಳದೆ, ಆಕೆಯ ಪಾದರಕ್ಷೆ ಮತ್ತು ಅವಳ ಎಲ್ಲಾ ವಸ್ತುಗಳನ್ನು ಸಂಗ್ರಹಿಸಿ ಅವಳೊಂದಿಗೆ ಸುಡಲು ನನಗೆ ಮೇಲ್ವಿಚಾರಕರು ಸೂಚಿಸಿದರು.

ಅತ್ಯಂತ ಕ್ರೂರವಾಗಿ ನಿರ್ಗತಿಕ ಪುರುಷರ ಕೊಲೆ

ಧರ್ಮಸ್ಥಳ ಪ್ರದೇಶದಲ್ಲಿ ಭಿಕ್ಷಾಟನೆಗೆ ಬಂದ ಬಡ ಮತ್ತು ನಿರ್ಗತಿಕ ಪುರುಷರು ವ್ಯವಸ್ಥಿತವಾಗಿ ಕೊಲೆಯಾದ ಅನೇಕ ಘಟನೆಗಳಿಗೆ ನಾನು ಸಾಕ್ಷಿಯಾದೆ. ಅವರನ್ನು ಕೊಲ್ಲುವ ವಿಧಾನವು ಅತ್ಯಂತ ಕ್ರೂರವಾಗಿತ್ತು. ಅವರನ್ನು ಕೊಠಡಿಯ ಕುರ್ಚಿಗಳಿಗೆ ಕಟ್ಟಲಾಗುತ್ತಿತ್ತು ಮತ್ತು ಟವಲ್ ಗಳನ್ನು ಬಳಸಿ ಹಿಂದಿನಿಂದ ಹಿಡಿದು ಉಸಿರುಗಟ್ಟಿಸಲಾಗುತ್ತಿತ್ತು. ಈ ಕೊಲೆಗಳು ನನ್ನ ಸಮ್ಮುಖದಲ್ಲೇ ನಡೆದವು. ದೂರದ ಅರಣ್ಯ ಪ್ರದೇಶಗಳಲ್ಲಿ ಈ ದೇಹಗಳನ್ನು ಹೂತು ಹಾಕಲು ನನಗೆ ನಿರ್ದೇಶನ ನೀಡುತ್ತಿದ್ದರು.

ಯಾವುದೇ ಕುರುಹು ಸಿಗದಂತೆ ಸುಟ್ಟು ಹಾಕಬೇಕೆಂಬ ನಿರ್ದೇಶನ

ನನ್ನ ಉದ್ಯೋಗಾವಧಿಯಲ್ಲಿ, ಧರ್ಮಸ್ಥಳ ಪ್ರದೇಶದಾದ್ಯಂತ ಹಲವಾರು ಸ್ಥಳಗಳಲ್ಲಿ ಮೃತ ದೇಹಗಳನ್ನು ಹೂತು ಹಾಕಿರುತ್ತೇನೆ. ಕೆಲವೊಮ್ಮೆ, ನಿರ್ದೇಶಿಸಿದಂತೆ ಮೃತ ದೇಹಗಳನ್ನು ಡೀಸೆಲ್ ಬಳಸಿ ಸುಟ್ಟು ಹಾಕಿರುತ್ತೇನೆ. ಯಾವುದೇ ಕುರುಹು ಸಿಗದಂತೆ ಸುಟ್ಟು ಹಾಕಬೇಕೆಂದು ನನಗೆ ನಿರ್ದೇಶಿಸುತ್ತಿದ್ದರು. ಈ ರೀತಿ ವಿಲೇವಾರಿಯಾದ ಮೃತ ದೇಹಗಳು ನೂರಾರು. 2014ರ ಹೊತ್ತಿಗೆ ನಾನು ಅನುಭವಿಸುತ್ತಿದ್ದ ಮಾನಸಿಕ ಹಿಂಸೆಯು ಅಸಹನೀಯವಾಗಿತ್ತು.

ನನ್ನ ಕುಟುಂಬದ ಅಪ್ರಾಪ್ತ ಬಾಲಕಿಯೊಬ್ಬಳಿಗೆ ಲೈಂಗಿಕ ಕಿರುಕುಳ

"2014 ರಲ್ಲಿ ನನ್ನ ಕುಟುಂಬದ ಅಪ್ರಾಪ್ತ ಬಾಲಕಿಯೊಬ್ಬಳು ನನ್ನ ಮೇಲ್ವಿಚಾರಕನಿಗೆ ತಿಳಿದಿರುವ ವ್ಯಕ್ತಿಯಿಂದ ಲೈಂಗಿಕ ಕಿರುಕುಳಕ್ಕೊಳಗಾಗಿದ್ದಳು. ನಾವು ತಪ್ಪಿಸಿಕೊಳ್ಳಲು ನಿರ್ಧರಿಸಿ, ಅಂದು ನಾನು ನನ್ನ ಕುಟುಂಬದೊಂದಿಗೆ ಧರ್ಮಸ್ಥಳದಿಂದ ಓಡಿಹೋದೆ. ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂಬುದರ ಸುಳಿವು ಯಾರಿಗೂ ಸಿಗದಂತೆ ಖಚಿತಪಡಿಸಿಕೊಂಡೆ. ಅಂದಿನಿಂದ ಈವರೆಗೆ, ನೆರೆ ರಾಜ್ಯವೊಂದರಲ್ಲಿ ಜೀವ ಭಯದಿಂದ ➚

ನಿಷ್ಪಕ್ಷಪಾತ ತನಿಖೆಗೆ ಕ್ರಮ ಕೈಗೊಳ್ಳಿ: ಸಿಪಿಐ(ಎಂ) ಆಗ್ರಹ

ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳ ಗ್ರಾಮದಲ್ಲಿ ನಡೆದಿರುವ ಹಲವಾರು ಅತ್ಯಾಚಾರ, ಹತ್ಯೆಗಳಂತಹ ಅಪರಾಧ ಕೃತ್ಯಗಳ ಬಗ್ಗೆ ತನಗೆ ಮಾಹಿತಿ ಇರುವುದಾಗಿ ವ್ಯಕ್ತಿಯೋರ್ವ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಧರ್ಮಸ್ಥಳ ಪೊಲೀಸ್ ಠಾಣೆಗೆ ಇತ್ತೀಚೆಗೆ ತನ್ನ ಪರ ವಕೀಲರ ಮೂಲಕ ದೂರು ಸಲ್ಲಿಸಿದ್ದಾನೆ. "ನನಗೆ ನಿರಂತರ ಪ್ರಾಣ ಬೆದರಿಕೆಯೊಡ್ಡಿ ಧರ್ಮಸ್ಥಳ ಗ್ರಾಮ ವ್ಯಾಪ್ತಿಯಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೊಲೆಯಾದ ಹಾಗೂ ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾದ ಅನೇಕ ಮೃತದೇಹಗಳು ಮತ್ತು ಸಾಕ್ಷ್ಯಗಳನ್ನು ನನ್ನಿಂದ ಬಲವಂತವಾಗಿ ಹೂತು ಹಾಕಿಸಿದ್ದಾರೆ. ನನ್ನಿಂದ ಹೂತು ಹಾಕಿಸಿರುವ ಮೃತ ಮೃತದೇಹಗಳನ್ನು ಪೊಲೀಸರ ಸಮ್ಮುಖದಲ್ಲಿ ಹೊರ ತೆಗೆಸುವಂತೆ ಮನವಿ ಮಾಡುತ್ತೇನೆ" ಎಂದು ದೂರುದಾರ ಹೇಳಿದ್ದಾನೆ. ನೂರಾರು ಮೃತದೇಹಗಳನ್ನು ವಿಲೇವಾರಿ ಮಾಡಿರುವುದಾಗಿ ದೂರಿನಲ್ಲಿ ತಿಳಿಸಿರುವುದಲ್ಲದೆ, ಎದೆ ಝಲ್ಲೆನಿಸುವಂತಹ ಹಲವು ವಿಷಯಗಳನ್ನು ಈ ದೂರಿನಲ್ಲಿ ಹಂಚಿಕೊಂಡಿದ್ದಾನೆ. ಈ ದೂರಿನ ಕುರಿತು ರಾಜ್ಯ ಸರಕಾರ ನಿಷ್ಪಕ್ಷಪಾತ ತನಿಖೆಗೆ ಕ್ರಮ ಕೈಗೊಳ್ಳಬೇಕು, ದೂರುದಾರ ಹಾಗು ಆತನ ಜೊತೆಗಿರುವ ನ್ಯಾಯವಾದಿಗಳಿಗೆ ಭದ್ರತೆ ಒದಗಿಸಬೇಕು ಎಂದು ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಮುಖ್ಯಮಂತ್ರಿಗಳನ್ನು ಆಗ್ರಹಿಸಿದೆ.

416 ಹೆಚ್ಚು ಅಸಹಜ ಸಾವು

ಈ ಹಿಂದೆ ಧರ್ಮಸ್ಥಳದ ನೇತ್ರಾವತಿ ನದಿ ಹಾಗು ಆಸುಪಾಸು ಪತ್ತೆಯಾಗಿದ್ದ ಅನುಮಾನಾಸ್ಪದ, ಸಾಲು ಸಾಲು ಅನಾಥ ಶವಗಳು, ಆ ಕುರಿತು ಸಾರ್ವಜನಿಕವಾಗಿ ವ್ಯಕ್ತವಾಗಿದ್ದ ಅನುಮಾನಗಳಿಗೆ ಈಗಿನ ಆರೋಪಗಳು ಪುಷ್ಟಿ ನೀಡುತ್ತವೆ. ಮರೆಮಾಚಲ್ಪಟ್ಟ ವ್ಯಕ್ತಿಯೋರ್ವ ವಕೀಲರುಗಳ ಉಪಸ್ಥಿತಿಯಲ್ಲಿ ದೂರು ದಾಖಲಿಸಿದ ಸುದ್ದಿ ಸಾರ್ವಜನಿಕ ವಲಯದಲ್ಲಿ ಕಂಪನಗಳನ್ನು ಎಬ್ಬಿಸಿದೆ.

ಧರ್ಮಸ್ಥಳದಲ್ಲಿ 80 ರ ದಶಕದಲ್ಲಿ ನಡೆದ ವಿದ್ಯಾರ್ಥಿನಿ ಪದ್ಮಲತಾ ಅಪಹರಣ, ಕೊಲೆ ಪ್ರಕರಣದ ಸಂದರ್ಭದಲ್ಲೆ ದೊಡ್ಡ ಹೋರಾಟ ನಡೆದಿತ್ತು. ಆದರೆ, ಆ ಪ್ರಕರಣದಲ್ಲಿ ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸ್ ಇಲಾಖೆ ವಿಫಲಗೊಂಡಿತ್ತು. ಆ ತರುವಾಯ ಇಂತಹ ಹಲವು ಕೊಲೆ, ಅನುಮಾನಾಸ್ಪದ, ಅಸಹಜ ಸಾವುಗಳು ಧರ್ಮಸ್ಥಳದ ಸುತ್ತಮುತ್ತ ವರದಿಯಾಗುತ್ತಲೆ ಬಂದಿವೆ. ಹನ್ನೆರಡು ವರ್ಷಗಳ ಹಿಂದೆ ನಡೆದ ಸೌಜನ್ಯ ಅಪಹರಣ, ಅತ್ಯಾಚಾರ ಮತ್ತು ಹತ್ಯೆ ಪ್ರಕರಣ, ಅದಕ್ಕಿಂತ ಸ್ವಲ್ಪ ಮೊದಲು ನಡೆದ ಆನೆ ಮಾವುತ ಹಾಗು ಆತನ ಸೋದರಿಯ ಹತ್ಯೆ ಪ್ರಕರಣದಲ್ಲೂ ಕೊಲೆಗಾರರ ಪತ್ತೆಯಾಗಿಲ್ಲ ಎಂಬುದು ಗಮನಾರ್ಹ.

ಸೌಜನ್ಯ ಪ್ರಕರಣದ ಸಂದರ್ಭದಲ್ಲಿ ಮಾಹಿತಿ ಹಕ್ಕಿನಡಿ ಪೊಲೀಸ್ ಇಲಾಖೆ ನೀಡಿದ ಮಾಹಿತಿ ಪ್ರಕಾರವೆ ದಶಕದ ಅವಧಿಯಲ್ಲಿ ಧರ್ಮಸ್ಥಳ, ಉಜಿರೆ ಗ್ರಾಮ ವ್ಯಾಪ್ತಿಯಲ್ಲಿ 416 ಅಸಹಜ ಸಾವು, ಅನಾಥ ಶವಗಳು ಪತ್ತೆಯಾಗಿದ್ದವು ಎಂದು ವರದಿಯಾಗಿತ್ತು. ಇದು ರಾಜ್ಯಾದ್ಯಂತ ಆತಂಕ, ಪ್ರತಿಕ್ರಿಯೆಗಳಿಗೆ ಕಾರಣವಾಗಿತ್ತು. ಪದ್ಮಲತಾ ಪ್ರಕರಣದಿಂದ ಹಿಡಿದು ಆನೆ ಮಾವುತ, ಆತನ ಸೋದರಿ, ಸೌಜನ್ಯ ಪ್ರಕರಣದವರೆಗೂ ದೊಡ್ಡ ಪ್ರಮಾಣದ ಹೋರಾಟಗಳ ಹೊರತಾಗಿಯು ಕೊಲೆಗಾರರ ಪತ್ತೆ ಅಸಾಧ್ಯವಾಗಿರುವುದು, ನೂರಾರು ಅನಾಥ ಶವಗಳು, ಅಸಹಜ ಸಾವುಗಳು ಆ ಸಣ್ಣ ಪ್ರದೇಶವೊಂದರಲ್ಲೆ ನಡೆದಿರುವುದು ನಿಗೂಢ ವಿದ್ಯಾಮಾನಗಳು ಜನರಲ್ಲಿ ಸಹಜವಾಗಿ ಅನುಮಾನ ಮೂಡಿಸಿತ್ತು. ಸರಕಾರ ಬಲಾಢ್ಯ, ಊಳಿಗಮಾನ್ಯ ಶಕ್ತಿಗಳ ನಿಯಂತ್ರಣಕ್ಕೆ ಒಳಗಾಗಿ ಪ್ರಕರಣಗಳನ್ನು ಮುಚ್ಚಿ ಹಾಕುತ್ತಿದೆ ಎಂದು ಪ್ರಬಲ ಆರೋಪಗಳೂ ಜನತೆಯಿಂದ ವ್ಯಕ್ತವಾಗಿದ್ದವು.

ಇದೀಗ, ಇಂತಹ ಆರೋಪಗಳಿಗೆ ಪುಷ್ಟಿ ನೀಡುವಂತೆ, 'ಧರ್ಮಸ್ಥಳದಲ್ಲಿ ಕಾರ್ಮಿಕನಾಗಿದ್ದೆ' ಎಂದು ಸ್ವಯಂ ಘೋಷಿಸಿಕೊಂಡಿರುವ ವ್ಯಕ್ತಿಯೋರ್ವ ಪೊಲೀಸರಿಗೆ ದೂರು ನೀಡಿದ್ದಾರೆ. ರಾಜ್ಯ ಸರಕಾರ ಈ ದೂರನ್ನು ಗಂಭೀರವಾಗಿ ಪರಿಗಣಿಸಬೇಕು, ಯಾವುದೇ ಬಲಾಢ್ಯ ಲಾಭಿಗೆ ಮಣಿಯದೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು, ಈ ಪ್ರಕರಣದ ಎಲ್ಲಾ ಆಯಾಮಗಳನ್ನು ಗಂಭೀರವಾಗಿ ಪರಿಗಣಿಸಬೇಕು, ದೂರುದಾರನಿಗೆ ಹಾಗು ಆತನ ಪರ ನ್ಯಾಯವಾದಿಗಳಿಗೆ ಗರಿಷ್ಟ ಭದ್ರತೆ ಒದಗಿಸಬೇಕು ಎಂದು ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಜಗತ್ತಿನೆಲ್ಲ ಸೈನಿಕರಿಗೆ ಮಾದರಿ

ಸೈನಿಕ ನೈತಿಕತೆ, ಜನತೆಯೊಡನೆ ಸಂಬಂಧ, ಸೈನ್ಯದೊಳಗಿನ ಪ್ರಜಾಪ್ರಭುತ್ವದ ಬಗ್ಗೆ ಘೋಷಣೆ. ಯುದ್ಧ ಇನ್ನೊಂದು ದೇಶ, ಪ್ರದೇಶದ ಮೇಲೆ ದಬ್ಬಾಳಿಕೆ ಹೇರುವುದಕ್ಕಲ್ಲ:

"ಅಧಿಕಾರದಲ್ಲಿರುವವರ ಆಜ್ಞೆ, ಬೇರೆಯವರ ತೀರ್ಮಾನ, ಹಣಕ್ಕಾಗಿ ಮಾತ್ರ ಮನುಷ್ಯರನ್ನು ಕೊಲ್ಲಲು ಮುನ್ನುಗ್ಗುವವರು ಕೊಲೆಗಾರರಾಗಿ ತಮ್ಮನ್ನು, ತಮ್ಮ ಅಂತರಿಕ ಪ್ರಜ್ಞೆಯನ್ನು ಖಂಡನೆಗೆ ಗುರಿಪಡಿಸಿಕೊಳ್ಳುತ್ತಾರೆ. ಆದ್ದರಿಂದ ಯುದ್ಧದಲ್ಲಿ ಮಾಡುವ ಕೊಲೆ ಮತ್ತು ಹಾನಿ ಸೈನಿಕರ ವೈಯುಕ್ತಿಕ ನೈತಿಕ ಹೊಣೆ.

ನೀವು ಯುದ್ಧ ಮಾಡುಅವ ಉದ್ದೇಶದ ನ್ಯಾಯ ಬದ್ಧತೆಯ ಬಗ್ಗೆ ನೀವೇ ಒಂದು ತೀರ್ಮಾನಕ್ಕೆ ಬಂದ ಮೇಲೆ ಮಾತ್ರ ಸೇನಾಧಿಕಾರಿಗಳ ಆಜ್ಞೆಯನ್ನು ಪಾಲಿಸಿ. ನಿಮ್ಮದೇ ಆದ ತೀರ್ಮಾನಕ್ಕೆ ಬರದ ಹೊರತು ಅವರ ಆಜ್ಞೆಯನ್ನು ಪಾಲಿಸಬೇಡಿ.

ನಿಮಗೆ ನೀಡಿದ ಆಜ್ಞೆಯ ಎಲ್ಲ ಆಯಾಮಗಳನ್ನು ಪರೀಕ್ಷಿಸಿ. ಅದಕ್ಕೆ ಸಂಬಂಧಿಸಿ ಎಲ್ಲ ಜನರ ಬಗ್ಗೆ ನೀವು ಹೊಂದಿರುವ ಗೌರವದ ಆಧಾರದಲ್ಲಿ ತೀರ್ಮಾನ ತೆಗೆದುಕೊಳ್ಳಿ. ಆ ಜನರ ಬಗ್ಗೆ ಹರಡಲಾದ ಅಪಪ್ರಚಾರಗಳು, ಮೂಡಿಸಿದ ಪ್ರತಿಬಿಂಬಗಳಿಂದ ತಪ್ಪು ದಾರಿಗೆ ಎಳೆಯಲ್ಪಡಬೇಡಿ. ಇದು ನಮ್ಮ ರಕ್ಷಕ ಕ್ರಿಸ್ತನ ಕಾಲದಿಂದ ಇಲ್ಲಿಯವರೆಗೆ ಎಲ್ಲ ಒಳ್ಳೆಯ ಕಾರ್ಯಗಳಿಗೆ ದೊಡ್ಡ ಅಡ್ಡಿಯಾಗಿದೆ.

ಆ ದೇಶ ಅಥವಾ ಈ ದೇಶ, ಪ್ರದೇಶಗಳ ಮೇಲೆ ದಾಳಿ ಮಾಡುವುದು ಬಹಳ ಹೆಚ್ಚು ಅವಶ್ಯವಾಗಿದೆ ಎಂದು, ಇಲ್ಲದಿದ್ದರೆ ನಮ್ಮ ದೇಶಕ್ಕೆ ಅಪಾಯ ಎಂದು, ಬಹಳ ತುರ್ತು ಎಂದು ಬಿಂಬಿಸುತ್ತಾರೆ. ಅಲ್ಲಿಯ ಜನರನ್ನು ನೀವು ಏಕೆ ಕೊಲ್ಲಬೇಕು? ಇಲ್ಲಿಯ ಜನಗಳ ಮೇಲೆ ತೆರಿಗೆ, ಸುಂಕ, ಧಾರ್ಮಿಕ ಸುಲಿಗೆ ವಿಧಿಸಿದಂತೆ ಅಲ್ಲಿಯ ಜನಗಳ ಮೇಲೂ ಹೇರಲೆಂದು, ಅಲ್ಲಿಯ ವ್ಯಾಪಾರ, ಸಂಪತ್ತನ್ನು ವಶಪಡಿಸಿಕೊಳ್ಳಲೆಂದು, ಆ ದೇಶ ಭಿಕ್ಷುಕರಿಂದ ತುಂಬಿ ತುಳುಕಾಡಲೆಂದೇ, ಅಲ್ಲಿಯ ಜೈಲುಗಳನ್ನು ಬಡಜನರಿಂದ ತುಂಬಲೆಂದೇ? ಆ ದೇಶವನ್ನು, ಪ್ರದೇಶವನ್ನು ಇಲ್ಲಿಯ ಶ್ರೀಮಂತ ದಬ್ಬಾಳಿಕೆಗಾರರ ಕಾಲಡಿ ತುಳಿದಿಡಲು ಅವಕಾಶ ನೀಡಲೆಂದೇ?"

ಈ ವಿಷಯಕ್ಕೆ ಸಂಬಂಧಿಸಿ ಅವರು ಹೇಳಿದ ಮತ್ತೊಂದು ಮಾತು ಸರ್ವಕಾಲಕ್ಕೂ ಸತ್ಯ. ಈ ಘೋಷಣೆಯಲ್ಲಿ ಅವರು ಸಾರಿದರು, "ಸೈನಿಕರ ಕುರುಡು ನಂಬಿಕೆಯೇ ನಿಮ್ಮ ಸೇನಾಧಿಕಾರಿಗಳನ್ನು ಪಕ್ಕಾ ನಿರಂಕುಶಾಧಿಕಾರಿ ಪ್ರಜಾಪೀಡಕರನ್ನಾಗಿ ಮಾಡುತ್ತದೆ."

ಇಂದು ವಿಶ್ವದಲ್ಲಿ ಜನರ ಮಾರಣಹೋಮ ಮಾಡುತ್ತಿರುವ ಯುದ್ಧಗಳು ರಣಗುಡುತ್ತಿರುವ ಸಮಯದಲ್ಲಿ, ತಂತಮ್ಮ ದೇಶಗಳ ಆಳುವವರ ಆಜ್ಞೆಯ ಮೇಲೆ ಅವರ ಕೂಲಿಯಾಳುಗಳಂತೆ ಕೊಲೆಗಳನ್ನು ಮಾಡುತ್ತಿರುವ ಸಮಯದಲ್ಲಿ ಈ ತತ್ವ ಮಾನವೀಯತೆಯನ್ನು ಅರಳಿಸಲು ನೆರವಾಗುತ್ತದೆಯೇ!

ಲೆಬೆಲರ್ಸ್ ಈ ಘೋಷಣೆಯನ್ನು ಮಾಡಿದ್ದು 1649 ರ ಏಪ್ರಿಲ್‌ನಲ್ಲಿ. ಅಂದಿನಿಂದ ಇಲ್ಲಿಯವರೆಗೆ ಜಗತ್ತಿನ ಎಲ್ಲ ಸೈನ್ಯಗಳು, ಸೈನಿಕರು ಈ ನೀತಿ ಸಂಹಿತೆಯನ್ನು ಅನುಸರಿಸಿದ್ದರೆ ! ಜಗತ್ತಿನ ವಿವಿಧ ದೇಶಗಳನ್ನು ವಸಾಹತುಗಳನ್ನಾಗಿ ಮಾಡಿಕೊಳ್ಳಲು ಎಷ್ಟೊಂದು ಆಕ್ರಮಣಗಳು ನಡೆದಿವೆ. ಎರಡು ಮಹಾ ಯುದ್ಧಗಳೂ, ವಿಯೆಟ್ನಾಂ, ಕೊರಿಯಾ ಮೊದಲಾದ ಯುದ್ಧಗಳೂ ಸೇರಿದಂತೆ ನೂರಾರು ಯುದ್ಧಗಳಲ್ಲಿ ಎಷ್ಟು ಕೋಟಿ ಜನರ ಹತ್ಯೆಯಾಗಿದೆ, ಆಗುತ್ತಿದೆ ಎಂಬುದನ್ನು ನೆನಪಿಸಿಕೊಂಡರೆ ವಿಷಾದದ ಭಾವನೆ ಆವರಿಸುತ್ತದೆ.

ಜನರೊಡನೆ ಸೈನಿಕರ ವರ್ತನೆ ಹೇಗಿರಬೇಕು?

"ಸೈನಿಕರ ಬಗ್ಗೆ ಜನರ ಪ್ರೀತಿಯನ್ನು ಉಳಿಸಿಕೊಳ್ಳಲು ಸೈನಿಕರು ಎಲ್ಲ ಪ್ರಯತ್ನ ಮಾಡಬೇಕು. ನೀವು ರಸ್ತೆಗಳಲ್ಲಿ, ಬೀದಿಗಳಲ್ಲಿ ಭೇಟಿ ಮಾಡುವ ಎಲ್ಲರೊಂದಿಗೆ ಸೌಜನ್ಯದಿಂದ ಮೃದುವಾಗಿ ವರ್ತಿಸಬೇಕು. ಅವಸರದಿಂದ, ಒರಟುತನದಿಂದ ನುಗ್ಗುವುದು, ತಳ್ಳಿಕೊಂಡು ಹೋಗುವುದು ಇತ್ಯಾದಿ ಮಾಡದೆ ನಾಗರಿಕರಿಗೆ ಸಲ್ಲಬೇಕಾದ ಗೌರವ ನೀಡಬೇಕು. ನಿಮ್ಮ ತಿನ್ನುವಾಗ ಗದ್ದಲವಿಲ್ಲದೆ ದುಬಾರಿಯಲ್ಲದ ಆಹಾರ ಸೇವಿಸಬೇಕು. ಹಸಿವಿಲ್ಲದೆ ತಿನ್ನಬಾರದು. ದೇಹದ ರಕ್ಷಣೆಗಲ್ಲದೆ ಉಡುಪು ತೊಡಬಾರದು."

ಹೀಗೆ ಸೈನಿಕರ ನಡವಳಿಕೆಯ ನಿಯಮಗಳನ್ನು ಹೇಳುತ್ತಾ ಈ ಘೋಷಣೆ ಜನರು ಮತ್ತು ಸೈನಿಕರ ನಡುವಣ ಸಂಬಂಧದ ಮತ್ತೊಂದು ಮುಖ್ಯ ತತ್ವವನ್ನು ನಿರೂಪಿಸುತ್ತಾರೆ :

ಸೈನಿಕರು ಶಸ್ತ್ರಾಸ್ತ್ರಗಳನ್ನು ಧಾರಣೆ ಮಾಡಿರುವುದು ಜನರ ಒಳಿತಿಗಾಗಿ ಎಂಬುದನ್ನು ಅವರಿಗೆ ಯಾವಾಗಲೂ ಮನವರಿಕೆ ಮಾಡಿಕೊಡುತ್ತಿರಬೇಕು.

ಒಟ್ಟಿನಲ್ಲಿ ಜನರ ಹಿತಕ್ಕಾಗಿಯೇ ಯುದ್ಧ, ಆದ್ದರಿಂದ ಯುದ್ಧಗಳಲ್ಲಿ ಜನರೊಂದಿಗೆ ಪ್ರೀತಿಯ ಸಂಬಂಧದ ಮೂಲಕ ಅವರ ಬೆಂಬಲ ಗಳಿಸಬೇಕು ಇದೇ ಯುದ್ಧಗಳ ನೈತಿಕ ಅಸ್ತಿವಾರ ಎಂದು ಸಾರಿದ್ದಾರೆ ಲೆವಲರ್ಸ್

ಸೈನ್ಯದೊಳಗೆ ಸೈನಿಕರ ಪ್ರಜಾಪ್ರಭುತ್ವ, ಸೇನಾಧಿಕಾರಿಗಳ ಆಯ್ಕೆ:

ಲೆವಲರ್ಸ್ ಸೈನಿಕರು ತಮ್ಮ ಪ್ರತಿ ಸೈನಿಕ ದಳಗಳಿಂದ ಇಬ್ಬರು ಪ್ರತಿನಿಧಿಗಳನ್ನು ಆಯ್ಕೆ ಮಾಡಿದ್ದರು. ಈ ಪ್ರತಿನಿಧಿಗಳಿಂದ ಕೂಡಿದ ಸೈನ್ಯ ಮಂಡಳಿಯನ್ನು ಸ್ಥಾಪಿಸಿಕೊಂಡಿದ್ದರು.

ಈ ಲೆವಲರ್ಸ್ ಘೋಷಣೆಯಲ್ಲಿ ಈ ಪ್ರಜಾಪ್ರಭುತ್ವ ತತ್ವವನ್ನು ಒಂದು ಮುಖ್ಯ ತತ್ವವಾಗಿ ಮುಂದಿಡಲಾಯಿತು. ಸೈನಿಕರು ಪ್ರತಿ ರೆಜಿಮೆಂಟ್ / ದಳದಿಂದಲೂ ಪ್ರತಿನಿಧಿಗಳನ್ನು ಚುನಾವಣೆಯ ಮೂಲಕ ಆಯ್ಕೆ ಮಾಡಿಕೊಳ್ಳಬೇಕು. ಯುದ್ಧಗಳನ್ನು ಕೈಗೊಳ್ಳುವುದು, ಸೈನ್ಯದ ಯಾವ ರಂಗದಲ್ಲಿ ಯಾವ ದಳಗಳು ನೇಮಿಸಲ್ಪಡಬೇಕು, ಸೈನ್ಯವನ್ನು ವಿಸರ್ಜಿಸಬೇಕು ಎಂಬ ಸೈನ್ಯದ ಆಡಳಿತದ ವಿಷಯಗಳಲ್ಲಿ ಈ ಪ್ರತಿನಿಧಿಗಳಿಂದ ಕೂಡಿದ ಮಂಡಲಿಯ ತೀರ್ಮಾನವನ್ನು ಅನುಸರಿಸಬೇಕು.

ಈ ಪ್ರತಿನಿಧಿಗಳು ಆಯಾ ದಳದ ಹಿತಕ್ಕೆ, ಅಭಿಪ್ರಾಯಕ್ಕೆ ವಿರುದ್ಧವಾಗಿ ನಡೆದರೆ ಯಾವಾಗ ಬೇಕಾದರೂ ಆ ಪ್ರತಿನಿಧಿಗಳಿಗೆ ಬದಲಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಸೈನಿಕರಿಗಿದೆ ಎಂಬುದು ಲೆವಲರ್ಸ್‌ಗಳ ಪ್ರತಿಪಾದನೆ. ಇದು ಯಾರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿರುತ್ತಾರೋ ಅವರಿಗೆ ಆಯ್ಕೆ ಮಾಡಿದ ಉದ್ದೇಶಕ್ಕೆ ಅನುಸಾರವಾಗಿ ನಡೆಯದಿದ್ದಾಗ ಅವರನ್ನು ಬದಲಾಯಿಸುವ ಹಕ್ಕೂ ಇದೆ ಎಂಬ ರೈಟ್ ಟು ರಿಕಾಲ್ ಎಂಬ ಪ್ರಜಾಪ್ರಭುತ್ವದ ಮತ್ತೊಂದು ಮುಖ್ಯತತ್ವದ ಪ್ರತಿಪಾದನೆಯಾಗಿದೆ.

ಅಷ್ಟೇ ಅಲ್ಲ, ಒಬ್ಬ ಪ್ರಜೆಯಾಗಿ ಮಹಾ ದಂಡನಾಯಕರು, ಇತರ ಜನರಲ್‌ಗಳಿಗೆ ಒಬ್ಬ ಅತ್ಯಂತ ಕೆಳಹಂತದ ಸೈನಿಕನಿಗಿಂತ ಹೆಚ್ಚಿನ ಹಕ್ಕೇನಿದೆ! ಪಾರ್ಲಿಮೆಂಟ್‌ಗೆ ಮನವಿ ಸಲ್ಲಿಸುವ ಹಕ್ಕು ಇಬ್ಬರಿಗೂ ಒಂದೇ ಎಂದು ಹೇಳಿದರು.

ಹೀಗೆ ಇಡೀ ದೇಶದ ಪ್ರಜಾಪ್ರಭುತ್ವದ ಸ್ಥಾಪನೆಯ ಭಾಗವಾಗಿ ದೇಶದ ಅತ್ಯಂತ ಅಧಿಕಾರಶಾಹಿ ವಿಧೇಯತೆ ಬಯಸುವ ಸೈನ್ಯದಲ್ಲೂ ಪ್ರಜಾಪ್ರಭುತ್ವವನ್ನು ಬಯಸಿದರು ಎಂಬುದು ಮಹತ್ವದ ಸಂಗತಿ. ದೇಶದ ಎಲ್ಲ ಅಂಗಗಳಲ್ಲೂ ಪ್ರಜಾಪ್ರಭುತ್ವ ಇರಬೇಕು ಎಂಬುದನ್ನು ಅವರು ವ್ಯಕ್ತವಾಗಿ ಹೇಳಿಲ್ಲ. ಆದರೆ ಈ ತತ್ವದ ಮುಂದುವರಿಕೆಯಾಗಿ ಅದನ್ನು ಪ್ರತಿಪಾದಿಸುತ್ತಿದ್ದರು ಎಂದು ಊಹಿಸುವುದು ಸಕಾರಣವಾಗಿದೆ.

ತಲೆಮರೆಸಿಕೊಂಡು ವಾಸಿಸುತ್ತಿದ್ದೇವೆ. ವಾಸಸ್ಥಳಗಳನ್ನೂ ಬದಲಾಯಿಸುತ್ತಿದ್ದೇವೆ. ಆದರೆ, ಮಾನಸಿಕ ಪಾಪ ಪ್ರಜ್ಞೆಯ ಹೊರೆಯಲ್ಲಿಯೇ ಇನ್ನೂ ಬದುಕುತ್ತಿದ್ದೇನೆ. ನನ್ನ ಆತ್ಮ ಸಾಕ್ಷಿಯು ಇನ್ನೂ ಮೌನ ಮುಂದುವರೆಸಲು ಅನುಮತಿಸುತ್ತಿಲ್ಲ. ಮಣ್ಣಾಗಿ ಹೋದ ಅವರೆಲ್ಲರೂ ಯಾರೆಂದು ಮತ್ತು ಅವರ ಅತ್ಯಾಚಾರ ಹಾಗೂ ಕೊಲೆಗೆ ಕಾರಣಕರ್ತರು ಯಾರೆಂದು ಇನ್ನಾದರೂ ಎಲ್ಲರಿಗೂ ಗೊತ್ತಾಗಬೇಕೆಂದು ನಿರ್ಧರಿಸಿರುವೆ. ನನ್ನ ಬದುಕಿಗೆ ಅಂಟಿರುವ ಅಪಾಯದ ಹೊರತಾಗಿಯೂ ನಾನು ಮಾತನಾಡಲೇಬೇಕೆಂದು ತೀರ್ಮಾನಿಸಿರುವೆ.

ಹೂತಿಟ್ಟ ನೂರಾರು ಶವಗಳನ್ನು ಹೊರ ತೆಗೆಯಲು ಅವಕಾಶ ಕೊಡಿ

ನಾನು ಹೂತು ಹಾಕಿರುವ ನೂರಾರು ಮೃತದೇಹಗಳು ವಿಧಿವತ್ತಾದ ಗೌರವ ಮತ್ತು ಅಂತ್ಯ ಸಂಸ್ಕಾರಗಳಿಂದ ವಂಚಿತವಾಗಿರುತ್ತವೆ. ಈಗ ಹೊರತೆಗೆಯುವ ಕಳೇಬರಗಳಿಗೆ ಗೌರವ ಪೂರಕ ಅಂತ್ಯಸಂಸ್ಕಾರವಾದಲ್ಲಿ ಆ ನೊಂದ ಆತ್ಮಗಳಿಗೆ ಶಾಂತಿ ಸಿಕ್ಕಿ, ನನ್ನ ಪಾಪ ಪ್ರಜ್ಞೆಯೂ ಕಡಿಮೆ ಆಗುತ್ತದೆ ಎಂಬ ನಂಬಿಕೆ ನನ್ನದು. ಈ ಕಾರಣದಿಂದಾಗಿ, ನಾನು ಹೂತಿಟ್ಟ ನೂರಾರು ಶವಗಳನ್ನು ಹೊರ ತೆಗೆಯಲು ಕಾನೂನಿನ ಅನ್ವಯ ಅವಕಾಶ ಮಾಡಿಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆಂದು ಆ ವ್ಯಕ್ತಿ ಹೇಳಿದ್ದಾನೆ. ತನ್ನ ದೂರಿನ ಜೊತೆಗೆ, ತಾನು ಹೂತುಹಾಕಿದ ಶವಗಳ ಅವಶೇಷಗಳ ಛಾಯಾಚಿತ್ರಗಳನ್ನು ಮತ್ತು ಇತ್ತೀಚೆಗೆ ನಾನು ಧರ್ಮಸ್ಥಳಕ್ಕೆ ಹೋಗಿ ರಹಸ್ಯವಾಗಿ ಒಂದು ಶವದ ಅವಶೇಷಗಳನ್ನು ಹೊರತೆಗೆದಿದ್ದೇನೆ. ಫೋಟೋ ತೆಗೆದುಕೊಂಡು ಅವುಗಳನ್ನು ಪೊಲೀಸರಿಗೆ ನೀಡಿದ್ದೇನೆ" ಎಂದು ಅವರು ವಿವರಿಸಿದ್ದಾರೆ.

ನನಗೆ ಮತ್ತು ನನ್ನ ಕುಟುಂಬಕ್ಕೆ ರಕ್ಷಣೆ ಒದಗಿಸಿ

ಹೂತುಹಾಕದಿದ್ದರೆ ಆ ಶವಗಳ ಜೊತೆಯಲ್ಲೇ ಮಣ್ಣು ಪಾಲಾಗಿಸುವ ನಿರಂತರ ಜೀವಬೆದರಿಕೆ ಮತ್ತು ಥಳಿತಗಳ ನೋವಿನ ನೆನಪಿನ ಹೊರೆಯನ್ನು ಇನ್ನೂ ಹೊರಲು ನನ್ನಿಂದ ಸಾಧ್ಯವಿಲ್ಲ. ಈ ಮೂಲಕ ನಾನು ಬಹಿರಂಗಪಡಿಸುತ್ತಿರುವ, ಕೊಲೆಯಾದ ಅನೇಕ ಪುರುಷರು ಮತ್ತು ಅತ್ಯಾಚಾರಕ್ಕೊಳಗಾಗಿ ಕೊಲೆಗೊಳಗಾದ ಅನೇಕ ಯುವತಿಯರು ಮತ್ತು ಮಹಿಳೆಯರ ಮಾಹಿತಿಯನ್ನು ತೀವ್ರಗತಿಯಲ್ಲಿ ತನಿಖೆಗೊಳಪಡಿಸಿ, ನನಗೆ ಮತ್ತು ನನ್ನ ಕುಟುಂಬಕ್ಕೆ ರಕ್ಷಣೆಯನ್ನು ಒದಗಿಸುವಂತೆ ಕೋರುತ್ತಿದ್ದೇನೆ.

ನನಗೆ ಜೀವ ಬೆದರಿಕೆ ನೀಡುತ್ತಿದ್ದವರು ಇವರೇ...

ಈ ದೂರಿನಲ್ಲಿ ಹೇಳಿರುವ ಆರೋಪಿತರು, ಧರ್ಮಸ್ಥಳ ದೇವಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟವರು ಮತ್ತು ಇತರೆ ಸಿಬ್ಬಂದಿಗಳು. ಮೃತದೇಹಗಳನ್ನು ಹೂತು ಹಾಕುವಂತೆ ನಿರ್ದೇಶನ ನೀಡಿ ನನಗೆ ನಿರಂತರ ಜೀವ ಬೆದರಿಕೆ ಮತ್ತು ಹಿಂಸೆಯನ್ನು ನೀಡುತ್ತಿದ್ದವರು ಇವರೇ. ಆದರೆ, ಆರೋಪಿತ ವ್ಯಕ್ತಿಗಳ ಹೆಸರುಗಳನ್ನು ಈ ದೂರಿನಲ್ಲಿಯೇ ಬಹಿರಂಗಪಡಿಸಲು ನನಗೆ ಸಾಧ್ಯವಿರುವುದಿಲ್ಲ. ನಾನು ಹೆಸರಿಸುವ ಕೆಲವು ವ್ಯಕ್ತಿಗಳು ಅತ್ಯಂತ ಪ್ರಭಾವಶಾಲಿಗಳಾಗಿದ್ದು, ಅವರನ್ನು ವಿರೋಧಿಸುವವರನ್ನು ತೊಡೆದುಹಾಕುವ ಪ್ರವೃತ್ತಿ ಹೊಂದಿರುವವರಾಗಿದ್ದಾರೆ. 2018ರ ಸಾಕ್ಷಿ ರಕ್ಷಣೆಯಡಿ ನನಗೆ ಮತ್ತು ನನ್ನ ಕುಟುಂಬಕ್ಕೆ ರಕ್ಷಣೆ ದೊರೆತ ಕೂಡಲೇ, ಎಲ್ಲಾ ಆರೋಪಿತ ವ್ಯಕ್ತಿಗಳ ಹೆಸರುಗಳನ್ನು ಮತ್ತು ಅವರ ನಿರ್ದಿಷ್ಟ ಪಾತ್ರಗಳನ್ನು ಒಳಗೊಂಡಂತೆ ಸಂಪೂರ್ಣ ವಿವರವನ್ನು ಬಹಿರಂಗಗೊಳಿಸಲು ಸಿದ್ಧನಿರುವೆ. ಸುಳ್ಳು ಮಾಹಿತಿಯನ್ನು ಸಲ್ಲಿಸುವ ಪರಿಣಾಮಗಳ ಸಂಪೂರ್ಣ ಜ್ಞಾನದೊಂದಿಗೆ ನಾನು ಈ ದೂರನ್ನು ನೀಡುತ್ತಿದ್ದೇನೆ. ಮೇಲೆ ಹೇಳಿದ ವಿಚಾರವು ನನ್ನ ಜ್ಞಾನ ಮತ್ತು ನಂಬಿಕೆಗೆ ಅನುಗುಣವಾಗಿಯೇ ಹೇಳಿರುತ್ತೇನೆಂದು ದೃಢೀಕರಿಸುತ್ತೇನೆ. ನಾನು ಹೇಳಿರುವುದರ ಸತ್ಯತೆಯನ್ನು ಸ್ಥಾಪಿಸಲು ಪಾಲಿಗ್ರಾಫ್ ಅಥವಾ ಇನ್ಯಾವುದೇ ಪರೀಕ್ಷೆಗೆ ಒಳಪಡಲು ಸಿದ್ಧನಿದ್ದೇನೆ.

ಪಾಳೆಯಗಾರಿ ದರ್ಪದ ಅಧಿಕಾರಶಾಹಿ..... ಪುಟ 3 ರಿಂದ

ಪರಿಹಾರ ಸೂಚಿಸದೆ, ದರ್ಪ ಮೆರೆದಿದ್ದಾರೆ. ಟೀಕೆಯನ್ನು ಸಹಿಸದ ಅಪ್ರಜಾಸತ್ತಾತ್ಮಕ ವರ್ತನೆ ತೋರಿದ್ದಾರೆ. ಪ್ರಾಮಾಣಿಕವಾಗಿ ಈ ಯೋಜನೆಯ ಪ್ರಯೋಜನ ಬಡ ಕೂಲಿಕಾರ ಮಹಿಳೆಯರಿಗೆ ಲಭ್ಯವಾಗಬೇಕೆಂದು ಇಡೀ ರಾಜ್ಯದಲ್ಲಿ ಶ್ರಮಿಸುತ್ತಿರುವ ಕೂಲಿಕಾರ ಸಂಘದ ರಾಜ್ಯ ಅಧ್ಯಕ್ಷರೂ ಸೇರಿದಂತೆ, ಇತರ ಕೂಲಿಕಾರ ಸಂಘದ ನಾಯಕರನ್ನು ಏಕ ವಚನದಲ್ಲಿ ಮತ್ತೆ ಕೂಲಿಕಾರರು ಅವರು ಬರಲೇಬೇಕು. ನಾವು ಸಲ್ಲಿಸಿದ ಮನವಿಯ ಪ್ರತಿಯೊಂದು ಒತ್ತಾಯಗಳಿಗೂ ಸ್ಪಷ್ಟ ಪರಿಹಾರ ನೀಡಬೇಕು ಎಂದು ಅಲ್ಲೇ ಗಂಟೆಗಟ್ಟಲೆ ಕುಳಿತ ಮೇಲೆ ಇತರ ಅಧಿಕಾರಿಗಳ ಒತ್ತಾಯಕ್ಕೆ ಅಲ್ಲಿ ಬಂದು ಮಾತಾಡಿದ್ದಾರೆ.

ಅಷ್ಟಕ್ಕೆ ನಿಲ್ಲದೆ, ಕೆಳ ಅಧಿಕಾರಿಗಳನ್ನು ಛೂಬಿಟ್ಟು ಜಿಲ್ಲೆಯಾದ್ಯಂತ ಇರುವ ಅಧೀನ ಅಧಿಕಾರಿಗಳಿಗೆ ಕಡ್ಡಾಯವಾಗಿ ಬರಲೇಬೇಕೆಂದು ಒತ್ತಡ ಹಾಕುವ ಬೇನಾಮಿ ಪತ್ರ ವಾಟ್ಸಪ್ ಮಾಡಿ, ಅವರನ್ನು ಕರೆಸಿಕೊಂಡು ತನ್ನ ಪರ ಪ್ರತಿಭಟನೆ ಮಾಡಿಸಿಕೊಂಡಿದ್ದಾರೆ.

ಅವರ ದೂರಿನಲ್ಲಿ ಇರುವ ಕೂಲಿಕಾರರ ಸಂಘದ ನಾಯಕರು ಕಾನೂನಿಗೆ ವಿರುದ್ಧವಾಗಿ ಮಾತನಾಡಿದ ಒಂದೇ ಒಂದು ಉದಾಹರಣೆ ತೋರಿಸಿಲ್ಲ.

ಇಂತಹ ದರ್ಪಿಷ್ಟ ಅಧಿಕಾರಿಗಳು ಜಿಲ್ಲಾ ಪಂಚಾಯತಿಯಂತಹ ಜನರ ಆಯ್ಕೆಯ ಸಂಸ್ಥೆಗಳಲ್ಲಿ ಅಧಿಕಾರಿಗಳಾಗಿ ಇರಲು ನಾಲಾಯಕ್. ತಮ್ಮನ್ನು ಅಧಿಕಾರದಲ್ಲಿ ನಿಯೋಜಿಸಿಕೊಂಡ ಮಂತ್ರಿಮಾನ್ಯರುಗಳಿಗೆ ವಿಧೇಯರಾಗಿದ್ದರೆ ಸಾಕು ಎಂಬ ಇಂತಹ ಅಧಿಕಾರಿಗಳು ಜನರ ಸೇವೆ ಮಾಡುವವರಲ್ಲ. ಇಂತಹ ಪಾಳೆಯಗಾರಿ ಅಧಿಕಾರಿಗಳಿಂದಲೇ ಚಳುವಳಿಗಳು ಸ್ಫೋಟಗೊಳ್ಳುತ್ತವೆ. ಸರ್ಕಾರಗಳು ಕೆಟ್ಟ ಹೆಸರು ಪಡೆದುಕೊಳ್ಳುತ್ತವೆ.

ಇವರನ್ನು ಜನರ ನೇರ ಸಂಪರ್ಕ ಇರುವ ಅಧಿಕಾರ ಸ್ಥಾನಗಳಿಗೇ ನೇಮಕ ಮಾಡಬಾರದು.

ಐಎಎಸ್ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಮೆರಿಟ್ ಅಲ್ಲ. ಜನರ ಸಮಸ್ಯೆಗಳನ್ನು ಆಲಿಸಿ, ಇರುವ ಯೋಜನೆಯ ಅವಕಾಶಗಳಲ್ಲಿ ಅವುಗಳನ್ನು ಪರಿಹರಿಸುವುದೇ, ಜನರ ಕಷ್ಟ ಕಾರ್ಪಣ್ಯಗಳಿಗೆ ದನಿಯಾಗುವುದೇ ನಿಜ ಮೆರಿಟ್.

ಮಂಡ್ಯ ಜಿಲ್ಲೆಯನ್ನು ಹಾಳುಮಾಡುತ್ತಿರುವ ಸಿಇಓ ರವರನ್ನು ಜಿಲ್ಲೆಯಿಂದ ಹೊರಗೆ ಹಾಕಿ. ಯಾವುದೇ ನೇರ ಜನಸಂಪರ್ಕದ ಸಿಇಓ, ಜಿಲ್ಲಾಧಿಕಾರಿಯಂತಹ ಹುದ್ದೆಗಳಿಗೆ ಅನರ್ಹರೆಂದು ಅವರ ಸೇವಾ ದಾಖಲೆಯಲ್ಲಿ ಶರಾ ಬರೆಯಿರಿ.

ಕೂಲಿಕಾರರಿಗೆ, ಮಹಿಳಾ ಕೂಲಿಕಾರರಿಗೆ ಜಯವಾಗಲಿ. ಕರ್ನಾಟಕ ಪ್ರಾಂತ ಕೂಲಿಕಾರ ಸಂಘಕ್ಕೆ ಜಯವಾಗಲಿ.

ಕೂಲಿಕಾರರಿಗೆ ಕೂಡಲೇ ಉದ್ಯೋಗ ಖಾತರಿ ಯೋಜನೆಯ ಕೆಲಸ ನೀಡಲಿ. ಅವರ ಹಸಿವಿನ, ಬಡತನದ ಸಂಕಟ ಒಂದಿಷ್ಟು ಪರಿಹಾರ ಕಾಣಲಿ.

ಜಿ.ಎನ್. ನಾಗರಾಜ್

ಚನ್ನರಾಯಪಟ್ಟಣ ರೈತರ ಹೋರಾಟ: ರೈತರು ಎತ್ತುತ್ತಿರುವ ಪ್ರಶ್ನೆ

“ಸ್ವಿಗ್ಗಿ, ಜೊಮೋಟೋದಿಂದ ‘ಫಿಜ್ಜಾ-ಬರ್ಗರ್’ ಬರಬೇಕಾದರೂ ರೈತರು ತರಕಾರಿ, ಕಾಳು, ಕಡಿ ಬೆಳೀಲೇ ಬೇಕಲ್ಲವೇ?"



ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಎಂಬ ಆ ಹೋಬಳಿ ಕೇಂದ್ರದಿಂದ ಹೊರಟ ನಮಗೆ ಎದುರಾದದ್ದು ಪ್ರಶಾಂತವಾದ ಹಳ್ಳಿಗಳು. ಹಾಡ್ಯಾಳ, ನಲ್ಲಪ್ಪನಹಳ್ಳಿ ಇನ್ನೂ ಹೀಗೆ. ಸುಯ್ಯನೆ ಬೀಸುವ ಆಷಾಢದ ಗಾಳಿ. ಎಲ್ಲಿ ನೋಡಿದರೂ ಹಸಿರು. ರಾಗಿ, ಜೋಳದ ಹೊಲಗಳು. ದ್ರಾಕ್ಷಿ, ಮಾವು ಮುಂತಾಗಿ ಹಣ್ಣು ಬೆಳೆವ ತೋಟಗಳು. ಹಲಸು, ಚಕ್ಕೋತ, ನೇರಳೆ, ಅರಳಿ, ಬೇಲ ಮುಂತಾದ ಮರಗಳು. ಕ್ಯಾಮರಾ ಕಣ್ಣಲ್ಲಿ ತುಂಬಿಕೊಳ್ಳಲು ಕಷ್ಟವಾಗುವಷ್ಟು ದೊಡ್ಡ ಆಲದ ಮರಗಳು. ಹಳ್ಳಿಗಳಲ್ಲಿ ಹುಲ್ಲು ಮೇಯುವ ದನ–ಕರುಗಳು, ನೆಲ ಕೆದಕಿ ಹುಳು ಹುಪ್ಪಟೆ ಹುಡುಕುವ ಕೋಳಿ, ಕುರಿ–ಮೇಕೆಗಳು. ಕಪ್ಪು ಹಾವಿನಂತೆ ಹರಿದು ಹೋಗಿರುವ ರಸ್ತೆಗಳಲ್ಲಿ ಆಗೊಂದು ಈಗೊಂದು ಎಂಬಂತೆ ಬೈಕುಗಳು–ಕಾರುಗಳು. ಅದು ಬಿಟ್ಟರೆ ಬೆಂಗಳೂರಿನ ಕಡೆಗೆ ತರಕಾರಿ, ಹಾಲು–ಹಣ್ಣು ಮುಂತಾದ ‘ಸರಕು’ ಕೊಂಡೊಯ್ಯುವ ಸಮೃದ್ಧ ವಾಹನಗಳು. ಊರು ಪ್ರಶಾಂತವೆಂಬಂತೆ ಕಂಡರೂ ರೈತರ ಮನಸ್ಸಿನಲ್ಲಿ ದುಗುಡ, ದುಮ್ಮಾನ. ಇಲ್ಲಿ ತಲೆತಲಾಂತರಗಳಿಂದ ಆರಂಭ ಮಾಡಿಕೊಂಡು ಬಂದ ದೇವನಹಳ್ಳಿ ತಾಲ್ಲೂಕಿನ ಈ ರೈತ ಬಂಧುಗಳ ಮನದಾಳದಲ್ಲಿ, ಕೈಗಾರಿಕಾ ಪ್ರದೇಶದ ಅಭಿವೃದ್ಧಿಯ ಹೆಸರಿನಲ್ಲಿ ಕೆಐಎಡಿಬಿ ನೋಟಿಸ್ ನೀಡಿದಾಗಿನಿಂದಲೂ ಎದ್ದಿರುವ ತಳಮಳಗಳನ್ನು ಹಿಡಿದಿಡುವ ಸಣ್ಣ ಪ್ರಯತ್ನ ಇದು.



ಈ ಚಿತ್ರದಲ್ಲಿ ಇರುವವರು ನಾರಾಯಣಮ್ಮ. ನಲ್ಲಪ್ಪನಹಳ್ಳಿಯ ರೈತ ಮಹಿಳೆ. ವಯಸ್ಸು 80. ಕುಟುಂಬಕ್ಕೆ ಮೂರು ಎಕರೆ ಜಮೀನಿದೆ. ನೀರಾವರಿ ಸೌಕರ್ಯ ಇಲ್ಲ. ಮಳೆಯನ್ನು ಆಶ್ರಯಿಸಿ ರಾಗಿ, ಜೋಳ ಬೆಳೆಯುತ್ತಾರೆ. ನಾಲ್ಕೂ ಮಕ್ಕಳೂ ವ್ಯವಸಾಯವನ್ನೇ ನೆಚ್ಚಿಕೊಂಡಿರುವವರು. ಒಬ್ಬ ಮಗ ಮಾತ್ರ 7ನೇ ತರಗತಿವರೆಗೆ ಓದಿಕೊಂಡಿದ್ದಾನಷ್ಟೆ. ಉಳಿದವರು ಓದಿಯೂ ಇಲ್ಲ. ಕುಟುಂಬಕ್ಕೆ 10 ಕುರಿ, 4 ಹಸುಗಳಿವೆ. ಮನೆಯ ಬಳಿ ಒಂದಷ್ಟು ಕೋಳಿಗಳನ್ನು ಸಾಕಿಕೊಂಡಿದ್ದಾರೆ. ಭೂಮಿಯನ್ನೇ ನಂಬಿ ಬದುಕು ಕಟ್ಟಿಕೊಂಡಿರುವವರು ಇವರು.

ಇದೀಗ ನಾವು ಕೈಗಾರಿಕೆ ಮಾಡ್ತೀವಿ ಅಂತ ಹೇಳ್ಕೊಂಡು ಬಂಡವಾಳಿಗರು, ರಿಯಲ್ ಎಸ್ಟೇಟ್ ಮಾಲೀಕರು ಸರಕಾರದ ಮುಖವಾಡ ಮುಂದಿಟ್ಟುಕೊಂಡು ಭೂಮಿ ಕಿತ್ತುಕೊಳ್ಳಲು ಬಂದರೆ ಈ ಬಡವರು ಎಲ್ಲಿಗೆ ಹೋಗಬೇಕು. ಏನು ಮಾಡಬೇಕು. ಸರಕಾರ ಕೊಡುವ ಪರಿಹಾರದ ಹಣ ತಗೊಂಡು ಇವರು ಏನು ಮಾಡಬಹುದು? ಅದು ಎಷ್ಟು ದಿನ ಬರುತ್ತದೆ? ಏನೂ ನಷ್ಟ–ಅನಾಹುತ ಆಗದಂತೆ ಯಾವುದಾದರೂ ವ್ಯಾಪಾರ ವಹಿವಾಟನ್ನೋ, ಸಣ್ಣ ಪುಟ್ಟ ಕೈಗಾರಿಕೆಯನ್ನೋ ನಡೆಸುವ ತಿಳುವಳಿಕೆ, ಛಾತಿ–ಅನುಭವ ಈ ಕುಟುಂಬದ ಸದಸ್ಯರಿಗೆ ಇದೆಯಾ? ಭೂಮಿ ಕೊಟ್ಟ ಮೇಲೆ ಈ ಕುಟುಂಬಗಳಿಗೆ ಉಳಿಯೋ ಆಯ್ಕೆಗಳೇನು? ಇಲ್ಲಿ ಯಾವುದಾದರೂ ಕೈಗಾರಿಕೆ (ಕೈಗಾರಿಕೆ ಬಂದರೆ)ಯಲ್ಲಿ ವಾಚ್‌ಮನ್ ಕೆಲಸ, ಇಲ್ಲಾಂದರೆ ಕಸ ಗುಡಿಸೋ ಕೆಲಸ ಇಂಥದ್ದೇನಾದರೂ ಮಾಡಬೇಕು. ಅಲ್ಲವೇ? ಹಚ್ಚ ಹಸಿರಿನ ಫಲವತ್ತಾದ ಭೂಮಿಯ ಮಾಲಿಕರಾಗಿ, ಯಾರ ತಂಟೆಗೂ ಹೋಗದೇ ತಮ್ಮ ಪಾಡಿಗೆ ತಾವು, ದುಡಿಯುತ್ತಾ ಇರುವವರು ಇವರು. ಕುವೆಂಪು ಅವರು ಹೇಳುವ ‘ನೇಗಿಲ ಯೋಗಿಗಳು’ ಎಂದರೆ ಇವರೇ. ಮತ್ಯಾರೂ ಅಲ್ಲ. ತಮ್ಮ ಕುಟುಂಬಕ್ಕೂ, ಬೆಂಗಳೂರಿನಂತಹ ನಗರಕ್ಕೂ ಅನ್ನ ಬೆಳೆದುಕೊಡುತ್ತಿರುವ ಇವರು ಭೂಮಿ ಕಳೆದುಕೊಂಡು ಹೀಗೆ ಬೀದಿ ಪಾಲಾಗಬೇಕೇ? ಇಂತಹ ಪ್ರಶ್ನೆಗಳು ಗಂಭೀರವಾಗಿ ಎದ್ದು ಬಂದಿವೆ. ಮೊಬೈಲ್ ಡೇಟಾದಿಂದ ಹೊಟ್ಟೆ ತುಂಬುವುದಿಲ್ಲ ತಾನೆ? ಕಂಪ್ಯೂಟರ್–ಲ್ಯಾಪ್‌ಟಾಪ್–ಟ್ಯಾಬ್‌ಗಳೊಗಿನ ಬದನೆಕಾಯಿ, ಹೀರೇಕಾಯಿ, ಮೂಲಂಗಿ–ಪರಂಗಿಗಳನ್ನು ‘ಡೌನ್ ಲೋಡ್’ ಮಾಡಿಕೊಂಡು ಅಡುಗೆ ಮಾಡೋದಕ್ಕೆ, ಇಲ್ಲ ತಿನ್ನೋದಕ್ಕೆ ಆಗೋದಿಲ್ಲ ತಾನೆ!! ಹಾಗಿದ್ದ ಮೇಲೆ ಆಳುವವರಿಗೆ ಕೊಂಚ ವಿವೇಕ ಬೇಕು ತಾನೇ? ಪರಂಗಿಯವರ ಥರಾನೇ ಬಂಡವಾಳಿಗರು ಕೈತೋರಿದ ಭೂಮಿ ಕಿತ್ತು ಕೊಡುತ್ತೇವೆ ಎಂದರೆ ಒಪ್ಪಬಹುದೇ?



ಅನಸೂಯಮ್ಮ, ರೈತ ಮಹಿಳೆ : ನಲ್ಲಪ್ಪನಹಳ್ಳಿ.

ಹಳ್ಳಿಗಳನ್ನೇ ಇಲ್ಲವಾಗಿಸುತ್ತಾ ಹೋದರೆ?

ಬೆಂಗಳೂರಿನಂತಹ ಮಹಾನಗರಗಳಲ್ಲಿ ಹುಟ್ಟಿ ಬೆಳೆಯುವ ಈಗಿನ ಕಾಲದ ಎಷ್ಟೋ ಮಕ್ಕಳಿಗೆ ತಾವು ನಂದಿನಿ ಬೂತ್‌ನಿಂದ ಅಥವಾ ಅಂಗಡಿಗಳಿಂದ ತರುವ ‘ನಂದಿನಿ’ ಹಾಲೋ, ‘ದೊಡ್ಲ’ನೋ ಅಥವಾ ‘ಹೆರಿಟೇಜ್’ದೋ ಹಾಲಿನ ಪಾಕೆಟ್‌ಗಳಲ್ಲಿ ತುಂಬಿರುವ ಹಾಲು ಎಲ್ಲಿಂದ ಬರುತ್ತದೆ ಎಂಬುದು ಗೊತ್ತಿರುವುದಿಲ್ಲ. ಹಾಲು, ಮಳಿಗೆ ಅಥವಾ ಅಂಗಡಿಯಲ್ಲಿ ಉತ್ಪಾದನೆ ಆಗುವುದಿಲ್ಲ. ಹಸು–ಎಮ್ಮೆಗಳು ಹಾಲು ಕೊಡುತ್ತವೆ ಎಂಬುದು ಮಕ್ಕಳಿಗೆ ಬೇಗ ಮನವರಿಕೆ ಆಗುವುದಿಲ್ಲ. ಈಗಿನ ದಿನಗಳಲ್ಲಿ ಜೊಮೊಟೋ, ಸ್ವಿಗ್ಗಿಗಳಲ್ಲಿ ಮನೆ ಬಾಗಿಲಿಗೆ ಊಟ, ಫಿಜ್ಜಾ, ಬರ್ಗರ್ ಡೆಲಿವರಿ ಕೊಟ್ಟುಬಿಡುತ್ತಾರೆ. ದವಸ–ಧಾನ್ಯ, ಕಾಳು–ಕಡಿಗಳು ಸಹ ಹಾಗೆ ಆನ್ ಲೈನ್ ಬುಕ್ಕಿಂಗ್‌ನಿಂದ ಬಂದು ಬೀಳುತ್ತವೆ. ಇವನ್ನಷ್ಟೇ ನೋಡುವ ಮಕ್ಕಳಿಗೆ ಹೊಲ, ಗದ್ದೆ, ತೋಟಗಳ ಕಲ್ಪನೆ, ರೈತರ ಬದುಕಿನ ಸಂಕಟ–ಸಂಭ್ರಮಗಳ ಅಂದಾಜೇ ಸಿಕ್ಕುವುದಿಲ್ಲ. ಫಿಜ್ಜಾ, ಬರ್ಗರ್, ಬಿಸ್ಕತ್ತು, ಬನ್ನು ತಯಾರಿಸಬೇಕಾದರೂ ರೈತರು ಬೆಳೆಯುವ ಸೊಪ್ಪು–ತರಕಾರಿ, ದವಸ–ಧಾನ್ಯ, ಕಾಳು–ಕಡಿ ಬೇಕು, ಅದಕ್ಕೆ ರೈತರ ಕೈಯಲ್ಲಿ ಭೂಮಿ ಇರಬೇಕು ಎಂಬುದು ಅವರಿಗೆ ಅರ್ಥವಾಗುವುದಿಲ್ಲ. ಮಕ್ಕಳಿಗೇನೋ ಅರ್ಥವಾಗುವುದಿಲ್ಲ ಸರಿ, ಈ ಸರಕಾರ ನಡೆಸುವ ದೊಡ್ಡ ಜನಗಳಿಗೂ ಅದು ಅರ್ಥವಾಗುವುದಿಲ್ಲ ಎಂದರೆ ಏನು ಕತೆ? ಸರಕಾರ ರೈತರ ಮಾತನ್ನು ಕೇಳಿಸಿಕೊಳ್ಳೋದಕ್ಕೆ ತಯಾರಿಲ್ಲ. ಆದರೆ ಆರಂಭವನ್ನೇ ನೆಚ್ಚಿಕೊಂಡಿರುವ ಇಂತಹ ರೈತರ ಮಾತನ್ನು ರಾಜ್ಯದ ಜನ ಕೇಳಿಸಿಕೊಳ್ಳಬೇಕು ಅವರ ಜೊತೆಗೆ ನಿಲ್ಲಬೇಕು.



ಪುಷ್ಪ, ನಲ್ಲಪ್ಪನಹಳ್ಳಿ.

ರೈತರು ಬೆಳೆ ಬೆಳೀಲಿಲ್ಲ ಅಂದ್ರೆ ಸಿಟಿ ಜನ ಏನ್ ತಿನ್ತರೆ?

ಮನೆಯಲ್ಲಿ ನಾನು ನನ್ನ ಗಂಡ ಮತ್ತು ಇಬ್ಬರು ಮಕ್ಕಳು ಇದ್ದೀವಿ. ನಮಗೆ 3 ಎಕರೆ ಜಮೀನಿದೆ. 2 ಎಕರೇಲಿ ದ್ರಾಕ್ಷಿ ಹಾಕಿದೀವಿ. ರಾಗಿ, ಕಂಬಳಿ ಸೊಪ್ಪು (ಹಿಪ್ಪು ನೇರಳೆ) ಬೆಳೀತೀವಿ. ವ್ಯವಸಾಯದ ಕೆಲಸಕ್ಕೆ ಕೂಲಿಗಳು ಸಿಗಲ್ಲ. ರಾತ್ರಿ ಮೂರು ಗಂಟೆ ಹೊತ್ತು ಮಾತ್ರ ಕರೆಂಟು ಕೊಡ್ತಾರೆ. ರಸಗೊಬ್ಬರದ ಬೆಲೆ ಸಿಕ್ಕಾಪಟ್ಟೆ ಜಾಸ್ತಿ ಆಗಿದೆ. ತಿಪ್ಪೆ ಗೊಬ್ಬರಕ್ಕೂ ಲೋಡ್‌ಗೆ 10,000 ರೂಪಾಯಿ ಕೊಡ್ಬೇಕು. ಇಷ್ಟರ ಮಧ್ಯೆನೂ ಕಷ್ಟಪಟ್ಟು ವ್ಯವಸಾಯ ಮಾಡ್ತಾ ಇದ್ದೀವಿ.

ನಾವು ಬೆಳೆದಿದ್ ದ್ರಾಕ್ಷಿಗೆ ಕೆಜಿಗೆ 10–12 ರೂಪಾಯಿ ಸಿಗುತ್ತೆ. ಜಾಸ್ತಿ ಅಂದರೆ 20 ರೂಪಾಯಿ. ಅದೇ ದ್ರಾಕ್ಷಿನ ಕೆ.ಆರ್.ಪುರಂ ನಲ್ಲಿ ಕೆಜಿಗೆ 80 ರೂಪಾಯಿಗೆ ಮಾರ್ತಾರೆ. ಸರಕಾರ ಕರೆಂಟು, ನಾವ್ ಬೆಳಿದ್ದಿದ್ದಕ್ಕೆ ಸರಿಯಾದ ಬೆಲೆ ಕೊಡಿಸ್ಕೊಟ್ರೆ ಇನ್ನೂ ಚೆನ್ನಾಗಿ ವ್ಯವಸಾಯ ಮಾಡ್ತೀವಿ. ಈಗ ಹಸು–ಎಮ್ಮೆ, ಕುರಿ–ಕೋಳಿ ಸಾಕ್ಕೊಂಡ್ ಎಂಗೋ ಬದುಕ್ತಾ ಇದ್ದೀವಿ. ಈಗ ನಮ್ಮ ಜಮೀನು ಕಿತ್ಕೊಂಡ್ರೆ ನಾವೇನು ತಿನ್ನೋದು. ರೈತರು ಬೆಳೆ ಬೆಳೀಲಿಲ್ಲ ಅಂದ್ರೆ ಸಿಟಿ ಜನ ಏನ್ ತಿನ್ತರೆ?



ಪ್ರೇಮ, ರೈತ ಮಹಿಳೆ ; ನಲ್ಲಪ್ಪನಹಳ್ಳಿ.

ನಾವು ಭೂಮಿ ಕೊಡಲ್ಲ, ಹಣ್ಣು ತರಕಾರಿ ಬೆಳೀತೀವಿ

ನಮ್ಮ ಕುಟುಂಬಕ್ಕೆ ಎರಡು ಎಕರೆ ಜಮೀನಿದೆ. ಅದರಲ್ಲಿ ದ್ರಾಕ್ಷಿ, ಬಾಳೆ ಬೆಳೀತೀವಿ. ಕ್ಯಾಬೇಜ್, ಶುಂಟಿಯನ್ನೂ ಬೆಳೀತೀವಿ. ಬಾಳೇಹಣ್ಣಿಗೆ ಕೆಜಿಗೆ 15–20 ರೂಪಾಯಿ ಸಿಕ್ಕರೆ ಅದೇ ಜಾಸ್ತಿ. ಕ್ಯಾಬೇಜ್ (ಎಲೆಕೋಸು)ಗೆ ಒಂದು ಕೆಜಿಗೆ 1 ರೂಪಾಯಿಯಿಂದ 20–25 ರೂಪಾಯಿವರ್‍ಗೂ ಎಷ್ಟು ಸಿಗುತ್ತೋ ಗ್ಯಾರಂಟಿ ಇಲ್ಲ. ಇಷ್ಟಾದರೂ ನಾವು ವ್ಯವಸಾಯ ಬಿಡೋದಿಲ್ಲ. ಭೂಮಿ ಕೊಟ್ಟರೆ ಕೆಲಸ ಕೊಡ್ತೀವಿ ಅಂತಾರೆ. ಹುಡುಗ್ರಾಗಿರೋರಿಗೆ ಎಂಥದ್ದೋ ಕೆಲಸ ಕೊಡ್ತಾರೆ. ಆದರೆ ಸ್ವಲ್ಪ ವಯಸ್ಸಾದವರಿಗೆ ಅವರು ಕೆಲ್ಸ ಕೊಡಲ್ಲ. ಅವರು ಏನು ಮಾಡ್ಬೇಕು. ಬೆಂಗಳೂರಿನ ಜನಕ್ಕೆ ನಾವು ಬೆಳೆಯೋ ಹಣ್ಣು, ತರಕಾರಿ ಬೇಕೇ ಬೇಕು ತಾನೆ. ನಾವು ಹಣ್ಣು ತರಕಾರಿ ಬೆಳೀತೀವಿ. ಭೂಮಿ ಕೊಡಲ್ಲ.

ಸರಕಾರ ನಮ್ಮ ಕಷ್ಟ ಕೇಳ್ಬೇಕು ಜಮೀನು ಕೇಳಬಾರದು

ನಮಗೆ 2 ಎಕರೆ ಜಮೀನಿದೆ. 1 ಎಕರೇಲಿ ರಾಗಿ ಬೆಳ್ಕೋತೀವಿ. ಉಳಿದಿದ್ರಲ್ಲಿ ಗುಲಾಬಿ ಗಿಡ ಹಾಕಿದೀವಿ. ಕೆಜಿಗೆ 50 ರೂಪಾಯಿ, ಜಾಸ್ತಿ ಅಂದರೆ 100 ರೂಪಾಯಿ ಸಿಗುತ್ತೆ. ಮಳೆ ಜಾಸ್ತಿ ಬಂದರೆ ಅರಿಷಿನ ರೋಗ ಬರುತ್ತೆ. ಹವಾಗುಣ ಏರುಪೇರು ಆದರೆ ಹೂವು ಹಾಳಾಗುತ್ತೆ. ನಮ್ಮ ಕಷ್ಟ ಕೇಳೋರಿಲ್ಲ. ಸರಕಾರ ನಮ್ಮ ಕಷ್ಟ ಕೇಳ್ಬೇಕು. ಜಮೀನು ಕೇಳಬಾರದು. ನಾವು ಭೂಮಿ ಕೊಡಲ್ಲ.

23 ದಾಖಲೆ ಕೊಟ್ಟು ಅಲೆಯಬೇಕು, ಲಂಚವನ್ನೂ ಕೊಡಬೇಕು ; ಸೋ, ಭೂಮಿ ಕೊಡಲ್ಲ..

ಇವರ ಹೆಸರು ಮುಕುಂದ್. ವಯಸ್ಸು 45. ಬೆಂಗಳೂರಿನ ವಿವೇಕಾನಂದ ಕಾಲೇಜಿನಲ್ಲಿ ಬಿಎ ಓದಿದ್ದಾರೆ. ವ್ಯವಸಾಯ, ಹೈನುಗಾರಿಕೆ, ಕೋಳಿ ಸಾಕಾಣಿಕೆ ಎಲ್ಲದರ ಕಷ್ಟ ನಷ್ಟ ಬಲ್ಲ ರೈತರು. “ಸರಕಾರ ಏನೇ ಮಾಡಿದರೂ, ಏನೇ ಆದರೂ ನಾವು ನಮ್ಮ ಜಮೀನನ್ನು ಕೊಡುವುದಿಲ್ಲ” ಎನ್ನುತ್ತಾರೆ ಅವರು. ಅದಕ್ಕೆ ಸರಿಯಾದ ಕಾರಣವನ್ನೂ ಕೊಡುತ್ತಾರೆ. ಮುಂದೆ ಇರುವುದು ಅವರದೇ ಮಾತುಗಳು:

“ನಮ್ಮ ತಂದೆ, ಚಿಕ್ಕಪ್ಪ, ಇಬ್ಬರು ಅತ್ತೆಯರ ಒಟ್ಟು ಕುಟುಂಬಕ್ಕೆ ಪೋಲನಹಳ್ಳಿ, ಮುದ್ದೇನಹಳ್ಳಿಯಲ್ಲಿ ಒಟ್ಟು 15 ಎಕರೆ ಜಮೀನಿದೆ. ಅದರಲ್ಲಿ 4 ಎಕರೆ ಮಾವು, 4 ಎಕರೆಯಲ್ಲಿ ಗೋಡಂಬಿ, 2 ಎಕರೆಯಲ್ಲಿ ನೀಲಗಿರಿ ಬೆಳೆದಿದ್ದೇವೆ. ಇನ್ನು ಉಳಿದಂತೆ ರಾಗಿ ಬೆಳೆಯುತ್ತೇವೆ. ಈಗಾಗಲೇ ದೇವನಹಳ್ಳಿ ವಿಮಾನ ನಿಲ್ದಾಣದ ಸಮೀಪದ ‘ಏರೋ ಸ್ಪೇಸ್ ಕೈಗಾರಿಕಾ ಪ್ರದೇಶ’ ಹೆಸರಿನ ಯೋಜನೆಗೆ ನಮ್ಮ ಸಂಬಂಧಿಕರು ಭೂಮಿ ಕೊಟ್ಟಿದ್ದಾರೆ. ಅವರ ಅನುಭವ ಏನು ಅಂತ ನೋಡಬೇಕು. ಸರಕಾರ ರೈತರ ಭೂಮಿಗೆ ಪರಿಹಾರ ಕೊಡುತ್ತೇನೆಂದರೂ, ಅದು ಎಕರೆಗೆ 1.10 ಕೋಟಿ. ಇದರಲ್ಲಿ ಶೇ. 10 ರಷ್ಟು ಹಣವನ್ನು ಅಧಿಕಾರಿಗಳಿಗೆ ಲಂಚವಾಗಿ ಕೊಡಲೇ ಬೇಕು. (ಯಾವ ಅಧಿಕಾರಿಯೂ ನೇರವಾಗಿ ಲಂಚ ಕೇಳುವುದಿಲ್ಲ. ಆದರೆ ಅದಕ್ಕಾಗೇ ಬ್ರೋಕರ್‌ಗಳ ದೊಡ್ಡ ದಂಡೇ ಇದೆ.) ಭೂಮಿಗೆ ಪರಿಹಾರ ಕೊಡಬೇಕಾದರೆ ಸರಕಾರ ಒಟ್ಟು 23 ದಾಖಲೆಗಳನ್ನು ಕೇಳುತ್ತದೆ. ಎಲ್ಲವೂ ಸರಿ ಇರಬೇಕು. ಏನಾದರೂ ಸಣ್ಣ ಪುಟ್ಟ ➚

ಕ್ವೈರಿ (ಆಕ್ಷೇಪಣೆ) ಇದ್ದರೆ ಪರಿಹಾರದಲ್ಲಿ ಅಧಿಕಾರಿಗಳಿಗೆ ಶೇ.20 ಪರಿಹಾರದ ಹಣ ಕೊಡಬೇಕು. (ಏಜೆಂಟರು ಯಾರಿಂದಲಾದರೂ ಆಕ್ಷೇಪಣೆ ಹಾಕಿಸುತ್ತಾರೆ.) ಜಮೀನಿನ ಮೇಲೆ ಕೇಸುಗಳಿದ್ದರೆ ಶೇ. 30 ಲಂಚ ಕೊಡಬೇಕು. ದುರಸ್ತಿ ಆಗಿಲ್ಲ ಅಂದರೆ ಅದು ಬೇರೆ. ಆಗ ಶೇ.25 ಲಂಚ. 'ಪಿ–ನಂಬರ್' ಅಂದರೆ ಗೋಮಾಳ, ಗ್ರ್ರಾಂಟ್ ಜಮೀನು (ಸರ್ಕಾರ ಅನುದಾನ ನೀಡಿದ್ದು.), ಸರಕಾರಿ ಜಮೀನು ಉಳುಮೆ ಮಾಡುತ್ತಿದ್ದುದಾದರೆ ಶೇ. 25 ಲಂಚ. ಪೋಡಿ–ದುರಸ್ತಿ ಆಗಿಲ್ಲ ಅಂದರೆ ಇನ್ನೂ ಜಾಸ್ತಿ. ಕೋರ್ಟುಗಳಲ್ಲಿ ವ್ಯಾಜ್ಯ ನಡೆಯುತ್ತಿದ್ದರೆ ಬೇರೆ ಬೇರೆ ಲೆವೆಲ್ ಲಂಚ. ಸಿವಿಲ್ ಸೂಟ್‌ಗೆ ಬೇರೆ, ಕ್ರಿಮಿನಲ್ ಸೂಟಿಗೆ ಬೇರೆ.

ಪರಿಹಾರ ಪಡೆದುಕೊಳ್ಳೊದಕ್ಕೆ ಕಚೇರಿಯಿಂದ ಕಚೇರಿಗಳಿಗೆ ಸಾಕಷ್ಟು ಅಲೀಬೇಕು. ಅಷ್ಟು ಹೋಗಿ ಬಂದು ಮಾಡಿ ಪರಿಹಾರ ಬಂದರೂ, ಸ್ನೇಹಿತರು–ಬಂಧುಗಳ ಮುತ್ತಿಕೊಳ್ಳುತ್ತಾರೆ. ಕೊಡದೇ ಇರಕ್ಕಾಗಲ್ಲ. ಮಕ್ಕಳು ಮರಿಗಳು, ದುಂದು ವೆಚ್ಚಕ್ಕೆ, 'ಎಣ್ಣೆ'ಗೆ ದಾಸರಾಗಬಹುದು. ಜವಾಬ್ದಾರಿಯಿಂದ ಖರ್ಚು ಮಾಡ್ತೇವಿ ಅಂತ ಹೊರಟವರೂ, ಕಾರು–ಒಡವೆ ಅಂತ, 'ಒಂದು ಒಳ್ಳೆ ಮನೆ' ಕಟ್ಟಿಕೊಳ್ಳೋಣ ಅಂತ ಹೋಗಿ ಯಾವ ಆದಾಯ, ಲಾಭವನ್ನೂ ತರದೇ ಇರೋ ಕಾರು, ಮನೆ, ಮದುವೆಗೆ ಹಣ ಖರ್ಚು ಮಾಡಿಕೊಂಡು ಖಾಲಿ ಆಗಿದ್ದಾರೆ. ಎಷ್ಟೋ ಮನೆಗಳಲ್ಲಿ ಮಕ್ಕಳು, ಅಗತ್ಯ ಇಲ್ಲದಿದ್ದರೂ ಬೈಕ್ ಅದು ಇದು ಅಂತ ಹಠ ಮಾಡಿ ಕೊಡಿಸಿಕೊಂಡು, ಊರೂರು ತಿರುಗಿ ಪರೋಡಿಗಳಾಗಿ, ಪೋಲಿ ಬಿದ್ದಿದ್ದಾರೆ. ಮತ್ತೊಂದು ಕಡೆ ಮೊದಲ ಹಂತದಲ್ಲಿ ವಶಪಡಿಸಿಕೊಂಡ 1,282 ಎಕರೆ ಭೂಮಿಯಲ್ಲಿ ಬಹಳಷ್ಟು ಬಳಕೆ ಆಗಿಲ್ಲ. ಬ್ರಿಗೇಡ್ ಬಿಲ್ಡರ್ಸ್‌ನಂತಹ ಖಾಸಗಿ ನಿರ್ಮಾಣ ಸಂಸ್ಥೆಗಳಿಗೆ (73 ಎಕರೆ), ಚಾಣಕ್ಯ ಯೂನಿವರ್ಸಿಟಿಯಂತ ಖಾಸಗಿ ಸಂಸ್ಥೆಗಳಿಗೆ (117 ಎಕರೆ) ಅಗ್ಗದ ಬೆಲೆಗೆ ಕೊಡಲಾಗಿದೆ. (ರೈತರಿಗೆ 1.2 ಕೋಟಿ ಕೊಟ್ಟು ಖರೀದಿಸಿದ ಭೂಮಿಯನ್ನು ಚಾಣಕ್ಯ ವಿವಿಗೆ ಎಕರೆಗೆ 50 ಲಕ್ಷಕ್ಕೆ ನೀಡಲಾಗಿದೆ.)


ಮುಕುಂದ್

ಮೊದಲ ಹಂತದಲ್ಲೂ ಭೂಸ್ವಾಧೀನ ಬಿಟ್ಟಿಲ್ಲ

ಮೊದಲ ಹಂತದ 'ಏರೋ ಸ್ಪೇಸ್' ಯೋಜನೆಯಲ್ಲಿ ಭೂಸ್ವಾಧೀನ ಮಾಡಿಕೊಳ್ಳಲು ನೋಟಿಫೈ ಮಾಡಿರುವ ನಮ್ಮ ಕುಟುಂಬದ ಪೋಲನಹಳ್ಳಿ ಜಮೀನಿನಲ್ಲಿ, 12.5 ಎಕರೆ ಜಾಗದಲ್ಲಿ ಕೋಳಿ ಫಾರಂ ನಡೆಸುತ್ತಿದ್ದೇವೆ. ಸದ್ಯ 25 ಸಾವಿರ ಕೋಳಿಗಳನ್ನು ಸಾಕುತ್ತಿದ್ದೇವೆ. ಇದಲ್ಲದೇ ಬಾದಾಮಿ, ಮಲ್ಲಿಕಾ, ಸೇಂದೂರ, ರಸಪುರಿ, ಬೈಗಾನ್‌ಪಲ್ಲಿ ಮುಂತಾದ ತಳಿಗಳ 600 ಮಾವಿನ ಮರಗಳಿವೆ. ಸಪೋಟ, ಸೀಬೆ, ಬೆಟ್ಟದ ನೆಲ್ಲಿಕಾಯಿ, ಚಕ್ಕೋತ, 'ಬೆಂಗಳೂರು ಬ್ಲೂ' ತಳಿಯ ಕಪ್ಪು ದ್ರಾಕ್ಷಿ, ಲಿಚಿ ಹಣ್ಣಿನ ಮರಗಳು, ನೈಸರ್ಗಿಕವಾಗಿ ಬೆಳೆದಿರುವ ಶ್ರೀಗಂಧ ಎಲ್ಲವೂ ಇವೆ. 'ಹಾಲೋ ಬ್ರಿಕ್ಸ್' ಯೂನಿಟ್ ಇದೆ. ಬೆಂಗಳೂರು ಮತ್ತು ಸುತ್ತಮುತ್ತಲ ನಗರಗಳಿಗೆ ಬೇಕಾದ ಮೊಟ್ಟೆ, ಮಾಂಸ, ಹಣ್ಣು ಹಂಪಲು, ಇಟ್ಟಿಗೆ ಉತ್ಪಾದಿಸಿ ಕೊಡುತ್ತಿದ್ದೇವೆ. ಮೊದಲ ಹಂತದ ಭೂಸ್ವಾಧೀನದ ವಿಷಯದಲ್ಲಿ ನಾವು ಕೋರ್ಟಿಗೆ ಹೋಗಿದ್ದೇವೆ. ಮೊದಲ ಹಂತದ ಯೋಜನೆಯಲ್ಲಿ ಕೃಷಿ ಭೂಮಿ ಬಹಳ ಕಡಿಮೆ ಇತ್ತು. ಹಾಗಾಗಿ ಒಂದಷ್ಟು ಜನ ಭೂಮಿ ಕೊಟ್ಟಿದ್ದಾರೆ. ಆದರೆ ನಾವು ನಮ್ಮ ಕೃಷಿ ಭೂಮಿಯ ಸ್ವಾಧೀನ ಬಿಟ್ಟಿಲ್ಲ.

ಏನಾದರಾಗಲಿ ಹೋರಾಡ್ತಿವಿ.

"ಈಗ ಎರಡನೇ ಹಂತದ ಭೂಸ್ವಾಧೀನ ಯೋಜನೆಯಲ್ಲಿ ನೋಟಿಫಿಕೇಷನ್ ಹೊರಡಿಸಿರುವುದರಿಂದ ರೈತರ ಕೃಷಿಗೂ ಸಮಸ್ಯೆಯಾಗಿದೆ. ಬೋರ್ ಕೊರೆಸಬೇಕು. ಹಣ ಹಾಕಿದರೆ ಮುಂದೆ ಏನಾಗುವುದೋ ಎಂಬ ಆತಂಕ ರೈತರಿಗೆ. ಹಲವು ಬೆಳೆಗಳು ಒಣಗುತ್ತಿವೆ. ಏನಾದರಾಗಲಿ ನಾವು ಭೂಮಿ ಕೊಡೋದಿಲ್ಲ. ಹೋರಾಡ್ತಿವಿ."

–ಮುಕುಂದ್, ರೈತರು. ಚೀಮಾಚನಹಳ್ಳಿ

ಕಾರ್ಪೊರೇಟ್‌ಗಳಿಗೆ ಸಬ್ಸಿಡಿ ಕೊಡುವ ಇಎಲ್‌ಐ ಯೋಜನೆಯನ್ನು ರದ್ದುಗೊಳಿಸಿ- ಘನತೆಯ ಉದ್ಯೋಗ ನಿರ್ಮಾಣಕ್ಕೆ ಹಣ ಒದಗಿಸಿ

ದೊಡ್ಡ ಕಾರ್ಪೊರೇಟ್ ಸಮೂಹಗಳಿಗೆ ಹಣವನ್ನು ವರ್ಗಾಯಿಸುವ ಉದ್ದೇಶವನ್ನು ಹೊಂದಿರುವ ಉದ್ಯೋಗಕ್ಕೆ ತಳಕು ಹಾಕಿರುವ ಪ್ರೋತ್ಸಾಹಕ (Employment Linked Incentive - ಇಎಲ್‌ಐ) ಯೋಜನೆಗೆ ಕೇಂದ್ರ ಮಂತ್ರಿ ಸಂಪುಟ ಮಂಜೂರಾತಿ ನೀಡಿರುವುದನ್ನು ವಿರೋಧಿಸುವುದಾಗಿ ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ಕಾರ್ಮಿಕರ ಹಿತಗಳನ್ನು ಬಲಿಗೊಟ್ಟು ಕಾರ್ಪೊರೇಟ್‌ಗಳಿಗೆ ಲಾಭ ಮಾಡಿಕೊಡಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಮಾಡಿದ ಮತ್ತೊಂದು ಪ್ರಯತ್ನ ಇದು ಎನ್ನುತ್ತ, ಇದು ಅದರ ಬಂಡತನಕ್ಕೆ ಮತ್ತೊಂದು ಉದಾಹರಣೆಯಾಗಿದೆ ಎಂದು ಅಭಿಪ್ರಾಯ ಪಟ್ಟಿದೆ.

ಇಎಲ್‌ಐ ಯೋಜನೆಯು ಯುವಕರಲ್ಲಿ ಭ್ರಮೆ ಹುಟ್ಟಿಸಲು ಉದ್ಯೋಗ ಸೃಷ್ಟಿ, ಉದ್ಯೋಗಾರ್ಹತೆಯನ್ನು ಮತ್ತು ಸಾಮಾಜಿಕ ಭದ್ರತೆಯನ್ನು ಹೆಚ್ಚಿಸುವ ಭರವಸೆಯ ಮರೆಯಲ್ಲಿ ಕಾರ್ಪೊರೇಟ್‌ಗಳಿಗೆ ಸಾರ್ವಜನಿಕ ಹಣವನ್ನು ವರ್ಗಾಯಿಸುವ ಮತ್ತೊಂದು ಮೋಸದ ಯೋಜನೆಯಾಗಿದೆ. ಈ ಯೋಜನೆಯು ಶಿಥಿಲ ಮತ್ತು ಅನಿಶ್ಚಿತ ಸ್ವರೂಪದ ಉದ್ಯೋಗಗಳನ್ನು ಉತ್ತೇಜಿಸುತ್ತದೆ, ಹೂಡಿಕೆ ವೆಚ್ಚ, ಉತ್ಪಾದನಾ ವೆಚ್ಚಗಳು, ಶ್ರಮ ವೆಚ್ಚಗಳು ಮತ್ತು ದೇಶೀಯ ಮತ್ತು ವಿದೇಶಿ ಉದ್ದಿಮೆ ಮಾಲಕರ ಶಾಸನಾತ್ಮಕ ಬಾಧ್ಯತೆಗಳನ್ನು ನಿರ್ವಹಿಸಲು ಅವರಿಗೆ ಸಾರ್ವಜನಿಕ ಖಜಾನೆಯಿಂದ ಸಬ್ಸಿಡಿ ಒದಗಿಸುವಂತದ್ದು ಎಂದು ಸಿಪಿಐ(ಎಂ) ವಿಶ್ಲೇಷಿಸಿದೆ.

ಗ್ರಾಮೀಣ ಪ್ರದೇಶದ ಬಡವರಿಗೆ ಪ್ರಯೋಜನವನ್ನು ನೀಡುವ ಮನರೇಗ (MGNREGA)ಗಾಗಿ ಬಜೆಟ್ ಹಂಚಿಕೆಗಳನ್ನು ಕಡಿತಗೊಳಿಸುತ್ತಿರುವ ಮತ್ತು ನಗರ ಪ್ರದೇಶಗಳಿಗೆ ಅಂತಹ ಉದ್ಯೋಗ ಖಾತರಿ ಕಾಯ್ದೆಯನ್ನು ರೂಪಿಸಬೇಕೆಂಬ ಆಗ್ರಹವನ್ನು ನಿರ್ಲಕ್ಷಿಸುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವು, ಅದೇ ಸಮಯದಲ್ಲಿ ಕಾರ್ಪೊರೇಟ್‌ಗಳಿಗೆ ಪ್ರೋತ್ಸಾಹದ ಹೆಸರಿನಲ್ಲಿ ಭಾರಿ ರಿಯಾಯಿತಿಗಳನ್ನು ಕೊಡುತ್ತಿದೆ.

ಕಾರ್ಪೊರೇಟ್ ವರ್ಗಕ್ಕೆ ಸಬ್ಸಿಡಿ ನೀಡುವ ಬದಲು, ಸಾಕಷ್ಟು ಹಣವನ್ನು ಹಂಚಿಕೆ ಮಾಡಿ ಬೃಹತ್ ಸಂಖ್ಯೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಮತ್ತು ಆರೋಗ್ಯ, ಶಿಕ್ಷಣ, ಸಾರ್ವಜನಿಕ ಸಾರಿಗೆ ಮುಂತಾದ ಸಾರ್ವಜನಿಕ ಸೇವೆಗಳನ್ನು ವಿಸ್ತರಿಸುವ ಮೂಲಕ, ಕನಿಷ್ಠ ವೇತನ, ಉದ್ಯೋಗ ಭದ್ರತೆ ಮತ್ತು ಸಾಮಾಜಿಕ ಭದ್ರತೆಯೊಂದಿಗೆ ಘನತೆ ನೀಡುವ ಉದ್ಯೋಗವನ್ನು ಖಚಿತಪಡಿಸಬೇಕು ಎಂದು ಆಗ್ರಹಿಸುತ್ತ, ಸಿಪಿಐ(ಎಂ) ಪೊಲಿಟ್‌ಬ್ಯುರೊ, ಸರ್ಕಾರ ತಕ್ಷಣವೇ ಇಎಲ್‌ಐ ಯೋಜನೆಯನ್ನು ರದ್ದುಗೊಳಿಸಿ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸಬೇಕೆಂದು ಒತ್ತಾಯಿಸಿದೆ.

ಚನ್ನರಾಯಪಟ್ಟಣದಲ್ಲಿ ಬಲವಂತದ ಭೂಸ್ವಾಧೀನವನ್ನು ರದ್ದುಪಡಿಸಿ - ಸಿಪಿಐ(ಎಂ) ಆಗ್ರಹ

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣದ ರೈತರು, ಬಲವಂತದ ಹಾಗೂ ಅನ್ಯಾಯದ ಕೆಐಎಡಿಬಿ ಭೂ ಸ್ವಾಧೀನ ವಿರೋಧಿಸಿ ಸುಮಾರು ಮೂರೂವರೆ ವರ್ಷಗಳಿಂದ ಹೋರಾಡುತ್ತಿದ್ದಾರೆ. ಈ ಸಂಬಂಧ ಜುಲೈ 15ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಭೆ ಕರೆದಿದ್ದಾರೆ. ಅಂದಿನ ಸಭೆಯಲ್ಲಿ ಸಿದ್ದರಾಮಯ್ಯನವರು ಈ ರೈತರ ಹಕ್ಕೋತ್ತಾಯವಾಗಿರುವ ಚನ್ನರಾಯಪಟ್ಟಣ ಹೋಬಳಿ ಭೂ ಸ್ವಾಧೀನವನ್ನು ಸಂಪೂರ್ಣ ರದ್ದುಪಡಿಸುವ ತೀರ್ಮಾನವನ್ನು ಪ್ರಕಟಿಸಬೇಕು ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಆಗ್ರಹಿಸಿದೆ.

ಕೈಗಾರಿಕಾ ಬೆಳವಣಿಗೆಯ ಉದ್ದೇಶಕ್ಕಿಂತ, ಕೃಭೂಮಿ ವ್ಯಾಪಾರದ ದಂದೆಕೋರರಿಗೆ ಲಾಭ ಮಾಡಿಕೊಡುವ ಕುಖ್ಯಾತಿಯನ್ನು ರಾಜ್ಯದ 'ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ' (ಕೆಐಎಡಿಬಿ)ಯ ಇತಿಹಾಸ ತೋರಿಸುತ್ತದೆ. ಇದುವರೆಗೂ ಕೆಐಎಡಿಬಿ ಸ್ವಾಧೀನ ಪಡಿಸಿಕೊಂಡಿರುವ ಗಣನೀಯ ಪ್ರಮಾಣದ ಭೂಮಿ ಕೈಗಾರಿಕೆಗಳ ಸ್ಥಾಪನೆಗೆ ಬಳಕೆಯೇ ಆಗಿಲ್ಲ ಎಂಬುದನ್ನು ಗಮನಿಸಬೇಕು. ಕೈಗಾರಿಕೆ ಉದ್ದೇಶಕ್ಕೆ ಸಾಧೀನಪಡಿಸಿಕೊಂಡು ಅನ್ಯ ಉದ್ದೇಶಗಳಿಗೆ ಬಳಸಿರುವುದನ್ನೂ ಗಮನಿಸಬೇಕು. ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ ರೈತರಿಗೆ ಪರಿಹಾರ ನೀಡುವಲ್ಲಿ ಇದು ಮಹಾ ವಂಚನೆಗಳನ್ನೂಮಾಡಿದೆ. ಭೂಸ್ವಾಧೀನ ಮಾಡಿಕೊಳ್ಳುವಾಗ ಅನುಸರಿಸಬೇಕಾದ ಪರಿಸರ ಮಾಲಿನ್ಯ ಮತ್ತು ಸಾಮಾಜಿಕ ಪರಿಣಾಮಗಳ ಬಗ್ಗೆ ಅಧ್ಯಯನವೇ ಇಲ್ಲವಾಗಿದೆ. ಕೆಐಎಡಿಬಿಯ ಇಂತಹ ಕರ್ಮಕಾಂಡಗಳ ಬಗ್ಗೆ ಸಿಎಜಿ ಗಂಭೀರವಾದ ಆರೋಪಗಳನ್ನು ಮಾಡಿದೆ.

ಚಾಣಕ್ಯ ವಿಶ್ವವಿದ್ಯಾಲಯದಂತಹ ಕೈಗಾರಿಕೆಯೇತರ ಸಂಸ್ಥೆಗಳಿಗೆ ಏರೋಸ್ಪೇಸ್ ಹಾಗೂ ಡಿಫೆನ್ಸ್ ಕಾರಿಡಾರ್ ಹೆಸರಿನಲ್ಲಿ ಕೆಐಎಡಿಬಿ ಹಂತ 1–2 ಮತ್ತು ಎಸ್.ಇ.ಜಡ್. ಹೆಸರಿನಲ್ಲಿ ಭೂ ಸ್ವಾಧೀನ ಮಾಡಿಕೊಂಡ ಭೂಮಿಯಲ್ಲಿ ಸಂಬಂಧಿತ ಕೈಗಾರಿಕೆಗಳು ಬರದೇ ಖಾಲಿ ಬಿದ್ದಿವೆ. ಬದಲಿಗೆ, ಕೆಐಎಡಿಬಿಯ ಬೃಹತ್ ಭ್ರಷ್ಟಾಚಾರದ ಕೂಸು ಚಾಣಕ್ಯ ವಿಶ್ವವಿದ್ಯಾಲಯದಂತಹ ಕೈಗಾರಿಕೆಯೇತರ ಸಂಸ್ಥೆಗಳು ಬಂದಿವೆ. ರಿಯಲ್ ಎಸ್ಟೇಟ್ ಕಂಪನಿಗಳಿಗೆ ಭೂಮಿ ಹಂಚಲಾಗಿದೆ.

ಹಿಂದುಳಿದ ಜಿಲ್ಲೆ ಮತ್ತು ಪ್ರದೇಶಗಳಿಗೆ ಆದ್ಯತೆ ನೀಡಿ ಕರ್ನಾಟಕದಲ್ಲಿ ಕೈಗಾರಿಕೆಗಳ ಸ್ಥಾಪನೆ ಮತ್ತು ಬೆಳವಣಿಗೆ ವಿಚಾರದಲ್ಲಿ ಸರ್ಕಾರಕ್ಕೆ ಸಮತೋಲಿತವಾದ ಕಣ್ಣೋಟವೇ ಇಲ್ಲವಾಗಿದೆ. ರಾಜ್ಯದಲ್ಲಿರುವ ಒಟ್ಟಾರೆ ಕೈಗಾರಿಕೆಗಳ ಪೈಕಿ ಅರ್ಧಕ್ಕಿಂತ ಹೆಚ್ಚಿನ ಕೈಗಾರಿಕೆಗಳು ಬೆಂಗಳೂರು ಮತ್ತು ಬೆಂಗಳೂರಿನ ಹೊರವಲ್ಲದಲ್ಲೇ ಕೇಂದ್ರೀಕೃತವಾಗಿದೆ. ಇದರಿಂದಾಗಿ ರಾಜ್ಯದಲ್ಲಿ ವಿವಿಧ ಪ್ರದೇಶಗಳ ನಡುವೆ ವಿಪರೀತವಾದ ಅಸಮತೋಲನ ಉಂಟಾಗಿದೆ. ರಾಜ್ಯ ಸರ್ಕಾರವು ನಿಜವಾಗಿಯೂ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಕೈಗಾರಿಕೆಗಳನ್ನು ಬೆಳೆಸಬೇಕೆಂದಿದ್ದರೆ, ಹಿಂದುಳಿದ ಜಿಲ್ಲೆ ಮತ್ತು ಪ್ರದೇಶಗಳಲ್ಲಿ ಆದ್ಯತೆಯಿಂದ ಸ್ಥಾಪಿಸಲು ಮುತುವರ್ಜಿ ಮಾಡಬೇಕು.

ಬೆಂಗಳೂರಿನ ಹೊರವಲಯದ ಕೃಷಿ ಪ್ರದೇಶಗಳು ಜೀವಧಾತುವಾಗಿವೆ, ಈಗಾಗಲೇ ಬೆಂಗಳೂರು ನಗರ ತನ್ನ ತಾಳಿಕೆಯ ಮಿತಿಯನ್ನು ಮೀರಿಬಿಟ್ಟಿದೆ. ಸಾರಿಗೆ, ನೀರು, ರಸ್ತೆ, ಚರಂಡಿ, ಪರಿಸರ, ನೈರ್ಮಲ್ಯ, ಶಾಲೆ, ಆಸ್ಪತ್ರೆ ಎಲ್ಲವೂ ಬಿಕ್ಕಟ್ಟಿನಲ್ಲಿವೆ. ಬೆಂಗಳೂರಿನ ಜನತೆಯ ಸುಸ್ಥಿರ ಬದುಕಿಗೆ ಆಹಾರ ಪದಾರ್ಥಗಳು, ತರಕಾರಿಗಳು, ಹಣ್ಣು ಹಂಪಲುಗಳು, ಮುಂತಾದುವನ್ನು ಒದಗಿಸುವ ಬೆಂಗಳೂರಿನ ಹೊರವಲಯದ ಕೃಷಿ ಪ್ರದೇಶಗಳು ಜೀವಧಾತುವಾಗಿವೆ. ಈ ಹಿನ್ನೆಲೆಯಲ್ಲಿ ದೇವನಹಳ್ಳಿ ತಾಲೂಕಿನ ಕೃಷಿ ಪ್ರದೇಶಗಳು ಬೆಂಗಳೂರನ್ನು ಮತ್ತು ಅದರ ಜನತೆಯನ್ನು ಕಾಪಾಡಲು ಮತ್ತು ಬೇಸಾಯದ ಬದುಕನ್ನೇ ನಂಬಿರುವ ರೈತರ ಭೂಮಿಗಳನ್ನು ಕೃಷಿ ಪ್ರದೇಶಗಳಾಗಿ ಉಳಿಸುವುದು ಅತ್ಯಗತ್ಯವಾಗಿದೆ.

ಸರ್ಕಾರದ ಅತಾರ್ಕಿಕ ವಾದ

ರಾಜ್ಯದ ಕಾಂಗ್ರೆಸ್ ಸರ್ಕಾರವು ಚನ್ನರಾಯಪಟ್ಟಣ ಭೂಸ್ವಾಧೀನವನ್ನು ತನ್ನದೇ ನೇತೃತ್ವದ ಯುಪಿಎ–2 ಸರ್ಕಾರ ಜಾರಿಗೊಳಿಸಿದ "ಭೂಸ್ವಾಧೀನ, ಪುನಶ್ಚೇತನ ಮತ್ತು ಪುನರ್ವಸತಿ ಕಾಯ್ದೆ, 2013 ರಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು" ಅನ್ನು (The Right to Fair Compensation and Transparency in Land Acquisition, Rehabilitation and Resettlement Act, 2013) ಸಂಪೂರ್ಣವಾಗಿ ಉಲ್ಲಂಘಿಸಿ ಆದೇಶಿಸಿರುವುದು ಅಕ್ರಮವಾಗಿದೆ. ಒಮ್ಮೆ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ವಾಪಸ್ ಪಡೆಯಲಾಗದು ಎಂಬ ವಾದವೂ ಅತಾರ್ಕಿಕವಾಗಿದೆ. ಅಂತಿಮ ಅಧಿಸೂಚನೆಗಳನ್ನು ವಾಪಸ್ ಪಡೆದಿರುವುದಕ್ಕೆ ರಾಜ್ಯದಲ್ಲೂ ಮತ್ತೂ ದೇಶದಲ್ಲಿ ಹಲವು ಉದಾಹರಣೆಗಳಿವೆ. ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆ ನಡುವಿನ ಒಂದು ವರ್ಷದ ಮಿತಿಯನ್ನು ಈ ಪ್ರಕರಣವು ಮೀರಿದೆ. ಇವೆರೆಡರ ನಡುವೆ ಮೂರು ವರ್ಷಗಳಿಗೂ ಹೆಚ್ಚಿನ ಸಮಯವಾಗಿದೆ.

ಈ ಹೋರಾಟದಲ್ಲಿ ಸಿಪಿಐ(ಎಂ) ಸಂಪೂರ್ಣವಾಗಿ ತೊಡಗಿಸಿಕೊಳ್ಳುತ್ತದೆ

ಹೀಗಾಗಿ ಕಾನೂನಾತ್ಮಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಯಾವುದೇ ದೃಷ್ಟಿಯಿಂದಲೂ ರಾಜ್ಯ ಸರ್ಕಾರ ಚನ್ನರಾಯಪಟ್ಟಣ ಭೂಸ್ವಾಧೀನವನ್ನು ರದ್ದಪಡಿಸುವುದು ಅತ್ಯಂತ ಸಮಂಜಸವಾಗಿದೆ. ಇವೆಲ್ಲವನ್ನೂ ಮೀರಿ ರಾಜ್ಯದ ಕಾಂಗ್ರೆಸ್ ಸರ್ಕಾರ ಮುಂದುವರಿದಲ್ಲಿ, ರಾಜ್ಯದ ಕಾಂಗ್ರೆಸ್ ಮತ್ತು ಕೇಂದ್ರದ ಬಿಜೆಪಿ ಸರ್ಕಾರಗಳ ನಡುವೆ ವ್ಯತ್ಯಾಸವಿಲ್ಲವೆಂದು ರಾಜ್ಯದ ಜನತೆ ತೀರ್ಮಾನಿಸುತ್ತಾರೆ ಮತ್ತು ಹೋರಾಟಗಳನ್ನು ತೀವ್ರಗೊಳಿಸುತ್ತಾರೆ. ಸಿಪಿಐ(ಎಂ) ಈ ಹೋರಾಟದಲ್ಲಿ ಸಂಪೂರ್ಣವಾಗಿ ತನ್ನನ್ನು ತಾನು ತೊಡಗಿಸಿಕೊಂಡು ಹೋರಾಟವನ್ನು ವಿಸ್ತರಿಸಲು ಮತ್ತು ತೀವ್ರಗೊಳಿಸಲು ಶ್ರಮಿಸುತ್ತದೆ. ಆದ್ದರಿಂದ ಜುಲೈ 15ರಂದು ಮುಖ್ಯಮಂತ್ರಿಯವರು ಕರೆದಿರುವ ಸಭೆಯಲ್ಲಿ ಚನ್ನರಾಯಪಟ್ಟಣ ಭೂಸ್ವಾಧೀನವನ್ನು ಪೂರ್ಣವಾಗಿ ರದ್ದುಪಡಿಸುವ ತೀರ್ಮಾನವನ್ನು ಪ್ರಕಟಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ.

ಸಾರ್ವತ್ರಿಕ ಮುಷ್ಕರ ಯಶಸ್ವಿ: 25 ಕೋಟಿಗೂ ಹೆಚ್ಚು ಜನರು ಭಾಗಿ
ಜನವಿರೋಧಿ ಮತ್ತು ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಮೊಳಗಿದ ಘೋಷಣೆ

ಜುಲೈ 9ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದಲ್ಲಿ, ದೇಶಾದ್ಯಂತ 25 ಕೋಟಿ ಕಾರ್ಮಿಕರು ಭಾಗವಹಿಸಿದರು. ಹತ್ತು ಕೇಂದ್ರ ಕಾರ್ಮಿಕ ಸಂಘಗಳು ಕರೆ ನೀಡಿದ ಮುಷ್ಕರವು ಮೋದಿ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳು ಮತ್ತು ನಾಲ್ಕು ಹೊಸ ಕಾರ್ಮಿಕ ಕಾನೂನುಗಳ ವಿರುದ್ಧ ಇತಿಹಾಸದಲ್ಲಿಯೇ ಅತಿದೊಡ್ಡ ಪ್ರತಿಭಟನೆಯಾಗಿದೆ. ಈ ಮುಷ್ಕರವು ಕೇವಲ ಕಾರ್ಮಿಕರ ಹೋರಾಟವಲ್ಲ, ಸಾಮಾಜಿಕ ನ್ಯಾಯ, ಮಾನವ ಘನತೆ ಮತ್ತು ಆರ್ಥಿಕ ಸಮಾನತೆಗಾಗಿ ನಡೆದ ಬೃಹತ್ ಹೋರಾಟವಾಗಿತ್ತು. ಈ ಮುಷ್ಕರವು ಭಾರತದ ಕಾರ್ಮಿಕ ವರ್ಗವು ರಾಜಕೀಯವಾಗಿ ಜಾಗೃತವಾಗಿದೆ ಎಂಬುದನ್ನು ತೋರಿಸಿತು. ಕಲ್ಲಿದ್ದಲು ಗಣಿಗಾರರಿಂದ ಹಿಡಿದು ಬೆಂಗಳೂರಿನ ಐಟಿ ಕಾರ್ಮಿಕರವರೆಗೆ ಎಲ್ಲರೂ ಒಗ್ಗಟ್ಟಿನ ಧ್ವನಿ ಎತ್ತಿದರು.

ಕಾರ್ಮಿಕರನ್ನು ಗುಲಾಮರನ್ನಾಗಿ ಮಾಡುವ ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸುವುದು ಸೇರಿದಂತೆ ಇತರ 17 ಬೇಡಿಕೆಗಳೊಂದಿಗೆ ನಡೆಸಲಾದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿದೆ. ಜನವಿರೋಧಿ ನೀತಿಗಳನ್ನು ಜಾರಿಗೆ ತರುತ್ತಿರುವ ಮೋದಿ ಆಡಳಿತದ ವಿರುದ್ಧ ದೇಶಾದ್ಯಂತ ರೈತರು, ಕೃಷಿ ಕಾರ್ಮಿಕರು, ಸಂಘಟಿತ ಮತ್ತು ಅಸಂಘಟಿತ ವಲಯಗಳು, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಮತ್ತು ಕೈಗಾರಿಕಾ ಪ್ರದೇಶಗಳಿಂದ 25 ಕೋಟಿಗೂ ಹೆಚ್ಚು ಜನರು ಈ ಮುಷ್ಕರದಲ್ಲಿ ಭಾಗವಹಿಸಿದ್ದರು. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಕೋಲ್ಕತ್ತಾದಿಂದ ಮುಂಬೈವರೆಗೆ, 25 ಕೋಟಿ ಕಾರ್ಮಿಕರು ಒಗ್ಗೂಡಿ ಒಂದೇ ಸಮಯದಲ್ಲಿ ಧ್ವನಿ ಎತ್ತಿದ್ದು ವಿಶ್ವ ಇತಿಹಾಸದಲ್ಲಿ ಅಪರೂಪದ ಘಟನೆಯಾಗಿತ್ತು.

ರಸ್ತೆ ತಡೆ ಮತ್ತು ರೈಲು ತಡೆ

ಅನೇಕ ಸ್ಥಳಗಳಲ್ಲಿ ರಸ್ತೆ ತಡೆ ಮತ್ತು ರೈಲು ತಡೆಗಳನ್ನು ಆಯೋಜಿಸಲಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ, ಅಸಂಘಟಿತ ವಲಯದ ಕಾರ್ಮಿಕರು, ಕೃಷಿ ಕಾರ್ಮಿಕರು, ರೈತರು, ಸಾರ್ವಜನಿಕರು, ವಿದ್ಯಾರ್ಥಿಗಳು ಮತ್ತು ಯುವಜನರು ಸೇರಿದಂತೆ ವಿವಿಧ ವರ್ಗದ ಜನರು ಬೃಹತ್ ಪ್ರತಿಭಟನೆಗಳನ್ನು ನಡೆಸಿದರು. ಗ್ರಾಮೀಣ ಪ್ರದೇಶಗಳಲ್ಲಿ ನಡೆದ ಮುಷ್ಕರಕ್ಕೆ ಸಂಯುಕ್ತ ಕಿಸಾನ್ ಮೋರ್ಚಾ (SKM), ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಮತ್ತು ಕೃಷಿ ಕಾರ್ಮಿಕ ಸಂಘಗಳ ಜಂಟಿ ನಾಯಕತ್ವ ಮಹತ್ವದ ಪಾತ್ರ ವಹಿಸಿದೆ. ಹಲವು ವರ್ಷಗಳ ಹೋರಾಟದ ಫಲವಾಗಿ ಪಡೆದುಕೊಂಡ ಹಕ್ಕುಗಳನ್ನು ರಕ್ಷಿಸಲು ಈ ಮುಷ್ಕರ ನಡೆಯುತ್ತಿದೆ ಎಂಬುದನ್ನು ಕಾಣಬಹುದು. ವಿಶಾಲ ಅರ್ಥದಲ್ಲಿ, ಅಖಿಲ ಭಾರತ ಮುಷ್ಕರವು ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸುವ ಹೋರಾಟವಾಗಿತ್ತು.

ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯಡಿಯಲ್ಲಿ

ಸಿಐಟಿಯು, ಎಐಟಿಯುಸಿ ಮತ್ತು ಐಎನ್‌ಟಿಯುಸಿ ಸೇರಿದಂತೆ ಸುಮಾರು ಹತ್ತು ಕಾರ್ಮಿಕ ಸಂಘಟನೆಗಳು ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯಡಿಯಲ್ಲಿ ಮುಷ್ಕರಕ್ಕೆ ಕರೆ ನೀಡಿದ್ದವು. ಆರೆಸ್ಸೆಸ್ ನೇತೃತ್ವದ ಭಾರತೀಯ ಮಜ್ದೂರ್ ಸಭಾ (ಬಿಎಂಎಸ್) ಮಾತ್ರ ಈ ಮುಷ್ಕರದಲ್ಲಿ ಭಾಗಿಯಾಗಲಿಲ್ಲ. ಆದರೆ, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಭಾಗವಹಿಸಿರುವುದನ್ನು ನೋಡಿದಾಗ, ಬಿಎಂಎಸ್ ಸಂಘಟನೆಗೆ ಸೇರಿದ ಕಾರ್ಮಿಕರು ಸಹ ಮುಷ್ಕರದಲ್ಲಿ ಭಾಗವಹಿಸಿದ್ದಾರೆ ಎಂಬುದು ಸಾಬೀತಾಗುತ್ತದೆ.

ಸಂಯುಕ್ತ ಕಿಸಾನ್ ಮೋರ್ಚಾ ತನ್ನ ಸಂಪೂರ್ಣ ಬೆಂಬಲವನ್ನು ಘೋಷಿಸುತ್ತಿದ್ದಂತೆ ರೈತರು ಮತ್ತು ಕೃಷಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದರು. ಸಿಪಿಐ(ಎಂ) ಸೇರಿದಂತೆ ಎಡ ಪಕ್ಷಗಳು ಸಹ ತಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸಿದವು. ನರೇಗಾ (ಉದ್ಯೋಗ ಖಾತರಿ ಯೋಜನೆ) ಸಂಘರ್ಷ ಮೋರ್ಚಾ, ಭೂಮಿ ಅಧಿಕಾರ್ ಆಂದೋಲನ, ಆಹಾರ ಭದ್ರತಾ ಕ್ಷೇತ್ರದಲ್ಲಿ ಕೆಲಸ ಮಾಡುವ ಸಂಘಟನೆಗಳು, ದಲಿತ ಮತ್ತು ಬುಡಕಟ್ಟು ಸಂಘಟನೆಗಳು ಸಹ ಈ ಬಾರಿ ಸೇರಿಕೊಂಡವು.

ಆರಂಭದಲ್ಲಿ ಮೇ 20, 2025ರಂದು ನಡೆಸಲು ಯೋಜಿಸಲಾಗಿದ್ದ ಸಾರ್ವತ್ರಿಕ ಮುಷ್ಕರವನ್ನು ಪಹಲ್ಗಾಮ್ ನಲ್ಲಿ ಪ್ರವಾಸಿಗರ ಮೇಲೆ ನಡೆದ ಭಯೋತ್ಪಾದಕ ದಾಳಿಗಳು ಮತ್ತು ನಂತರ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷಗಳು ಉಲ್ಬಣಗೊಂಡ ನಂತರ ಜುಲೈ 9 ರಂದು ನಡೆಸಲು ಮರು ನಿಗದಿಪಡಿಸಲಾಯಿತು.

ಎಲ್ಲಾ ವಲಯದ ಕಾರ್ಮಿಕರು ಭಾಗಿಯಾಗಿದ್ದರು

ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು, ಶಿಕ್ಷಕರು, ಬ್ಯಾಂಕಿಂಗ್ ಮತ್ತು ವಿಮಾ ವಲಯದ ಕಾರ್ಮಿಕರು, ವಿದ್ಯುತ್, ಅಂಚೆ, ದೂರಸಂಪರ್ಕ ಮತ್ತು ಪೆಟ್ರೋಲಿಯಂ ವಲಯದ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಭಾಗವಹಿಸಿದ್ದರು. ಕಲ್ಲಿದ್ದಲು, ಎನ್‌ಎಂಡಿಸಿ ಲಿಮಿಟೆಡ್, ಕಬ್ಬಿಣದ ಅದಿರು, ತಾಮ್ರ, ಬಾಕ್ಸೈಟ್, ಅಲ್ಯೂಮಿನಿಯಂ, ಚಿನ್ನದ ಗಣಿಗಳು, ಕಲ್ಲಿದ್ದಲೇತರ ಖನಿಜಗಳು, ಉಕ್ಕು, ಗ್ರಾಮೀಣ ಡಾಕ್ ಕಾರ್ಮಿಕರು, ಪರಮಾಣು ಶಕ್ತಿ, ಸಿಮೆಂಟ್, ಬಂದರು ಮತ್ತು ತೋಟಗಳು, ಸೆಣಬಿನ ಗಿರಣಿಗಳು, ವೈದ್ಯಕೀಯ ಮತ್ತು ಮಾರಾಟ, ಐಟಿ ಮತ್ತು ಐಟಿಇ, ಸಾರ್ವಜನಿಕ ಸಾರಿಗೆ, ಖಾಸಗಿ ವಲಯದ ವಿವಿಧ ರೀತಿಯ ಸಾರಿಗೆ, ವಿವಿಧ ವಲಯಗಳ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದರು.



ಅನೇಕ ಬಹುರಾಷ್ಟ್ರೀಯ ಕಂಪನಿಗಳು (ಎಂಎನ್‌ಸಿ) ಸೇರಿದಂತೆ ದೇಶದ ಅನೇಕ ಕೈಗಾರಿಕಾ ಪ್ರದೇಶಗಳ ಕಾರ್ಮಿಕರು ಮತ್ತು ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಭಾಗವಹಿಸಿ ಪ್ರದರ್ಶನಗಳನ್ನು ನಡೆಸಿದರು. ರಕ್ಷಣಾ ವಲಯದ ನೌಕರರು ಮುಷ್ಕರವನ್ನು ಬೆಂಬಲಿಸಿ ಒಂದು ಗಂಟೆ ಕಾಲ ಪ್ರತಿಭಟನೆ ನಡೆಸಿದರು. ರೈಲ್ವೆ ಒಕ್ಕೂಟಗಳು ಒಗ್ಗಟ್ಟಿನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದವು.



ನಿರ್ಮಾಣ ಕಾರ್ಮಿಕರು, ಬೀಡಿ, ಅಂಗನವಾಡಿ, ಆಶಾ, ಮಧ್ಯಾಹ್ನ ಊಟ ಮತ್ತು ಇತರ ಯೋಜನಾ ಕಾರ್ಮಿಕರು, ಮೀನುಗಾರರು, ಮನೆ ಕೆಲಸಗಾರರು, ಬೀದಿ ವ್ಯಾಪಾರಿಗಳು, ಹಮಾಲಿ ಕಾರ್ಮಿಕರು, ಖಾಸಗಿ ಭದ್ರತಾ ಕಾರ್ಮಿಕರು, ಉಬರ್, ಓಲಾ, ಇನ್ಸ್ಟಾಮಾರ್ಟ್, ಸ್ವಿಗ್ಗಿ, ಯಾಪಿಡೊ, ಗೃಹಾಧಾರಿತ ಪೀಸ್ ರೇಟ್ ಕಾರ್ಮಿಕರು, ರಿಕ್ಷಾ, ಆಟೋ ಮತ್ತು ಟ್ಯಾಕ್ಸಿ ಚಾಲಕರು ಮುಷ್ಕರದಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಮತ್ತು ಸಾಮಾಜಿಕ ಕಾರ್ಯಕರ್ತರು ಸಹ ಅನೇಕ ಸ್ಥಳಗಳಲ್ಲಿ ಪ್ರದರ್ಶನಗಳು ಮತ್ತು ಧರಣಿಗಳಲ್ಲಿ ಭಾಗವಹಿಸಿದ್ದರು. ಸಾಮಾನ್ಯ ಜನರು ಸಹ ಮುಷ್ಕರವನ್ನು ಬೆಂಬಲಿಸಿದರು.

ಬೆದರಿಕೆ ಮತ್ತು ದಮನಕಾರಿ ಕ್ರಮಗಳು

ಅನೇಕ ರಾಜ್ಯಗಳಲ್ಲಿ ಸರ್ಕಾರಗಳು ಮತ್ತು ಖಾಸಗಿ ವಲಯದ ಮಾಲೀಕರು ಬೆದರಿಕೆ ಮತ್ತು ದಮನಕಾರಿ ಕ್ರಮಗಳನ್ನು ಆಶ್ರಯಿಸಿದರು. ಇವುಗಳನ್ನು ಕಾರ್ಮಿಕರು ಮತ್ತು ಉದ್ಯೋಗಿಗಳು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಿದರು. ಕೋಲ್ ಇಂಡಿಯಾ ಲಿಮಿಟೆಡ್ ಮತ್ತು ಅದರ ಅಂಗಸಂಸ್ಥೆ ಕಂಪನಿಗಳಲ್ಲಿ ಮುಷ್ಕರ ಸಂಪೂರ್ಣವಾಗಿ ನಡೆಯಿತು. ಕೋಲ್ಕತ್ತಾ ಬಂದರಿನಲ್ಲಿ ಸರಕು ಸಾಗಣೆ ಸಂಪೂರ್ಣವಾಗಿ ಸ್ಥಗಿತಗೊಂಡಿತು. ದೆಹಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ನೌಕರರು ಮುಷ್ಕರಕ್ಕೆ ಒಗ್ಗಟ್ಟು ವ್ಯಕ್ತಪಡಿಸಿದರು. ಭಾರತೀಯ ನಾವಿಕರು ಸಮುದ್ರದಲ್ಲಿ ಹಡಗುಗಳಲ್ಲಿ ಪ್ರತಿಭಟಿಸಿದರು. ಮೇಡಕ್ ಆರ್ಡನೆನ್ಸ್ ಕಾರ್ಖಾನೆಯ ನೌಕರರು ಮುಷ್ಕರ ನಡೆಸಿದರು. ದೆಹಲಿಯ ಜಂತರ್ ಮಂತರ್ ನಲ್ಲಿ ಕಾರ್ಮಿಕ ಸಂಘಗಳು, ಪತ್ರಕರ್ತರು ಮತ್ತು ವಿವಿಧ ಉದ್ಯೋಗಿಗಳು ಪ್ರತಿಭಟನೆ ನಡೆಸಿದರು.

ಮಹಿಳಾ ಕಾರ್ಮಿಕರ ಭಾಗವಹಿಸುವಿಕೆ

ಮುಷ್ಕರದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಪೂರ್ಣ ಭಾಗವಹಿಸುವಿಕೆ ಬಹಳ ಮುಖ್ಯವಾಗಿತ್ತು. ಅವರು ಹೆಚ್ಚಿನವರು ಕಡಿಮೆ ವೇತನ ಪಡೆಯುವ ಮತ್ತು ಯಾವುದೇ ಸಾಮಾಜಿಕ ಭದ್ರತೆಯನ್ನು ಹೊಂದಿಲ್ಲದ ಮಹಿಳೆಯರು. ಲಕ್ಷಾಂತರ ಮಹಿಳೆಯರ ಧ್ವನಿಯಾಗಿ ಅವರ ಹೋರಾಟವು ಮುಷ್ಕರ ಕ್ಷೇತ್ರದಲ್ಲಿ ಒಂದು ದೊಡ್ಡ ಶಕ್ತಿಯಾಗಿ ಹೊರಹೊಮ್ಮಿತು. ಎಲ್ಲಾ ಕ್ಷೇತ್ರಗಳಲ್ಲಿ ನಡೆದ ಪ್ರತಿಭಟನೆಗಳು ಮತ್ತು ಪಿಕೆಟ್ ಚಳುವಳಿಗಳಲ್ಲಿ ಯುನೈಟೆಡ್ ಪೆಸೆಂಟ್ಸ್ ಫ್ರಂಟ್ ಸಂಪೂರ್ಣವಾಗಿ ಭಾಗವಹಿಸಿತು. ಈ ವಿಶೇಷ ಲಕ್ಷಣಗಳನ್ನು ಹೆಮ್ಮೆಯಿಂದ ಗಮನಿಸಿದ ಸಿಐಟಿಯು ಅಧ್ಯಕ್ಷೆ ಡಾ. ಕೆ. ಹೇಮಲತಾ, ಪ್ರಧಾನ ಕಾರ್ಯದರ್ಶಿ ಥಪನ್ ಸೇನ್ ಮತ್ತು ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳು ಮತ್ತು ವಲಯ ಒಕ್ಕೂಟಗಳ ನಾಯಕರು ಭಾರತೀಯ ಕಾರ್ಮಿಕ ವರ್ಗವನ್ನು ಅಭಿನಂದಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಬಂದ್ ಆಗಿ ಮಾರ್ಪಟ್ಟಿತು

ಪಶ್ಚಿಮ ಬಂಗಾಳದಲ್ಲಿ ಮುಷ್ಕರವು ಪೂರ್ಣ ಪ್ರಮಾಣದ ಬಂದ್ ಆಗಿ ಮಾರ್ಪಟ್ಟಿತು. ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಮತ್ತು ಎಡಪಕ್ಷಗಳ ನೇತೃತ್ವದಲ್ಲಿ, ಸಾವಿರಾರು ಕಾರ್ಮಿಕರು ರಾಜ್ಯಾದ್ಯಂತ ರೈಲ್ವೆ ಹಳಿಗಳನ್ನು ತಡೆದರು. ಸಾರ್ವಜನಿಕ–ಖಾಸಗಿ ಪಾಲುದಾರಿಕೆಯಾದ ಕೋಲ್ಕತ್ತಾ ಬಂದರಿನಲ್ಲಿರುವ ಅದಾನಿ ಕಂಟೇನರ್ ಟರ್ಮಿನಲ್‌ನ ಸಂಪೂರ್ಣ ಕಾರ್ಯಾಚರಣೆ ಸ್ಥಗಿತಗೊಂಡಿತು. ಈ ಟರ್ಮಿನಲ್‌ನ ಎಲ್ಲಾ ಕಾರ್ಮಿಕರು ಕೋಲ್ಕತ್ತಾ ಬಂದರು ಕಾರ್ಮಿಕರ ಒಕ್ಕೂಟದ (CITU) ಸದಸ್ಯರಾಗಿದ್ದಾರೆ. ಇದು ಕಾರ್ಪೊರೇಟ್ ಪ್ರಾಬಲ್ಯದ ವಿರುದ್ಧ ನೇರ ಹೊಡೆತವಾಗಿತ್ತು. ಪಶ್ಚಿಮ ಬಂಗಾಳದ ಸೆಣಬಿನ ಗಿರಣಿ ವಲಯದಲ್ಲಿ ಸಂಪೂರ್ಣ ಮುಷ್ಕರ ನಡೆಯಿತು. ದುರ್ಗಾಪುರದಿಂದ ಬ್ಯಾರಕ್‌ಪೋರ್ ವರೆಗೆ, ಲಾಲ್‌ಗೋಲಾದಿಂದ ಡೈಮಂಡ್ ಹಾರ್ಬರ್ ವರೆಗೆ ರೈಲ್ವೆ ತಡೆ –ಪುಟ 10 ಕ್ಕೆ



ರಾಜ್ಯದಲ್ಲೂ ಯಶಸ್ವಿ ಮುಷ್ಕರ: ಬೆಂಗಳೂರಿನಲ್ಲಿ ಮುಷ್ಕರ ನಿರೀಕ್ಷೆಗೂ ಮೀರಿ ಯಶಸ್ಸು



ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ಸಮಿತಿ (ಜೆಸಿಟಿಯು) ನೀಡಿದ್ದ ಕರೆಯ ಮೇರೆಗೆ, ಜುಲೈ 9ರ ದೇಶವ್ಯಾಪಿ ಮುಷ್ಕರವು ಕರ್ನಾಟಕದಲ್ಲೂ ಅತ್ಯಂತ ಯಶಸ್ವಿಯಾಗಿದೆ. ರಾಜ್ಯದ ಕಾರ್ಮಿಕರು, ರೈತರು, ಕೃಷಿ ಕಾರ್ಮಿಕರು, ಯೋಜನಾ ನೌಕರರಾದ ಅಂಗನವಾಡಿ, ಆಶಾ, ಮಧ್ಯಾಹ್ನ ಊಟ ನೌಕರರು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರದಲ್ಲಿ ಭಾಗಿಯಾದರು. ರಾಜ್ಯದ ಹಲವು ಕಡೆಗಳಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆಗಳು ನಡೆದಿವೆ. ಕೆಲವು ಕಡೆ ಪೊಲೀಸರು ಮತ್ತು ಮುಷ್ಕರ ನಿರತರ ನಡುವೆ ಸಂಘರ್ಷಗಳು ನಡೆದಿವೆ ಹಾಗೂ ಸಾವಿರಾರು ಪ್ರತಿಭಟನಾಕಾರರ ಬಂಧನಗಳು ನಡೆದಿವೆ.

ಫ್ರೀಡಂ ಪಾರ್ಕ್ ಸುತ್ತಮುತ್ತಲಿನ ಪರಿಸರ ಕೆಂಪು ಕೆಂಪಾಗಿತ್ತು

ಬೆಂಗಳೂರಿನಲ್ಲಿ ಅಂದು ಬೆಳಗ್ಗೆ 10 ಗಂಟೆಯಿಂದಲೇ ಕಾರ್ಮಿಕರು ಫ್ರೀಡಂ ಉದ್ಯಾನವನಲ್ಲಿ ಸೇರುತ್ತಿದ್ದರು. ಜೆಸಿಟಿಯು ವಿನ ವೇದಿಕೆ ಸಜ್ಜಾಗಿತ್ತು. ಫ್ರೀಡಂ ಪಾರ್ಕ್ ಸುತ್ತಮುತ್ತಲಿನ ಪರಿಸರ, ರಸ್ತೆಗಳ ಅಕ್ಕಪಕ್ಕದಲ್ಲಿ ಕಾರ್ಮಿಕರು ಜಮಾಯಿಸಿದ್ದರು. ಇಡೀ ವಾತಾವರಣ ಕಾರ್ಮಿಕರು ತೊಟ್ಟಿದ್ದ ಕೆಂಪು ಅಂಗಿಗಳು, ಕೆಂಪು ಬಾವುಟಗಳು, ಒಟ್ಟಾರೆಯಾಗಿ, ಕೆಂಪು ಕೆಂಪಾದ ರಣಕಹಳೆಯ ಸಂದೇಶವನ್ನು ಆಳುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ರವಾನಿಸಲು ಸಾಕ್ಷಿಯಾಗಿತ್ತು.

ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ, ರಾಮನಗರ, ದೊಡ್ಡಬಳ್ಳಾಪುರ, ದೇವನಹಳ್ಳಿ, ಅನೇಕಲ್ ಹೀಗೆ ಸುತ್ತ ಮುತ್ತಲಿನ ಪ್ರದೇಶಗಳಿಂದ ಆಗಮಿಸಿದ ಕಾರ್ಮಿಕರು, ಬಿಸಿಯೂಟ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು, ಕೈಗಾರಿಕಾ ಪ್ರದೇಶಗಳಲ್ಲಿನ, ಖಾಸಗಿ ಕಂಪನಿಗಳ ಕಾರ್ಮಿಕರು, ಸರ್ಕಾರಿ ಸ್ವಾಮ್ಯದ ನೌಕರರು, ಬ್ಯಾಂಕ್, ಇನ್ಸೂರೆನ್ಸ್ ನೌಕರರು ಹಾಗೂ ರೈತರು, ಕೃಷಿ ಕೂಲಿಕಾರಾರು ಭಾಗಿವಹಿಸಿದ್ದರು. ಪ್ರತಿಭಟನಾಕಾರರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು. ಬೆಂಗಳೂರಿನ ಕೈಗಾರಿಕಾ ಪ್ರದೇಶಗಳಾದ, ಪೀಣ್ಯ ಇಂಡಸ್ಟ್ರೀಸ್, ಬಿಡದಿ, ಬೊಮ್ಮಸಂದ್ರ, ಜಿಗಣಿ, ಬೆಂಗಳೂರು ಪೂರ್ವದ ಮಹಾದೇವಪುರ, ಕೆ.ಆರ್. ಪುರಂ ಕೈಗಾರಿಕಾ ಪ್ರದೇಶದ ಸಾವಿರಾರು ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದ ಕಾರಣ, ಆ ಪ್ರದೇಶಗಳ ವಾತಾವರಣ ಬಿಕೋ ಎನಿಸುತ್ತು.

ಸಿಐಟಿಯು ರಾಜ್ಯಾಧ್ಯಕ್ಷರಾದ ಎಸ್. ವರಲಕ್ಷ್ಮಿಯವರು ಪ್ರತಿಭಟನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ, ಜೆಸಿಟಿಯು'ವಿನ ಕೇಂದ್ರ ಕಾರ್ಮಿಕರ ಸಂಘಟನೆಗಳ ರಾಜ್ಯ ನಾಯಕರುಗಳು ಉಪಸ್ಥಿತರಿದ್ದರು, ಐಎನ್‌ಟಿಯುಸಿ ರಾಜ್ಯ ಅದ್ಯಕ್ಷರಾದ ಶಾಮಣ್ಣ ರೆಡ್ಡಿ, ಎಐಟಿಯುಸಿ ವಿಜಯ ಭಾಸ್ಕರ್, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯಕಾರ್ಯದರ್ಶಿ ಎನ್.ಪ್ರತಾಪ್ ಸಿಂಹ, ಎಚ್‌ಎಂಎಸ್‌ನ ರಾಜ್ಯ ಮುಖಂಡ ನಾಗನಾಥ್, ಎಐಯುಟಿಯುಸಿನ ಕೆ.ವಿ.ಭಟ್ ಹಾಗೂ ಅಪ್ಪಣ್ಣ, ಎಐಸಿಸಿಟಿಯುವಿನ ಸಣ್ಮುಗಂ, ಟಿಯುಸಿಸಿಯ ರಾಜ್ಯಾಧ್ಯಕ್ಷರಾದ ಜಿ.ಆರ್.ಶಿವಶಂಕರ್, ಎಚ್‌ಎಂಕೆಪಿಯಿಂದ ಆರ್.ಕಾಳಪ್ಪ, ಕೆಐಇಇಎಫ್‌ನ ಗಂಗಣ್ಣ, ಕೆಡಬ್ಲ್ಯೂಯುವಿನ ಇಕೆಎನ್ ರಾಜನ್, ಎನ್‌ಸಿಎಲ್‌ನ ಎನ್.ಪಿ.ಸ್ವಾಮಿ, ಇವರೊಂದಿಗೆ ಬ್ಯಾಂಕಿಂಗ್, ಇನ್ಸೂರೆನ್ಸ್, ಇನ್ನಿತರ ಸ್ವತಂತ್ರ ಸಂಘಟನೆಗಳ ನಾಯಕರು, ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಭೂಸ್ವಾಧೀನ ವಿರುದ್ದದ ಚಳುವಳಿಯ ರೈತ ಮುಂಖಡರು ವೇದಿಕೆಯಲ್ಲಿದ್ದರು. ಒಟ್ಟಾರೆಯಾಗಿ, ಈ ಮುಷ್ಕರವು ಜೆಸಿಟಿಯುವಿನ ಕರೆಯಾದರೂ, ರೈತರು, ಕೃಷಿಕೂಲಿಕಾರರ ಸಂಘಗಳ ನಾಯಕರುಗಳು ಹಂಚಿಕೊಂಡ ಹೋರಾಟ ಕಣದ ವೇಧಿಕೆಯಾಗಿ ಮಾರ್ಪಾಡಾಗಿತ್ತು. ಜನರ ಜ್ವಲಂತ ಸಮಸ್ಯೆಗಳು, ಅವರ ನೋವುಗಳನ್ನು ಹೊತ್ತ ಒಂದು ಬೃಹತ್ ಹೋರಾಟವನ್ನು ಇದು ಪ್ರತಿನಿಧಿಸುತ್ತಿತ್ತು.

ಕೃಷಿ ಜಮೀನುಗಳ ಸ್ವಾಧೀನ ನಿಲ್ಲಿಸಿ

ರೈತರು ಬೆಳೆಯುವ ಫಲವತ್ತಾದ ಕೃಷಿ ಜಮೀನುಗಳನ್ನು ಸ್ವಾಧೀನ ಪಡೆದುಕೊಳ್ಳುವುದನ್ನು ನಿಲ್ಲಿಸಬೇಕು. ದೇವನಹಳ್ಳಿ, ಚನ್ನರಾಯಪಟ್ಟಣ ಗ್ರಾಮಗಳ ರೈತರ ಕೃಷಿ ಜಮೀನಿನ ಸ್ವಾಧೀನದ ವಿರುದ್ಧ ರೈತರು ಕಳೆದ ಮೂರು ವರ್ಷಗಳಿಂದ ನಡೆಸುತ್ತಿರುವ ಹೋರಾಟ, ಇದೀಗ ಅಂತಿಮ ಘಟ್ಟಕ್ಕೆ ಬಂದು ತಲುಪಿದೆ. ರೈತರು, ಕಾರ್ಮಿಕರು, ದಲಿತರು – ಎಸ್‌ಕೆಎಂ ನೇತೃತ್ವದಲ್ಲಿ ಮಾಡು ಇಲ್ಲವೆ ಮಡಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದಾರೆ. ರಾಜ್ಯ ಸರ್ಕಾರವು ಈ ಭೂಮಿ ಸ್ವಾಧಿನದ ಆದೇಶವನ್ನು ಹಿಂಪಡೆಯಬೇಕು. ಇಲ್ಲದಿದ್ದರೆ, ಪಶ್ಚಾತ್ತಾಪ ಪಡಬೇಕಾಗುತ್ತದೆ ಎಂದು ಮೀನಾಕ್ಷಿ ಸುಂದರಂ ಎಚ್ಚರಿಸಿದರು.

ದೊಡ್ಡಬಳ್ಳಾಪರ ತಾಲ್ಲೂಕಿನ ವಿವಿಧ ಕಾರ್ಮಿಕ ಸಂಘಟನೆಗಳಿಂದ ನಗರದ ಸಿದ್ದಲಿಂಗಯ್ಯ ವೃತ್ತದ ಬಳಿ ಪ್ರತಿಭಟನೆ ನಡೆಸಿದರು. ನಂತರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಭಾಗವಹಿಸಲು ಹೊರಟರು. ಗ್ರಾಮೀಣ ಅಂಚೆ ನೌಕರರು ನಗರದ ಅಂಚೆ ಕಚೇರಿ ಮುಂದೆ ಧರಣಿ ನಡೆಸುವ ಮೂಲಕ ಬೆಂಬಲ ವ್ಯಕ್ತಪಡಸಿದರು. ಆನೇಕಲ್ ಪಟ್ಟಣದ ಬಸ್ ನಿಲ್ದಾದಲ್ಲಿ ಪ್ರತಿಭಟನೆ ನಡೆಯಿತು.

ರಾಜ್ಯದಾದ್ಯಂತ:

ಮಂಡ್ಯ ಜಿಲ್ಲೆಯ ಮಂಡ್ಯ ನಗರ, ಮದ್ದೂರು, ಮಳವಳ್ಳಿ, ಪಾಂಡವಪುರ, ಶ್ರೀರಂಗಪಟ್ಟಣ, ನಾಗಮಂಗಲ, ಕೆ,ಆರ್.ಪೇಟೆ ತಾಲ್ಲೂಕುಗಳಲ್ಲಿ ರಸ್ತೆ ತಡೆ ನಡೆಸಲಾಯ್ತು. ಮಳವಳ್ಳಿಯಲ್ಲಿ ಪೊಲೀಸ್ ಮತ್ತು ಪ್ರತಿಭಟನಾಕಾರರ ನಡುವೆ ಒಂದಷ್ಟು ಘರ್ಷಣೆ ನಡೆಯಿತು. ಸುಮಾರು 8000 ಜನರು ನೇರವಾಗಿ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಪೊಲೀಸರು ಸಾವಿರಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ಬಂಧಿಸಿ ಬಿಡುಗಡೆಗೊಳಿಸಿದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ, ಬಾಗೇಪಲ್ಲಿ ಗಳಲ್ಲಿ ಬೃಹತ್ ಪ್ರತಿಭಟನಾ ಮೆರವಣಗೆ ನಡೆಯಿತು.

ಕುಂದಾಪುರದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಯಿತು. ರಸ್ತೆ ತಡೆಗೆ ಮುಂದಾದಾಗ ಮುಖಂಡರನ್ನು ಬಂಧಿಸಿದ ಪೊಲೀಸರು ನಂತರ ಬಿಡುಗಡೆಗೊಳಿಸಿದರು.

ಮಂಗಳೂರು ಮತ್ತು ಶಿವಮೊಗ್ಗದಲ್ಲಿ ಪ್ರತಿಭಟನಾ ಮೆರವಣಿಗೆ ನಡೆದವು. ಹೊಸಪೇಟೆ ನಗರದ ಗಾಂಧಿ ಚೌಕದಿಂದ ಬೃಹತ್ ಮೆರವಣಿಗೆ ಹೊರಟು, ಬಿಎಸ್‌ಎನ್‌ಎಲ್ ಕಚೇರಿ ಎದುರು ಬಹಿರಂಗ ಸಭೆ ನಡೆಯಿತು. ಆಟೋ ಚಾಲಕರು, ಅಂಗನವಾಡಿ ನೌಕರರು, ಕಟ್ಟಡ ಕಾರ್ಮಿಕರು, ಹಮಾಲಿ ಸೇರಿದಂತೆ ಇತರೆ ಕಾರ್ಮಿಕರು ಪಾಲ್ಗೊಂಡಿದ್ದರು.

ರಾಯಚೂರು ಜಿಲ್ಲೆಯ ಹಟ್ಟಿ ಚಿನ್ನದ ಗಣಿ ಕಂಪನಿಯ ಸಾವಿರಕ್ಕೂ ಹೆಚ್ಚು ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಹಗರಿಬೊಮ್ಮನಹಳ್ಳಿಯಲ್ಲಿ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಕರ್ನಾಟಕ ಪ್ರಾಂತ ರೈತ ಸಂಘ, ರಾಜ್ಯ ರೈತ ಸಂಘ, ಪಂಚಾಯತ್ ನೌಕರರ ಸಂಘ, ದೇವದಾಸಿ ವಿಮೋಚನಾ ಸಂಘ ಸೇರಿದಂತೆ ಹಲವು ಸ್ಥಳೀಯ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು. ಈಶ್ವರ ದೇಗುಲದಿಂದ ಬಸವೇಶ್ವರ ವೃತ್ತದವರೆಗೆ ಮೆರವಣಿಗೆ ನಡೆಸಿದರು. ರಸ್ತೆ ಮಧ್ಯೆ ಸಭೆ ನಡೆಸಿದರು ಎಂಬ ಕಾರಣಕ್ಕೆ ಪೊಲೀಸರು ಪ್ರತಭಟನಾಕಾರರನ್ನು ಬಂಧಿಸಿ ನಂತರ ಬಿಡುಗಡೆಗೊಳಿಸಿದರು. ಸಂಡೂರಿನಲ್ಲಿ ರಸ್ತೆತಡೆ ನಡೆಸಲಾಯಿತು. ಸಿರಗುಪ್ಪದಲ್ಲಿ ಪ್ರತಿಭಟನೆ ನಡೆಸುತ್ತಿದ್ದವರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಕಂಪ್ಲಿ ಪಟ್ಟಣದಲ್ಲಿ ಉದ್ಭವ ದೇವಸ್ಥಾನದಿಂದ ಆರಂಭಿಸಿ, ಪ್ರಮುಖ ರಸ್ತೆಗಳ ಮೂಲಕ ಪ್ರತಿಭಟನಾ ಮೆರವಣಿಗೆ ಹೊರಟು ಅಂಬೇಡ್ಕರ್ ವೃತ್ತದಲ್ಲಿ ಸಭೆ ನಡೆಸಿದರು. ಹೂವಿನಹಡಗಲಿಯಲ್ಲಿ ರಾಜ್ಯ ಸರಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರು ಪ್ರತಿಭಟನೆ ನಡೆಸಿದರು. ಹರಪನಹಳ್ಳಿಯ ನಗರದ ಬಸ್ ನಿಲ್ದಾಣದ ಬಳಿಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಹಾವೇರಿ ಪಟ್ಟಣದ ಮುರುಘರಾಜೇಂದ್ರ ಮಠದಿಂದ ಆರಂಭಗೊಂಡ ಪ್ರತಿಭಟನಾ ಮೆರವಣಗೆ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟಿಸಲಾಯ್ತು.

ಉತ್ತರ ಕನ್ನಡ ಜಿಲ್ಲೆಯಾದ್ಯಂತ 12 ಕಡೆಗಳಲ್ಲಿ ಪ್ರತಿಭಟನಾ ಪ್ರಧರ್ಶನಗಳು ನಡೆದಿವೆ. ದಾಂಡೇಲಿ, ಜೋಯಿಡಾ, ಹಳಿಯಾಳ, ಕಾರವಾರ, ಯಲ್ಲಾಪುರ, ಹೊನ್ನಾವರ, ಶಿರಸಿ, ಅಂಕೋಲ, ಮುಂಡಗೋಡು ಮತ್ತು ಸಿದ್ದಾಪುರದಲ್ಲಿ, ಕೊಡಗು ಜಿಲ್ಲೆಯ ವಿರಾಜಪೇಟೆ, ಸೋಮವಾರ ಪೇಟೆಯಲ್ಲಿ ಪ್ರತಿಭಟನೆಗಳು ನಡೆದಿವೆ. ಕೋಲಾರ ಜಿಲ್ಲೆಯ ಬಂಗಾರಪೇಟೆ ಬಿಎಸ್ ಎನ್ ಎಲ್ ಕಚೇರಿ ಮುಂದೆ ಪ್ರತಿಭಟನೆ ನಡೆಯಿತು. ಗುಲ್ಬರ್ಗ, ಶಹಾಬಾದ, ಯಾದಗಿರಿ, ರಾಯಚೂರು, ದಾವಣಗೆರೆ, ಸಂಡೂರು, ಕಂಪ್ಲಿ, ಕುರುಗೋಡು, ಸಿರಗುಪ್ಪ, ಆಳಂದ, ಬಳ್ಳಾರಿ, ಮೈಸೂರು, ಲಿಂಗಸ್ಗೂರು ಸೇರಿದಂತೆ ರಾಜ್ಯದ ಹಲವು ಕಡೆಗಳಲ್ಲಿ ಮೆರವಣಿಗೆ, ಪ್ರತಿಭಟನೆಗಳು ನಡೆದಿವೆ. ರಾಜ್ಯದಲ್ಲಿ ಮುಷ್ಕರ ಬಾರೀ ಯಶಸ್ವಿಯಾಗಿ ನಡೆದಿದೆ.



ಸಾಕಪ್ಪ ಸಾಕು ಈ ಅನ್ಯಾಯ

ನೀಲೋತ್ಪಲ್ ಬಸು

ಜುಲೈ 9ರ ಐತಿಹಾಸಿಕ ಮುಷ್ಕರದಲ್ಲಿ ಭಾರತದ ಕೋಟ್ಯಂತರ ದುಡಿಯುವ ಜನರು ಬೀದಿಗಿಳಿದಿದ್ದಾರೆ. ಈ ಮೊದಲೇ ನಡೆಸಬೇಕಿದ್ದ ಮುಷ್ಕರವನ್ನು ಪಹಲ್ಗಾಮ್‌ನಲ್ಲಿ ಮುಗ್ಧ ನಾಗರಿಕ ಪ್ರವಾಸಿಗರ ಮೇಲಿನ ಪೈಶಾಚಿಕ ದಾಳಿಯ ಕಾರಣದಿಂದ ಸುಮಾರು ಒಂದುವರೆ ತಿಂಗಳು ಮುಂದೂಡಲಾಗಿತ್ತು. ಆದರೂ ಜನರ ಮೇಲೆ ಹೇರಲಾಗಿರುವ ಕಾರ್ಮಿಕ–ವಿರೋಧಿ ನೀತಿಗಳ ವಿರುದ್ಧದ ಪ್ರತಿರೋಧದ ಚೈತನ್ಯವು ಒಂದಿಷ್ಟೂ ಕುಂದಿಲ್ಲ.

ಕೈಗಾರಿಕಾ ಸಂಬಂಧಗಳ ಸಂಹಿತೆ (ಐಆರ್ ಕೋಡ್), ವೃತ್ತಿ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ (ಒಎಸ್‌ಎಚ್) ಸಂಹಿತೆ ಮತ್ತು ಸಾಮಾಜಿಕ ಭದ್ರತಾ ಕೋಡ್ –ಈ ರೀತಿಯಾಗಿ ಮೂರು ಪ್ರಮುಖ ಸಂಹಿತೆಗಳ ಕಾನೂನನ್ನು ಸರಕಾರ ರೂಪಿಸಿದಾಗ ಹೋರಾಟದ ಕಿಚ್ಚು ಪ್ರಖರವಾಗಿ ಹೊತ್ತಿಕೊಂಡಿತ್ತು. 2019ರ ಕೂಲಿ ಕುರಿತ ಸಂಹಿತೆ ಸಹಿತ ಈ ನಾಲ್ಕು ಕೋಡ್‌ಗಳು, ಅಸ್ತಿತ್ವದಲ್ಲಿದ್ದ 44 ಕಾರ್ಮಿಕ ಕಾನೂನುಗಳನ್ನು ಸಮನ್ವಯಗೊಳಿಸಿ ಅವುಗಳ ಸ್ಥಳವನ್ನು ಆಕ್ರಮಿಸಿದ್ದವು. ಕೂಲಿ, ಕೈಗಾರಿಕಾ ಸಂಬಂಧಗಳು ಸಾಮಾಜಿಕ ಭದ್ರತೆ, ಕೆಲಸದ ಸ್ಥಳದ ಸುರಕ್ಷತೆ ಮತ್ತು ಕಲ್ಯಾಣವೂ ಸೇರಿದಂತೆ ಶ್ರಮಿಕರ ಜೀವನದ ಪ್ರಮುಖ ಅಂಶಗಳನ್ನು ಈ ಸಂಹಿತೆಗಳು ನಿರ್ವಹಿಸುತ್ತವೆ. ಒಟ್ಟಿನಲ್ಲಿ ಸಾರಭೂತವಾಗಿ ಹೇಳಬೇಕೆಂದರೆ, ದುಡಿಯುವ ವರ್ಗಗಳ ವಿವಿಧ ವಿಭಾಗಗಳು ಕಷ್ಟಪಟ್ಟು ಗಳಿಸಿದ್ದ ಹಕ್ಕುಗಳನ್ನು ವ್ಯವಸ್ಥಿತವಾಗಿ ನಾಶ ಮಾಡಲಾಗುತ್ತಿದೆ. ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ಸಾರಥ್ಯದಲ್ಲಿ ಕಾರ್ಪೊರೇಟ್–ಕೋಮುವಾದಿ ಕೂಟದ ಕಾರ್ಯಸೂಚಿಯನ್ನು ಮುಂದುವರಿಸಲು ಈ ರೀತಿ ಮಾಡಲಾಗುತ್ತಿದೆ.

ಈ ಆಕ್ರಮಣವನ್ನು ಪ್ರತಿರೋಧಿಸುವುದೇ ಜುಲೈ 9ರ ಹೋರಾಟದ ಸಿದ್ಧತೆಯ ಗುರಿಯಾಗಿತ್ತು. ದೇಶದಾದ್ಯಂತದ ಎಲ್ಲ ಪ್ರಮುಖ ಟ್ರೇಡ್ ಯೂನಿಯನ್‌ಗಳು ಹಾಗೂ ಕೈಗಾರಿಕಾ ಒಕ್ಕೂಟಗಳಲ್ಲದೆ ಶ್ರಮಜೀವಿಗಳ ಎಲ್ಲ ವಿಭಾಗಗಳು ಮುಷ್ಕರಕ್ಕೆ ಬೆಂಬಲ ಘೋಷಿಸಿದ್ದವು ಎನ್ನುವುದು ಮುಖ್ಯವಾಗಿದೆ. ನಿರ್ಮಾಣ ವಲಯದ ಅಸಂಘಟಿತ ಕಾರ್ಮಿಕರಿಂದ ಹಿಡಿದು ಹಣಕಾಸು ಕ್ಷೇತ್ರ, ಗಿಗ್ ಕಾರ್ಮಿಕರು ಮತ್ತು ವಲಸೆ ಕಾರ್ಮಿಕರ ವರೆಗೆ ಎಲ್ಲರೂ ಒಕ್ಕೊರಲಿನಿಂದ ತಮ್ಮ ದನಿಯನ್ನು ಏರಿಸಿದರು.

ರೈತಾಪಿ ವರ್ಗದ ವಿಶಾಲ ವೇದಿಕೆಯಾದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಸಕ್ರಿಯ ಬೆಂಬಲ ನೀಡಿದ್ದು ಹಾಗೂ ಭಾಗವಹಿಸಿದ್ದು ಕೂಡ ಅಷ್ಟೇ ಮಹತ್ವದ್ದಾಗಿದೆ. ನಾಲ್ಕು ಕಾರ್ಮಿಕ ಸಂಹಿತೆಗಳನ್ನುರದ್ದುಪಡಿಸಬೇಕೆಂಬ ಬೇಡಿಕೆಯನ್ನು ಬೆಂಬಲಿಸಿದ್ದಲ್ಲದೆ ಆಳವಾಗುತ್ತಿರುವ ಕೃಷಿ ಬಿಕ್ಕಟ್ಟನ್ನು ರೈತ ಸಂಘಟನೆಗಳು ಎತ್ತಿ ತೋರಿಸಿದವು. ಹಾಗೂ ಕಾನೂನಾತ್ಮಕ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಯ ದೀರ್ಘಾವಧಿ ಸಮಯದಿಂದ ಬಾಕಿಯಿರುವ ಬೇಡಿಕೆಯನ್ನು ಕೂಡ ಅವು ಮುನ್ನೆಲೆಗೆ ತಂದವು. ಕೃಷಿ ಕಾರ್ಮಿಕರ ಸಂಘಟನೆಗಳು ಗ್ರಾಮೀಣ ನಿರುದ್ಯೋಗ ಸಮಸ್ಯೆ ಮತ್ತು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಒಂದೇ ಸಮನೆ ದುರ್ಬಲಗೊಳ್ಳುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದವು.

ಈ ರೀತಿಯಾಗಿ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರು ಒಟ್ಟಿಗೇ ಅಣಿನೆರೆದಿದ್ದು ಒಂದು ಐತಿಹಾಸಿಕ ಕ್ಷಣವಾಗಿದೆ. ಬಹುಶಃ ಇದೇ ಮೊದಲ ಬಾರಿಗೆ ಇಂಥ ಸಮಗ್ರ ಐಕ್ಯತೆ ಮೂಡಿ ಬಂದಿದೆ. ದೇಶದ ದುಡಿಯುವ ಜನರ ಬಹುತೇಕರು ಈಗ ಎದುರಿಸುತ್ತಿರುವ ಜೀವನೋಪಾಯದ ಬಿಕ್ಕಟ್ಟು ವ್ಯಾಪಕ ಹಾಗೂ ಆಳಗೊಳ್ಳುತ್ತಿರುವುದನ್ನು ಇದು ಪ್ರತಿಬಿಂಬಿಸುತ್ತದೆ.

ಒಂದು ರೀತಿ ಹೇಳಬೇಕೆಂದರೆ ಇದು ಜೀವನೋಪಾಯದ ಬಿಕ್ಕಟ್ಟು ಮಾತ್ರವಾಗಿರದೆ ಅಸ್ತಿತ್ವದ ಹೋರಾಟವೂ ಆಗಿದೆ. ಪ್ರಸ್ತಾಪಿತ ಕಾರ್ಮಿಕ ಸಂಹಿತೆಗಳಿಂದ ಉಂಟಾಗುವ ಸರ್ವವ್ಯಾಪಿ ಅಪಾಯದಿಂದಾಗಿ ಜುಲೈ 9ರ ಮುಷ್ಕರ ಅಷ್ಟೊಂದು ತೀವ್ರವಾಗಿತ್ತು. ಈ ಸಂಹಿತೆಗಳು ಎಲ್ಲ ನಿಯಂತ್ರಣ ಚೌಕಟ್ಟುಗಳನ್ನು ವಿಸರ್ಜಿಸಿ ಕಾರ್ಪೊರೇಟ್ ಕುಳಗಳಿಗೆ ಮುಕ್ತ ಹಸ್ತ ನೀಡಲಿವೆ ಮತ್ತು ಕಾರ್ಮಿಕರಿಗಾಗಿರುವ ಕಾನೂನು ರಕ್ಷಣೆಯ ಕೊನೆಯ ಕುರುಹುಗಳನ್ನು ಕೂಡ ನಾಶ ಮಾಡಲಿವೆ. ಈ ಸಂಹಿತೆಗಳು ಕಾರ್ಮಿಕ–ಪರ ಉಪಕ್ರಮಗಳೆಂದು ಸರಕಾರ ಬೊಗಳೆ ಕೊಚ್ಚಿಕೊಳ್ಳುತ್ತಿರುವುದು ಪರಿಸ್ಥಿತಿಯ ತೀವ್ರ ಅಣಕವಾಗಿದೆ.

ಸರಕಾರ ಏನೇ ಹೇಳಿಕೊಂಡರೂ ತನ್ನ ಬೂಟಾಟಿಕೆಯು ಹೆಚ್ಚು ಹೆಚ್ಚಾಗಿ ಸಾರ್ವಜನಿಕವಾಗಿ ಬಹಿರಂಗಗೊಳ್ಳುತ್ತಿರುವ ಬಗ್ಗೆ ಸರಕಾರಕ್ಕೆ ಅರಿವಿದೆ. ಕೆಲಸದ ಪರಿಸ್ಥಿತಿಗಳು ತೀವ್ರವಾಗಿ ಹದಗೆಡುತ್ತಿರುವುದು ಎಷ್ಟು ಸ್ಪಷ್ಟ ಹಾಗೂ ತೀಕ್ಷ್ಣವಾಗಿ ಗೋಚರವಾಗುತ್ತಿದೆಯೆಂದರೆ ಯಾರೂ ಅದನ್ನು ನಿರಾಕರಿಸಲು ಸಾಧ್ಯವೇ ಇಲ್ಲ. ಎರಡು ಮುಖ್ಯ ಅಂಶಗಳು ಶ್ರಮಿಕ ಸಮೂಹದ ಪರಿಸ್ಥಿತಿಯನ್ನು ಹದಗೆಡಿಸುತ್ತಿವೆ: ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಅಸಮಾನತೆಯಲ್ಲಿ ತೀವ್ರ ಏರಿಕೆಯೇ ಆ ಎರಡು ಅಂಶಗಳಾಗಿವೆ.

2025ರ ಜನವರಿ 31ರಂದು ಸಂಸತ್ತಿನಲ್ಲಿ ಮಂಡಿಸಿದ ಆರ್ಥಿಕ ಸಮೀಕ್ಷೆ–2024 ಕೂಡ ಈ ವಾಸ್ತವವನ್ನು ಒಪ್ಪಿಕೊಂಡಿದೆ. ನಿವ್ವಳ ಮೌಲ್ಯ ವರ್ಧನೆಯಲ್ಲಿ (ಗ್ರಾಸ್ ವ್ಯಾಲ್ಯೂ ಆ್ಯಡೆಡ್–ಜಿವಿಎ) ನಗಣ್ಯ ಏರಿಕೆಯಷ್ಟೇ ಆಗಿದೆ; ಆದರೆ ಕಾರ್ಪೊರೇಟ್ ಲಾಭಗಳು, ಅದರಲ್ಲೂ ವಿಶೇಷವಾಗಿ ದೊಡ್ಡ ಕಂಪನಿಗಳ ಲಾಭಗಳು ಅಂಕೆಯಿಲ್ಲದೆ ಏರಿಕೆಯಾಗಿವೆ ಎಂಬುದನ್ನು ಈ ಸಮೀಕ್ಷೆ ಗಮನಿಸಿದೆ. ಆದಾಯ ಅಸಮಾನತೆಯ ತೀವ್ರತೆಯ ಅಂಶವನ್ನು ಅದು ಎತ್ತಿ ತೋರಿಸುತ್ತದೆ.

ಸರಕಾರ ಒಂದೆಡೆ ಕಾರ್ಮಿಕರು ಮತ್ತು ಶ್ರಮಜೀವಿಗಳ ಇತರ ವಿಭಾಗಗಳ ಹಕ್ಕುಗಳ ಮೇಲೆ ತೀವ್ರತರವಾದ ಆಕ್ರಮಣಗಳನ್ನು ನಡೆಸುತ್ತಿರುವಾಗ ಇನ್ನೊಂದೆಡೆ ಕಾರ್ಪೊರೇಟ್‌ಗಳಿಗೆ 1.45 ಲಕ್ಷ ಕೋಟಿ ರೂಪಾಯಿಯಷ್ಟು ಅಭೂತಪೂರ್ವ ಬಂಪರ್ ಕೊಡುಗೆ ಒದಗಿಸಿದೆ. ಈ ಸಂಖ್ಯೆಯು ಶಿಕ್ಷಣ ಮತ್ತು ಆರೋಗ್ಯಕ್ಕೆ ಕೇಂದ್ರ ಬಜೆಟ್‌ನಲ್ಲಿ ನಿಗದಿಪಡಿಸಿದ ಒಟ್ಟು ಮೊತ್ತಕ್ಕಿಂತ ಜಾಸ್ತಿಯಾಗಿದೆ. ಆಘಾತಕಾರಿ ಸಾಮಾಜಿಕ ಪರಿಸ್ಥಿತಿಗಳು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಲ್ಲಿ (ಎನ್‌ಎಫ್‌ಎಚ್‌ಎಸ್) ಎದ್ದು ಕಾಣುತ್ತಿವೆ. ಭಾರತದ ಇಂದಿನ ಆರ್ಥಿಕ ಅಸಮಾನತೆಗಳು ಬ್ರಿಟಿಷ್ ಆಡಳಿತ ಕಾಲದ ಅಸಮಾನತೆ ಮಟ್ಟವನ್ನೂ ಮೀರುತ್ತಿದೆ ಎಂದು ಕೆಲವು ಅರ್ಥಶಾಸ್ತ್ರಜ್ಞರು ಹೇಳಿರುವುದು ಗಮನಾರ್ಹವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಕಾರ್ಪೊರೇಟ್ ಕುಳಗಳ ಸಂಪತ್ತು ನಾಟಕೀಯವಾಗಿ ಏರಿಕೆಯಾಗಿದೆ. 100 ಕೋಟಿ ರೂಪಾಯಿಗಿಂತ ಅಧಿಕ ಸಂಪತ್ತು ಹೊಂದಿದ ಭಾರತೀಯ ಬಿಲಿಯಾಧಿಪತಿಗಳ ಸಂಖ್ಯೆ 2014ರಲ್ಲಿ 100 ಆಗಿತ್ತು. ಆ ಸಂಖ್ಯೆ ಈಗ ದುಪ್ಪಟ್ಟಾಗಿ 200ಕ್ಕೆ ತಲುಪಿದೆ. ಅಗ್ರ 100 ಬಿಲಿಯಾಧಿಪತಿಗಳ ಒಟ್ಟು ಸಂಪತ್ತು 1 ಟ್ರಿಲಿಯನ್ ಅಮೆರಿಕನ್ ಡಾಲರ್ (1 ಲಕ್ಷ ಕೋಟಿ ರೂಪಾಯಿಗೂ ಅಧಿಕ) ಆಗಿದೆ. ದುಡಿಯುವ ವರ್ಗದ ಬಹುತೇಕ ಜನರ ನೈಜ ಆದಾಯ ತೀವ್ರವಾಗಿ ಕುಸಿದ ಹೊತ್ತಲ್ಲಿ ಈ ಅಸಹ್ಯಕರ ಸಂಪತ್ತಿನ ಶೇಖರಣೆಯಾಗಿದೆ. ಆಳವಾದ ಈ ಅನ್ಯಾಯವು ಜನಸಮೂಹದ ಪ್ರತಿಯೊಂದು ಉಸಿರಾಟ ಮತ್ತು ಪ್ರತಿ ಬೆವರ ಹನಿಯಲ್ಲಿ ಅನುಭವಕ್ಕೆ ಬರುತ್ತದೆ. ಅದು ಜುಲೈ 9ರ ರಾಷ್ಟ್ರವ್ಯಾಪಿ ಒಗ್ಗಟ್ಟಿನ ಸಾಮೂಹಿಕ ಕಾರ್ಯಾಚರಣೆಯಲ್ಲಿ ಪ್ರತಿಫಲಿಸಿದೆ.

ಹೆಚ್ಚು ಪ್ರಚಾರದಲ್ಲಿರುವ 'ಕಾರ್ಮಿಕ ಮಾರುಕಟ್ಟೆ ಸ್ಥಿತಿಸ್ಥಾಪಕತ್ವ' (ಲೇಬರ್ ಮಾರ್ಕೆಟ್ ಫ್ಲೆಕ್ಸಿಬಿಲಿಟಿ) ಪರಿಕಲ್ಪನೆಯನ್ನು ಸಾಂಸ್ಥೀಕರಿಸುವುದು ಕಾರ್ಮಿಕ ಸಂಹಿತೆಗಳ (ಲೇಬರ್ ಕೋಡ್) ಮುಖ್ಯ ಗುರಿಯಾಗಿದೆ. 2009ರ ಲೋಕಸಭೆ ಚುನಾವಣೆಯ ವೇಳೆ ಬಿಜೆಪಿ ಚುನಾವಣಾ ಪ್ರಣಾಳಿಕೆಯಲ್ಲಿ ಮೊದಲ ಬಾರಿಗೆ ಈ ಪರಿಕಲ್ಪನೆ ಸ್ಥಾನ ಪಡೆದಿತ್ತು. ವಾಸ್ತವವಾಗಿ, ಇದು 'ಹೈರ್ ಆ್ಯಂಡ್ ಫೈರ್' (ನೇಮಿಸಿಕೋ ವಜಾ ಮಾಡು) ಎಂಬ ಕರುಣೆಯಿಲ್ಲದ ನೀತಿಗೆ ಸೌಮ್ಯವಾಗಿ ಬಳಸಿದ ಪದವಲ್ಲದೆ ಬೇರೇನೂ ಅಲ್ಲ. ಕಾರ್ಮಿಕರಿಗೆ ಸದ್ಯ ಸಿಗುತ್ತಿರುವ ಕನಿಷ್ಠ ರಕ್ಷಣೆಗಳನ್ನು ಕೂಡ ತೆಗೆದು ಹಾಕುವುದರೊಂದಿಗೆ ಈ ಪರಿಕಲ್ಪನೆಗೆ ಇನ್ನಷ್ಟು ಇಂಬು ದೊರಕಿದೆ. ಕಾರ್ಮಿಕರ ಗುತ್ತಿಗೆಕರಣ ವ್ಯಾಪಕವಾಗಿರುವುದರಿಂದ ದುಡಿಮೆಗಾರ ಪಡೆಯ ಸುಮಾರು ಶೇಕಡ 4ರಷ್ಟು ಜನರು ಮಾತ್ರವೇ ಔಟ್‌ಸೋರ್ಸಿಂಗ್ ಜಾಲ ಮತ್ತು ಶೋಷಣಾತ್ಮಕ 'ಬೆವರಂಗಡಿ' ಪರಿಸರದಿಂದ ಹೊರಗಿದ್ದಾರೆ. ದುಡಿಯುವವರ ಈ ಸಣ್ಣ ವಿಭಾಗದ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಕೂಡ ದುರ್ಬಲಗೊಳಿಸುವುದಕ್ಕೆ ಈ ಕಾರ್ಮಿಕ ಸಂಹಿತೆಗಳು ಒತ್ತು ನೀಡಿವೆ. ಅವು ಹಣಕಾಸು–ಪ್ರೇರಿತ ನವ ಉದಾರವಾದಿ ಆರ್ಥಿಕ ಮಾದರಿಗಳಿಗೆ ಅನುಗುಣವಾಗಿವೆ. ಟ್ರೇಡ್ ಯೂನಿಯನ್‌ಗಳು ಹಾಗೂ ಅವುಗಳ ಸಾಮೂಹಿಕ ಚೌಕಾಸಿಯ ಹಕ್ಕುಗಳನ್ನು ನಾಶ ಮಾಡುವುದು ಅವುಗಳ ಪರಮ ಗುರಿಯಾಗಿದೆ.

ಸರಕಾರದ ಹೇಳಿಕೆಗಳು ಈಗ ಎಷ್ಟು ಹಾಸ್ಯಾಸ್ಪದವಾಗಿದೆಯೆಂದರೆ ಭಾರತವು ಜಗತ್ತಿನ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯೆಂಬ ನಂಬಲನರ್ಹ ಸಂಶೋಧನೆಯನ್ನು ಮುಂದು ಮಾಡುತ್ತಿದೆ. ಇದು ಅತ್ಯಂತ ಅಸಂಗತ ಕ್ಲೇಮ್ ಆಗಿದೆ. ಹಾಗೆ ಮಾಡುವಾಗ, ಆದಾಯ ಅಂಕಿಸಂಖ್ಯೆಗೆ ವೆಚ್ಚ ಅಂಕಿಸಂಖ್ಯೆಯನ್ನು ಪರ್ಯಾಯಗೊಳಿಸುತ್ತಿದೆ. ಇದು ಅಪ್ರಾಮಾಣಿಕವಾಗಿರುವುದರಿಂದ ತೀರಾ ವಿಲಕ್ಷಣವಾಗಿದೆ.

ಜುಲೈ 9ರಂದು ದುಡಿಯುವ ಜನತೆ ಪ್ರದರ್ಶಿಸಿದ ದೃಢತೆಯು ಕಾರ್ಪೊರೇಟ್ ಪ್ರಾಯೋಜಕರು ಹಾಗೂ ವಿದೇಶಿ ಮಿತ್ರರನ್ನು ತೃಪ್ತಿಪಡಿಸಲು ಇನ್ನಿಲ್ಲದ ಕಸರತ್ತು ನಡೆಸುವ ಸರಕಾರಕ್ಕೆ ಒಂದು ಸ್ಪಷ್ಟ ಸಂದೇಶವಾಗಿದೆ. ದುಡಿಯುವ ಜನಸಮೂಹದ ಬೇಡಿಕೆಗಳನ್ನು ಒಪ್ಪುವುದು ಬಿಡುವುದು ಸರಕಾರಕ್ಕೆ ಸೇರಿದ್ದಾಗಿದೆ. ಆದರೆ ಒಂದು ವಿಷಯ ಮಾತ್ರ ಸ್ಫಟಿಕದಷ್ಟೇ ಸ್ಪಷ್ಟ: ಹಿಂಜರಿಯುವ ಪ್ರಶ್ನೆಯೇ ಇಲ್ಲ. ಹೋರಾಟವು ಇನ್ನೂ ಬೆಳೆಯುತತ್ತದೆ. ಬಲಿಷ್ಠ ಅಲೆಗಳೊಂದಿಗೆ ಹಾಗೂ ಇನ್ನೂ ವಿಶಾಲ ಒಗ್ಗಟ್ಟಿನೊಂದಿಗೆ ಅದನ್ನು ಮುಂದಕ್ಕೊಯ್ಯಲಾಗುತ್ತದೆ.

ಅನು: ವಿಶ್ವ

ಸಾರ್ವತ್ರಿಕ ಮುಷ್ಕರ ಯಶಸ್ವಿ..... ಪುಟ 8 ರಿಂದ

ನಡೆಸಲಾಯಿತು. ಕೋಲ್ಕತ್ತಾ, ಪ್ರೆಸಿಡೆನ್ಸಿ ಮತ್ತು ಜಾದವ್ಪುರ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಮುಷ್ಕರಕ್ಕೆ ಒಗ್ಗಟ್ಟಿನಿಂದ ಬೀದಿಗಿಳಿದರು. ಕೋಲ್ಕತ್ತಾದಲ್ಲಿ, ಪೊಲೀಸರು SFI ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸೃಜನ್ ಭಟ್ಟಾಚಾರ್ಯ ಮತ್ತು ಇತರರನ್ನು ಬಂಧಿಸಿದರು.

ಪಾಟ್ನಾದಲ್ಲಿ...

ಬಿಹಾರದಲ್ಲಿ ಪೂರ್ಣ ಪ್ರಮಾಣದ ಅಖಿಲ ಭಾರತ ಮುಷ್ಕರ ನಡೆಯಿತು. ಪಾಟ್ನಾದಲ್ಲಿರುವ ರಾಜ್ಯ ಚುನಾವಣಾ ಆಯೋಗದ ಕಚೇರಿಯ ಮುಂದೆ ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಸಾವಿರಾರು ಕಾರ್ಮಿಕರು, ರೈತರು, ಯುವಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ.ಬೇಬಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ, ಸಿಪಿಎಂಎಲ್ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಮತ್ತು ಇತರರು ತೆರೆದ ವಾಹನದಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದರು. ಸಿಐಟಿಯು ಅಧ್ಯಕ್ಷೆ ಕೆ.ಹೇಮಲತಾ, ಕಾರ್ಯದರ್ಶಿ ಎ.ಆರ್.ಸಿಂಧು, ಕಿಸಾನ್ ಸಭಾ ಅಧ್ಯಕ್ಷ ಅಶೋಕ್ ಧವ್ಲೆ, ಪ್ರಧಾನ ಕಾರ್ಯದರ್ಶಿ ವಿಜುಕೃಷ್ಣನ್, ಸಿಪಿಎಂ ಪೊಲಿಟ್ ಬ್ಯೂರೋ ಸದಸ್ಯರಾದ ಆರ್.ಅರುಣ್ ಕುಮಾರ್, ಎಸ್.ಪುಣ್ಯವತಿ, ಬೃಂದಾಕಾರತ್, ಹನ್ನನ್ ಮೊಲ್ಲಾ, ರಾಜ್ಯಸಭಾ ಸಂಸದರಾದ ಎ.ಎ.ರಹೀಮ್, ಅನುರಾಗ್ ಸಕ್ಸೇನಾ, ಪಿ.ಕೃಷ್ಣ ಪ್ರಸಾದ್, ಪಿ.ವಿ.ಅನಿಯನ್ ಮತ್ತು ಇತರರು ಭಾಗವಹಿಸಿದ್ದರು.

ದೆಹಲಿಯ ಜಂತರ್ ಮಂತರ್‌ನಲ್ಲಿ

ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ, ಹತ್ತು ಕೇಂದ್ರ ಕಾರ್ಮಿಕ ಸಂಘಗಳ ರಾಷ್ಟ್ರೀಯ ನಾಯಕರಾದ ತಪನ್ ಸೇನ್ (ಸಿಐಟಿಯು), ಅಮರ್ಜೀತ್ ಕೌರ್ (ಎಐಟಿಯುಸಿ), ಅಶೋಕ್ ಸಿಂಗ್ (ಐಎನ್‌ಟಿಯುಸಿ), ಹರ್ಭಜನ್ ಸಿಂಗ್ (ಎಚ್‌ಎಂಎಸ್), ರಾಜೀವ್ ದಿಮ್ರಿ (ಎಐಸಿಸಿಟಿಯು), ಲತಾ ಬೆನ್ (ಎಸ್‌ಇಡಬ್ಲ್ಯೂಎ), ಚೌರಾಸಿಯಾ (ಎಐಯುಟಿಯು), ಜವಾಹರ್ (ಎಲ್‌ಡಿಎಫ್), ಧರ್ಮೇಂದ್ರ ವರ್ಮಾ (ಟಿಯುಸಿಸಿ) ಆರ್.ಎಸ್. ದಾಗರ್ (ಯುಟಿಯುಸಿ), ಕೃಷಿ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ವೆಂಕಟ್, ಐಸಿಇಯು, ಎಂಇಸಿ, ಎಐಕೆಎಸ್ ನಾಯಕರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕೇರಳ – ಸಂಪೂರ್ಣ ಮುಷ್ಕರ

ಕೇರಳದಲ್ಲಿ ಮುಷ್ಕರವು "ಸಂಪೂರ್ಣ ಸ್ಥಗಿತ" ಹಂತವನ್ನು ತಲುಪಿತು. ರಾಜ್ಯದ ಎಲ್ಲಾ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡವು. ಖಾಸಗಿ ಮತ್ತು ಸಾರ್ವಜನಿಕ ಸಾರಿಗೆ, ದೂರದ ಬಸ್ ಸೇವೆಗಳು, ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳು ಮುಚ್ಚಲ್ಪಟ್ಟವು. ಕೇರಳ ಹೈಕೋರ್ಟ್ ಮುಷ್ಕರದ ಮೇಲೆ ನಿಷೇಧ ಹೇರಿದ್ದರೂ ಕೊಚ್ಚಿ ತೈಲ ಸಂಸ್ಕರಣಾಗಾರದ ಕಾರ್ಮಿಕರು ಮುಷ್ಕರ ನಡೆಸಿದರು. ತಿರುವನಂತಪುರದಲ್ಲಿ, ಎಂ.ಜಿ. ರಸ್ತೆ ಸಂಪೂರ್ಣವಾಗಿ ನಿರ್ಜನವಾಗಿತ್ತು. ಕೋಝಿಕ್ಕೋಡ್, ಎರ್ನಾಕುಲಂ ಜಿಲ್ಲೆಗಳಲ್ಲಿ ಸಾಮಾನ್ಯ ಜೀವನವು ಸಂಪೂರ್ಣವಾಗಿ ಸ್ಥಗಿತಗೊಂಡಿತು. ಕೇರಳವನ್ನು ಪ್ರೀತಿಸುವವರು ಮುಷ್ಕರದಲ್ಲಿ ಸೇರಬೇಕೆಂಬ ಸಿಪಿಐ(ಎಂ) ಕರೆಯನ್ನು ಜನರು ಪಾಲಿಸಿದ್ದಾರೆ ಎಂದು ಮುಷ್ಕರದ ಯಶಸ್ಸು ತೋರಿಸುತ್ತದೆ.

ಕರ್ನಾಟಕದಲ್ಲಿ ಬಲವಂತದ ಭೂ ಸ್ವಾಧೀನ

ಕರ್ನಾಟಕದಲ್ಲಿ ಬಲವಂತದ ಭೂಸ್ವಾಧೀನ ಏಕೆ? ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳು, ವಿಶ್ವ ವಾಣಿಜ್ಯ ಸಂಸ್ಥೆಯ ಜೊತೆಗಿನ ಗ್ಯಾಟ್ ಒಪ್ಪಂದ ಮತ್ತು ಬಂಡವಾಳಶಾಹಿ ಪರವಾದ ಸರ್ಕಾರದ ನೀತಿಗಳು ಇದಕ್ಕೆ ಕಾರಣ. ತುಂಡು ಬೇಸಾಯಗಾರರು ಹಾಗು ಅತಿ ಹೆಚ್ಚು ಜನರು ಕೃಷಿಯನ್ನು ಆಧರಿಸಿರುವುದೇ ಭಾರತ ಆರ್ಥಿಕವಾಗಿ ಹಿಂದುಳಿಯಲು ಕಾರಣ ಎಂದು ಅಂದು ಆಳುವವರು ಹೇಳಿದರು. ಅವರು ದೇಶದ ಅಭಿವೃದ್ಧಿಗಾಗಿ ಕೃಷಿಯನ್ನು ಕಂಪನಿ ಬೇಸಾಯವಾಗಿ ಪರಿವರ್ತಿಸುವುದರ ಕಡೆ ಗಮನ ಹರಿಸಲಾಯಿತು. ರೈತರು ತಾವಾಗಿಯೇ ಜಮೀನು ಬಿಟ್ಟು ತೆರಳುವಂತಹ ನೀತಿಗಳನ್ನು ಸರ್ಕಾರಗಳು ಅನುಸರಿಸುತ್ತಿವೆ. ರೈತರನ್ನು ಭೂಮಿಯಿಂದ ಹೊರಹಾಕಲಾಗುತ್ತಿದೆ.

ಯು. ಬಸವರಾಜ್

ಬಲವಂತದ ಭೂ ಸ್ವಾಧೀನವು ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ (ಎಲ್‌ಪಿಜಿ) ನೀತಿಗಳ ಭಾಗವಾಗಿದೆ. ಎಲ್‌ಪಿಜಿ ನೀತಿಗಳನ್ನು ಒಪ್ಪಿಕೊಂಡ ಭಾರತವು, ವಿಶ್ವ ವಾಣಿಜ್ಯ ಸಂಸ್ಥೆಯ ಜೊತೆಗಿನ ಗ್ಯಾಟ್ (ಉಜಟಜಡಿಚಿಟ ಂಡಿಜಜಟಜಟಣ ಠಟ ಖಿಚಿಡಿಜಿಜ ಚಿಟಜ ಖಿಡಿಚಿಜಜ –ಉಂಖಿಖಿ) ಒಪ್ಪಂದಕ್ಕೆ 1994ರಲ್ಲಿ ಕಾಂಗ್ರೆಸ್ ನೇತೃತ್ವದ ಒಕ್ಕೂಟ ಸರಕಾರ ಸಹಿ ಹಾಕಿತು. ಇದನ್ನು ಅಂದಿನ ವಿರೋಧ ಪಕ್ಷವಾಗಿದ್ದ ಬಿಜೆಪಿ ಬೆಂಬಲಿಸಿತು. ದೇಶದ ನೈಜ ಅಭಿವೃದ್ಧಿಗೆ ಪೂರಕವಾಗಿ ಚೌಕಾಸಿ ಮಾಡದೇ ಒಪ್ಪಿಕೊಳ್ಳುವುದನ್ನು ಎಡ ಪಕ್ಷಗಳು ಮುಖ್ಯವಾಗಿ ಸಿಪಿಐ(ಎಂ) ವಿರೋಧಿಸಿತ್ತು.

'ಕಂಪನಿ ಬೇಸಾಯ'ದ ಕಡೆಗೆ

ಇದರ ಭಾಗವಾಗಿಯೇ ದೇಶದಲ್ಲಿ ಚರ್ಚೆಯೊಂದನ್ನು ಹರಿಬಿಡಲಾಗಿತ್ತು. ಭಾರತದಂತಹ ಮೂರನೇ ಜಗತ್ತಿನ ದೇಶಗಳಲ್ಲಿ ಅಲ್ಲಿನ ಶೇ. 60 ಹಾಗು ಅದಕ್ಕಿಂತಲೂ ಹೆಚ್ಚು ಜನ ಕೃಷಿಯಲ್ಲಿ ತೊಡಗಿರುವುದೇ ಆ ದೇಶಗಳು ಹಿಂದುಳಿಯಲು ಕಾರಣ ಎಂಬ ವಾದವನ್ನು ಮುನ್ನೆಲೆಗೆ ತರಲಾಗಿತ್ತು.

ಅಮೇರಿಕಾ, ಇಂಗ್ಲೆಂಡ್ ಮುಂತಾದ ಮುಂದುವರೆದ ದೇಶಗಳಲ್ಲಿ ಕೃಷಿಯಲ್ಲಿ ತೊಡಗಿದವರು ಶೇ. 3 ರಷ್ಟಕ್ಕೆ ಮಿತಿಗೊಳಪಟ್ಟಿರುವುದು, ಆ ದೇಶಗಳ ಮುಂದುವರಿಯುವಿಕೆಗೆ ಕಾರಣ ಎಂದು ವ್ಯಾಪಕವಾಗಿ ಪ್ರಚುರಪಡಿಸಲಾಯಿತು. ಮುಂದುವರೆದು, ಭಾರತದಲ್ಲಿ ಶೇ. 60ಕ್ಕೂ ಹೆಚ್ಚು ಜನತೆ ತೊಡಗಿಸಿಕೊಂಡಿರುವ ಕೃಷಿ ರಂಗದ ಕೊಡುಗೆ ದೇಶದ ಜಿಡಿಪಿಗೆ (ಒಟ್ಟು ಆಂತರಿಕ ಉತ್ಪನ್ನ) ಕೇವಲ ಶೇ. 18 ಮಾತ್ರವೇ ಆಗಿದೆಯೆಂದು ಹಿಯ್ಯಾಳಿಸಲಾಯ್ತು. ಇಲ್ಲಿ ಕೇವಲ ದೊಡ್ಡ ಪ್ರಮಾಣದ ಒಂದೆರೆರಡು ಎಕರೆ ಹಾಗು ಐದರಿಂದ ಹತ್ತು ಎಕರೆಯ ತುಂಡು ಬೇಸಾಯಗಾರರು ಹಾಗು ಅತಿ ಹೆಚ್ಚು ಜನರು ಕೃಷಿಯನ್ನು ಆಧರಿಸಿರುವುದೇ ಕಾರಣವೆಂದು ಹೇಳಲಾಯಿತು. ದೇಶದ ಅಭಿವೃದ್ಧಿಗಾಗಿ ಕೃಷಿಯನ್ನು ಕಂಪನಿ ಬೇಸಾಯವಾಗಿ ಪರಿವರ್ತಿಸುವುದರ ಕಡೆ ಗಮನ ಹರಿಸಲಾಯಿತು. ಮುಂದುವರೆದ ದೇಶಗಳ ಮಾದರಿಯಲ್ಲಿ, ಇಲ್ಲಿನ ತುಂಡು ಬೇಸಾಯ ತಡೆದು ಲಕ್ಷಾಂತರ ಅಥವಾ ದಶ ಸಾವಿರ ಎಕರೆ ಜಮೀನನ್ನು ಹೊಂದಿದ 'ಕಂಪನಿ ಬೇಸಾಯ'ಕ್ಕೆ ಅಡಿ ಇಡಲಾಯಿತು.

ರೈತರು ತಾವಾಗಿಯೇ ಜಮೀನು ಬಿಟ್ಟು ತೆರಳುವಂತಹ ಕ್ರೂರ ನೀತಿ

ಈ ಕಾರಣದಿಂದ, ಒಂದು ಕಡೆ ರೈತರು ತಾವಾಗಿಯೇ ಬಲವಂತವಾಗಿ ಜಮೀನು ಬಿಟ್ಟು ತೆರಳುವಂತಹ ಕ್ರೂರ ನೀತಿಗಳನ್ನು ಜಾರಿಗೊಳಿಸಲಾಗುತ್ತಿದೆ. ಇದಕ್ಕಾಗಿ, ಕೃಷಿ ಹೂಡಿಕೆಗಳಾದ ಬೀಜ, ರಸಾಯನಿಕ ಗೊಬ್ಬರ, ಕ್ರಿಮಿನಾಶಕ, ಕೃಷಿ ಸಾಧನೋಪಕರಣಗಳ ಮೇಲಿನ ಸಹಾಯಧನಗಳನ್ನು ನಿಲ್ಲಿಸಿ, ಅವುಗಳ ಬೆಲೆಗಳ ಮೇಲಿನ ನಿಯಂತ್ರಣಗಳನ್ನು ತೆಗೆದು ಹಾಕಲಾಯಿತು. ಸಾರ್ವಜನಿಕ ಸಾಲ ಸೌಲಭ್ಯವನ್ನು ತುಂಡು ಬೇಸಾಯಕ್ಕೆ ತೀವ್ರವಾಗಿ ಕಡಿತ ಮಾಡಿತಲ್ಲದೆ, ಸಾಲ ಲಭ್ಯವಾಗದಂತಹ ಪರಿಸ್ಥಿತಿಯನ್ನು ನಿರ್ಮಿಸಲಾಯಿತು.

ಅದೇ ರೀತಿ, ಬೆಲೆಗಳನ್ನು ಏರಿಳಿತ ಮಾಡುವ ಲೂಟಿಕೋರತನದ ಮೂಲಕ, ಅಗ್ಗದ ದರದ ಕೃಷಿ ಉತ್ಪನ್ನಗಳನ್ನು ವ್ಯಾಪಕವಾಗಿ ಆಮದು ಮಾಡುವ ಮೂಲಕ, ಇಲ್ಲಿನ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯೂ ಸಿಗದಂತೆ ಕ್ರಮವಹಿಸಲಾಗುತ್ತದೆ. ಹೀಗೆ, ಉತ್ಪಾದನಾ ವೆಚ್ಚವನ್ನು ಹೇರಳವಾಗಿ ಹೆಚ್ಚಿಸಿ, ಉತ್ಪನ್ನಗಳ ಬೆಲೆಗಳನ್ನು ಕುಗ್ಗಿಸಿ, ರೈತರ ಹೆಗಲ ಮೇಲೆ ಸಾಲದ ಹೊರೆ ಹೆಚ್ಚಿಸಿ ಭೂಮಿ ಮಾರಿಕೊಳ್ಳುವಂತೆ ಭಾರತ ಹಾಗು ಕರ್ನಾಟಕದ ಸರಕಾರಗಳು ಕ್ರಮವಹಿಸುತ್ತಿವೆ.

ಕರಾಳ ಕೃಷಿ ಕಾಯ್ದೆಗಳನ್ನು ಕರ್ನಾಟಕ ಇನ್ನೂ ಉಳಿಸಿಕೊಂಡಿದೆ

ಈ ರೀತಿ, ಸಾಲಬಾಧಿತ ರೈತರು ಜಮೀನು ಮಾರಾಟಮಾಡಲು ಮತ್ತು ಸಾವಿರಾರು ಎಕರೆಗಟ್ಟಲೆ ಜಮೀನುಗಳನ್ನು ಕೃಷಿಕರಲ್ಲದವರ ಕೈಗೆ ವರ್ಗಾವಣೆ ಹೊಂದಲು ಮತ್ತು ಆ ಮೂಲಕ ಗುತ್ತಿಗೆ ಹಾಗು ಕಂಪನಿ ಕೃಷಿಗೆ ಅವಕಾಶ ನೀಡಲು, ಉಪ ಕಸುಬಾದ ಹೈನುಗಾರಿಕೆ, ಕೋಳಿ, ಕುರಿ ಸಾಕಾಣೆ ಕಿತ್ತುಕೊಳ್ಳಲು, ಭೂ ಸುಧಾರಣಾ ತಿದ್ದುಪಡಿ ಕಾಯ್ದೆ– 2020, ಎಪಿಎಂಸಿ ತಿದ್ದುಪಡಿ ಕಾಯ್ದೆ– 2020 ಮತ್ತು ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆಗಳನ್ನು ಕರ್ನಾಟಕದಲ್ಲಿ ಜಾರಿಗೊಳಿಸಲಾಗುತ್ತಿದೆ.

13 ತಿಂಗಳ ಕಾಲ ಸಂಯುಕ್ತ ಕಿಸಾನ್ ಮೋರ್ಚಾ ದೆಹಲಿ ಸುತ್ತ ಸಂಘಟಿಸಿದ ಲಕ್ಷಾಂತರ ರೈತ ಕುಟುಂಬಗಳ ಬೃಹತ್ ಐತಿಹಾಸಿಕ ಪ್ರತಿರೋಧಕ್ಕೆ ಮಣಿದು ನರೇಂದ್ರ ಮೋದಿಯವರು ವಾಪಾಸು ಪಡೆದ ಈ ಕಾಯ್ದೆಗಳನ್ನು ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಇನ್ನೂ ಉಳಿಸಿಕೊಂಡಿದೆ.

ಕೃಷಿಕರಲ್ಲದವರ ಕೈಯಲ್ಲಿ ಕೃಷಿ ಭೂಮಿ ಕ್ರೋಢೀಕೃತ

ಇದುವರೆಗೆ ಕೃಷಿಕರು ಮತ್ತು ಕೃಷಿ ಕೂಲಿಕಾರರು ಮಾತ್ರವೇ ಕೃಷಿ ಭೂಮಿಯನ್ನು ಖರೀದಿಸುವ ಅವಕಾಶವನ್ನು ಕರ್ನಾಟಕ ಭೂ ಸುಧಾರಣಾ ಕಾಯ್ದೆ ನೀಡಿತ್ತು. ಆದರೆ ಈ ಹೊಸ ತಿದ್ದುಪಡಿ ಕಾಯ್ದೆಯ ಜಾರಿಯು ಕೃಷಿಕರಲ್ಲದ ಯಾರು ಬೇಕಾದರು ಜಮೀನನ್ನು ಖರೀದಿಸಿ, ಯಾವ ಉದ್ದೇಶಕ್ಕಾದರೂ ಬಳಕೆಗೆ ಅವಕಾಶ ನೀಡಲಾಗಿದೆ. ಹೀಗಾಗಿ ಮತ್ತು ಭೂಮಾಲೀಕ ಬಂಡವಾಳದಾರರ ಮತ್ತು ವ್ಯಾಪಾರಿಗಳು, ರಾಜಕಾರಣಿಗಳು, ವೈದ್ಯರು, ದೊಡ್ಡ ದೊಡ್ಡ ಗುತ್ತಿಗೆದಾರರು, ವಕೀಲರು ಮುಂತಾದ ಕೃಷಿಕರಲ್ಲದವರ ಕೈಯಲ್ಲಿ ಕೃಷಿ ಭೂಮಿ ಕ್ರೋಢೀಕೃತ ಗೊಂಡಿದೆ. ಇದೂ ಸೇರಿ, ಬೀಳು ಭೂಮಿ ಅಭಿವೃದ್ಧಿ ಹೆಸರಿನಲ್ಲಿ ದೇಶದ ಕೋಟ್ಯಾಂತರ ಎಕರೆ ಜಮೀನನ್ನು ಗುತ್ತಿಗೆ (ಕಂಪನಿ) ಬೇಸಾಯಕ್ಕೆ ತೆರೆಯಲಾಗುತ್ತಿದೆ. ಕರ್ನಾಟಕದಲ್ಲಿ ಬಂಡವಾಳವಿಲ್ಲದೆ ಬೀಳು ಬಿಡಲಾದ ಇಂತಹ ರೈತರ ಜಮೀನು 50 ಲಕ್ಷ ಎಕರೆ ಎಂದು ಗುರುತಿಸಲಾಗಿದೆ. ಹೀಗೆ ಬಲವಂತವಾಗಿ ರೈತರನ್ನು ಒಕ್ಕಲೆಬ್ಬಿಸಿ ಲಕ್ಷಾಂತರ ಎಕರೆ ಜಮೀನನ್ನು ಕಂಪನಿ ಹಾಗು ಕಾರ್ಪೋರೇಟ್ ಕೃಷಿಗೆ ಒದಗಿಸಲು ಕ್ರಮವಹಿಸಲಾಗುತ್ತಿದೆ.

ಕೈಗಾರಿಕಾಭಿವೃದ್ಧಿ ಹಾಗು ಮೂಲ ಸೌಕರ್ಯಗಳಿಗಾಗಿ ಕೃಷಿ ಭೂಮಿ

ಒಕ್ಕೂಟ ಅಥವಾ ಕೇಂದ್ರ ಸರಕಾರವು ದೆಹಲಿಯಿಂದ ಕೊಲ್ಕತ್ತಾವರೆಗೆ, ಕೊಲ್ಕತ್ತಾದಿಂದ ಚನ್ನೈವರೆಗೆ, ಚನ್ನೈನಿಂದ ಬೆಂಗಳೂರು, ಬೆಂಗಳೂರಿನಿಂದ ಮುಂಬೈವರೆಗೆ, ಮುಂಬೈನಿಂದ ಅಹಮದಾಬಾದ್ ಹಾಗು ನವದೆಹಲಿಗೆ ಸಂಪರ್ಕಿಸುವ ಕೈಗಾರಿಕಾ ಕಾರಿಡಾರ್ ನಿರ್ಮಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿಯೆ, ಈ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿ ಮತ್ತು ರೈಲ್ವೇ ಯೋಜನೆಗೆ ಕ್ರಮವಹಿಸುತ್ತಿದೆ. ಈ ಯೋಜನೆಯ ಇಕ್ಕೆಲಗಳಲ್ಲಿ ಒಂದು ಕಿ.ಮೀ. ಭೂ ಸ್ವಾಧೀನಕ್ಕೆ ಕ್ರಮವಹಿಸಲಿದೆ. ಪಟ್ಟಣಗಳ ನಿರ್ಮಾಣಕ್ಕೂ ಕ್ರಮವಹಿಸಲಿದೆ. ಇದರಿಂದಾಗಿ, ದೇಶದ ಕೋಟ್ಯಾಂತರ ಎಕರೆ ಕೃಷಿ ಭೂಮಿ ಹಾಗೂ ರಾಜ್ಯದ ದಶ ಲಕ್ಷಾಂತರ ಕೃಷಿ ಭೂಮಿ ಸ್ವಾಧೀನಕ್ಕೊಳಪಡಲಿದೆ. ಈ ಕೈಗಾರಿಕಾ ಕಾರಿಡಾರ್ ಚನ್ನೈನಿಂದ ಬೆಂಗಳೂರಿನ ಮೂಲಕ ಮುಂಬೈ ಕಡೆ ಸಾಗಲಿದೆ. ಇದರ ಭಾಗವಾಗಿಯೇ ಬೃಹತ್ ಬೆಂಗಳೂರನ್ನು, ಗ್ರೇಟರ್ ಬೆಂಗಳೂರಾಗಿಸಲಾಗುತ್ತದೆ. ಬೆಂಗಳೂರು ಕೇಂದ್ರದಿಂದ ಅದರ ಸುತ್ತಲೂ ಸುಮಾರು 200 ಕಿ.ಮೀ.ವರೆಗೆ ಭೂ ಸ್ವಾಧೀನಮಾಡುವ ಇಂಗಿತ ಬಿದ್ದಿದೆ. ಹೀಗಾಗಿ, ಈ ಎಲ್ಲ ಯೋಜನೆಗಳು ಜಾರಿ ಮಾಡುವಾಗ, ಬೆಳೆಯುತ್ತಿರುವ ವ್ಯಾಪಕ ಬಡತನದ ಪರಿಣಾಮವಾಗಿ, ಮಾರುಕಟ್ಟೆಯ ಗಂಭೀರ ಕೊರತೆಯ ಕಾರಣದಿಂದ ಜಾಗತಿಕ ಹಾಗು ದೇಶದ ಆರ್ಥಿಕ ಬಿಕ್ಕಟ್ಟಿನ ಕಾಲದಲ್ಲಿ ಕೈಗಾರಿಕೆಗಳು ಬರಲಿವೆಯೆ ಎಂಬುದು ನೈಜ ಪ್ರಶ್ನೆಯಾಗಿದ್ದರೂ, ಯೋಜನೆಯ ಹೆಸರಿನಲ್ಲಿ ಭೂಮಿಯನ್ನು ಸ್ವಾಧೀನ ಮಾಡಲಾಗುತ್ತದೆ. ಕೈಗಾರಿಕೆಗಳನ್ನು ಕೂಡಾ ಅಥವಾ ಬಂಡವಾಳ ಹೂಡಿಕೆದಾರರಿಗೆ ಹೆಚ್ಚು ಕಡಿಮೆ ಶೇ. 100 ರಷ್ಟು ರಿಯಾಯಿತಿ ನೀಡುತ್ತಾ, ಬಹುದೊಡ್ಡ ರೀತಿಯ ರತ್ನಗಂಬಳಿಯ ಹಾಸನ್ನು ಹಾಸಿ ಸ್ವಾಗತಿಸಲಾಗುತ್ತದೆ. ಕೇಂದ್ರ ಹಾಗು ಕರ್ನಾಟಕ ರಾಜ್ಯ ಸರಕಾರಗಳು ಬಂಡವಾಳ ಹೂಡಿಕೆದಾರರು ಕೇಳಿದ ಭೂಮಿಯನ್ನು ಕೊಡಲಾಗುತ್ತದೆ ಎಂದು ಘೋಷಿಸಿವೆ.

ಸರಕಾರಿ ಸರ್ಕಾರಿ ಜಮೀನು ಬಂಡವಾಳಿಗರಿಗೆ ಉಚಿತ!

ಬಂಡವಾಳ ಹೂಡಿಕೆದಾರರಿಗೆ ರಾಜ್ಯ ಸರಕಾರ ನೂರಾರು ಎಕರೆ ಸರಕಾರಿ ಜಮೀನು ಲಭ್ಯವಿರುವ (ಬೆಂಗಳೂರು– ಮೈಸೂರು ದಶಪಥ ನಿರ್ಮಾಣದ ನೈಸ್ ರಸ್ತೆಗೆಂದು ಸುಮಾರು 7,000 ಎಕರೆ ಸರಕಾರಿ ಜಮೀನನ್ನು ಉಚಿತವಾಗಿ ನೀಡಲಾಗಿದೆ) ಕಡೆ, ರೈತರಿಂದ ಬಲವಂತವಾಗಿ ಭೂ ಸ್ವಾಧೀನ ಮಾಡಿ, ಮೋಸದ ಭೂ ಬೆಲೆ ನಿಗದಿಪಡಿಸಿ (ಉದಾಹರಣೆಗೆ, ಬಳ್ಳಾರಿ ಜಿಲ್ಲೆಯ ಮಿತ್ತಲ್ ಕಂಪನಿಗಾಗಿ ಖರೀದಿಸಿದ ಮಾರುಕಟ್ಟೆ ಬೆಲೆ 50 ಲಕ್ಷ ರೂ.ಗಳೆಂದು ಆನಂತರ ಜಿಲ್ಲಾ ನ್ಯಾಯಾಲಯ ನಿಗದಿಸಿದವುಗಳಿಗೆ ಕೆಐಎಡಿಬಿ 8, 12 ಲಕ್ಷವೆಂದು ನಿಗದಿಸಿ ಬಲವಂತವಾಗಿ ಸ್ವಾಧೀನ ಮಾಡಿದೆ. ಅದರ ಜೊತೆ ಅಂಟಿಕೊಂಡ ಬ್ರಾಹ್ಮಿಣಿ ಸ್ಟೀಲ್ಸ್ ಕಂಪನಿಗೆ 5, 6, 8 ಲಕ್ಷ ರೂ. ನಿಗದಿಪಡಿಸಿ ವಂಚಿಸಿದೆ.) ಸಾವಿರಾರು ಎಕರೆ ವಶಪಡಿಸಿಕೊಂಡು, ಕಂಪನಿಗಳಿಗೆ ಕೇವಲ ಒಂದು ವರ್ಷಕ್ಕೆ ಒಂದು ಎಕರೆಗೆ 100 ರೂ.ಗಳಂತೆ ಗುತ್ತಿಗೆಗೆ ನೀಡಲಾಗುತ್ತದೆ.

ಆದರೆ, ರಾಜ್ಯದ ಸಂಕಷ್ಟದಲ್ಲಿರುವ ದಲಿತರಿಗಾಗಲಿ, ಕೂಲಿಕಾರ, ಬಡ ರೈತರಿಗಾಗಲಿ, ದೊಡ್ಡ ಭೂಮಾಲೀಕರಿಂದ ಭೂ ಸ್ವಾಧೀನ ಮಾಡಿ ಹೀಗೆ 100 ರೂ. ಗುತ್ತಿಗೆಗೆ ಜಮೀನು ನೀಡುವ ಕೆಲಸವನ್ನು ಸರಕಾರ ಮಾಡುತ್ತಿಲ್ಲ. ಬಂಡವಾಳ ಹೂಡಿಕೆಯ ಹೆಸರಿನಲ್ಲಿ ಬೆಂಗಳೂರು ಸುತ್ತಲಿನ ಬಡ ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸಿ, ಸಾವಿರಾರು ಎಕರೆ ಜಮೀನನ್ನು ಬಂಡವಾಳಿಗರಿಗೆ ಉಚಿತವಾಗಿ ನೀಡುವ ಇದೇ ಸರಕಾರ ಬಡ ನಿವೇಶನ ಹಾಗುಚ ವಸತಿ ಹೀನರಿಗೆ ನಿವೇಶನ ನೀಡಲು ನಿರಾಕರಿಸುತ್ತಿದೆ.

ಹೂಡಿಕೆದಾರರನ್ನು ಓಲೈಸಲು ಶೇ. 80 ರಷ್ಟು ಸಹಾಯಧನ!!

ಅಂಗನವಾಡಿ, ಆಶಾ, ಅಕ್ಷರ ದಾಸೋಹ, ಸಂಜೀವಿನಿ ನೌಕರರಿಗೆ ವೇತನ ನಿಗದಿಪಡಿಸಿ ಕನಿಷ್ಠ ವೇತನ ನೀಡುವುದನ್ನು ಮತ್ತು ವಯೋವೃದ್ದರು, ದೇವದಾಸಿ ಮಹಿಳೆಯರು, ಅಂಗವಿಕಲರು, ವಿಧವೆಯರು, ಗಂಡ ಬಿಟ್ಟ ಹಾಗು ಮದುವೆಯಾಗದ ಒಂಟಿ ಮಹಿಳೆಯರಿಗೆ ಪಿಂಚಣಿ ಅಥವಾ ಮಾಸಿಕ ಸಹಾಯಧನ 5000 ರೂ.ಗಳಿಗೆ ಹೆಚ್ಚಿಸಬೇಕು ಎಂಬ ಬೇಡಿಕೆಯನ್ನು ನಿರಾಕರಿಸುವ ಕೇಂದ್ರ ಹಾಗು ರಾಜ್ಯ ಸರಕಾರಗಳು, ಬಂಡವಾಳ ಹೂಡಿಕೆದಾರರನ್ನು ಓಲೈಸಲು ಶೇ. 80 ರಷ್ಟು ಸಹಾಯಧನ ನೀಡುತ್ತಿವೆ. ಕೇಂದ್ರದ ಪಾಲು ಶೇ. 50 ರಷ್ಟಾದರೆ, ರಾಜ್ಯದ ಪಾಲು ಶೇ. 30 ರಷ್ಟು ಎನ್ನಲಾಗಿದೆ. ಅಂದರೆ, 2024ರಲ್ಲಿ ನಡೆದ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ 1.20 ಲಕ್ಷ ಕೋಟಿ ರೂ. ಬಂಡವಾಳ ಹೂಡುವುದಾಗಿ ಮುಂದೆ ಬಂದ ಜಿಂದಾಲ್ ಕಂಪನಿಯು ಅದರಂತೆ ಸುಮಾರು 96,000 ಕೋಟಿ ರೂ. ಸಹಾಯಧನ ಪಡೆಯಲಿದೆ. ಮಾತ್ರವಲ್ಲಾ, ಅದು ಸಾರ್ವಜನಿಕ ಬ್ಯಾಂಕುಗಳಲ್ಲಿ ಸಾಲ ಎತ್ತಲು ಎರಡೂ ಸರಕಾರಗಳು ಕಂಪನಿ ಪರವಾಗಿ ಗ್ಯಾರಂಟಿ ಹಾಗು ಕೌಂಟರ್ ಗ್ಯಾರಂಟಿ ನೀಡಲಿವೆ. ಇದಿಷ್ಟೇ ಅಲ್ಲ, ಇವರು ಪಡೆಯುವ ಲಕ್ಷಾಂತರ ಕೋಟಿ ರೂ.ಗಳಿಗೆ ಐದು ವರ್ಷಗಳ ಬಡ್ಡಿ ರಿಯಾಯಿತಿ ಘೋಷಿಸಿವೆ. ದೇವದಾಸಿ ಮಹಿಳೆಯರು ಸಾಲ ಕಟ್ಟಲು ಅಸಮರ್ಥರೆಂದು ಮತ್ತು ಅವರಿಗೆ ಗ್ಯಾರಂಟಿ ನೀಡುವವರು ಯಾರೂ ಇಲ್ಲವೆಂದು ಸಾಲ ನೀಡುವುದನ್ನೆ ನಿರಾಕರಿಸಲಾಗಿದೆ.



ಇಎಸ್‌ಐ ಕಾಯ್ದೆ ತಂದದ್ದು "ಸುಗಮ ವ್ಯಾಪಾರ"ಕ್ಕಾಗಿ ಅಲ್ಲ- ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಿಕ್ಕಾಗಿ: ಸಿಐಟಿಯು

ಇಎಸ್‌ಐ ಕಾರ್ಪೊರೇಷನ್ ಇತ್ತೀಚೆಗೆ ಶಿಮ್ಲಾದಲ್ಲಿ ನಡೆದ ತನ್ನ 196ನೇ ಸಭೆಯಲ್ಲಿ 'ಸುಗಮ ವ್ಯಾಪಾರ'ಕ್ಕೆ ಉತ್ತೇಜನೆಯೆಂದು ಹೇಳಿಕೊಂಡು "ಉದ್ಯೋಗದಾತರು ಮತ್ತು ಉದ್ಯೋಗಿಗಳ ದಾಖಲಾತಿ ಪ್ರಾಯೋಜನಾ ಯೋಜನೆ" (ಎಸ್‌ಪಿಆರ್‌ಇಇ) 2025 ಅನ್ನು ಮತ್ತೆ ಆರಂಭಿಸಲು ಮತ್ತು ಕ್ಷಮಾದಾನ ಯೋಜನೆ 2025 ಹಾಗೂ ಮಾಲಕರು ತುಂಬಿ ಕೊಡಬೇಕಾದ ಹಾನಿ-ಪರಿಹಾರಗಳನ್ನು ಕಡಿಮೆ ಮಾಡುವ ಯೋಜನೆಗಳನ್ನು ಆರಂಭಿಸಲು ನಿರ್ಧರಿಸಿರುವುದಾಗಿ ಪ್ರಕಟಿಸಿದೆ. ಇವು ನೌಕರರ ರಾಜ್ಯ ವಿಮಾ (ಇಎಸ್‌ಐ) ಕಾಯ್ದೆಯ ಅಡಿಯಲ್ಲಿ ವಿಮಾ ರಕ್ಷಣೆ ಪಡೆಯುವ ನೌಕರರ ಕಾನೂನುಬದ್ಧ ಹಕ್ಕುಗಳನ್ನು ದಮನಮಾಡುವ ಕ್ರಮಗಳು ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಹೇಳಿಕೆಯೊಂದರಲ್ಲಿ ಖಂಡಿಸಿದ್ದಾರೆ

ಇಎಸ್‌ಐ ಕಾಯ್ದೆಯನ್ನು 1948ರಲ್ಲಿ ತಂದದ್ದು "ಸುಗಮ ವ್ಯಾಪಾರ"ಕ್ಕೆ ಉತ್ತೇಜನೆ ನೀಡಲು ಅಲ್ಲ, ಬದಲಾಗಿ, "ಒಂದು ದೋಷರಹಿತ ಬಹು-ಆಯಾಮದ ಸಾಮಾಜಿಕ ಭದ್ರತಾ ವ್ಯವಸ್ಥೆ"ಯನ್ನು ರಚಿಸುವುದಕ್ಕಾಗಿ ಮತ್ತು ಅಭಿವೃದ್ಧಿಪಡಿಸುವುದಕ್ಕಾಗಿ ಎಂದು ಅವರು ನೆನಪಿಸಿದ್ದಾರೆ. ಈ ಮೂಲಕ ಕೇಂದ್ರ ಸರಕಾರ ಸಂಸತ್ತು ಜಾರಿಗೆ ತಂದ ಕಾಯ್ದೆಯನ್ನು ಮತ್ತು ಅದರ ಶಾಸನಾತ್ಮಕ ನಿಬಂಧನೆಗಳನ್ನು ತಿರುಚುವ ಪ್ರಯತ್ನವನ್ನು ಮಾಡ ಹೊರಟಿರುವುದು ಕಾಣುತ್ತಿದೆ. ಆದರೆ ಉದ್ಯೋಗದಾತರ ಅಪರಾಧಗಳಿಗೆ ದಂಡ-ಪರಿಹಾರದ ಕುರಿತು ರೀತಿಯ ನಿಬಂಧನೆಗಳನ್ನು ಒಳಗೊಂಡಿರುವ 'ಸಾಮಾಜಿಕ ಭದ್ರತಾ ಸಂಹಿತೆ 2020'ನ್ನು ಇನ್ನೂ ಜಾರಿಗೆ ಜಾರಿಗೆ ತರಲಾಗಿಲ್ಲವಾದರೂ ಈ ಯೋಜನೆಗಳನ್ನು ಗುಟ್ಟಾಗಿ ರೂಪಿಸಲಾಗುತ್ತಿದೆ. ಆದ್ದರಿಂದ ಇವನ್ನು ರದ್ದುಗೊಳಿಸುವಂತೆ ಮತ್ತು ಕಾಯಿದೆಯಲ್ಲಿ ಸೂಚಿಸಿದಂತೆ ನಿಬಂಧನೆಗಳನ್ನು ಪಾಲಿಸದ ಉದ್ಯೋಗದಾತರಿಗೆ ದಂಡನಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನ್ವಯಿಸಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ಈ ಯೋಜನೆಗಳನ್ನು ಕಾಯ್ದೆಯ ವ್ಯಾಪ್ತಿಯನ್ನು ವಿಸ್ತರಿಸುವ ನೆಪದಲ್ಲಿ ಜೋರಾಗಿ ಘೋಷಿಸಲಾಗಿದ್ದರೂ, ಪ್ರಸ್ತುತ ಅರ್ಹತಾ ವೇತನ ಮಿತಿಯ ವ್ಯಾಪ್ತಿಯನ್ನು ಈಗಿರುವ ರೂ. 21,000 ಕ್ಕಿಂತ ಆಚೆಗೆ ವಿಸ್ತರಿಸಬೇಕು ಎಂದು ಎಲ್ಲ ಕೇಂದ್ರ ಕಾರ್ಮಿಕ ಸಂಘಗಳು ಪದೇ ಪದೇ ಎತ್ತಿರುವ ಬೇಡಿಕೆಯನ್ನು ಇನ್ನೂ ಪರಿಗಣಿಸಿಲ್ಲ. ಈ ವಿಳಂಬವು ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಪ್ರತಿದಿನ ಬಹಳಷ್ಟು ಕಾರ್ಮಿಕರನ್ನು ಇಎಸ್‌ಐ ವ್ಯಾಪ್ತಿಯಿಂದ ಹೊರ ಹಾಕುತ್ತಿದೆ.

2025ರ ಜೂನ್ 27ರಂದು ಪ್ರೆಸ್ ಇನ್ಫಾರ್ಮೇಷನ್ ಬ್ಯುರೊ (ಪಿಐಬಿ) ಬಿಡುಗಡೆ ಮಾಡಿರುವ ಇಎಸ್‌ಐ ಕಾರ್ಪೊರೇಷನ್‌ನ ಈ ಪತ್ರಿಕಾ ಹೇಳಿಕೆಯಲ್ಲಿ ಪ್ರಕಟಿಸಿರುವ ಮೇಲೆ ಹೇಳಿದ ಎಸ್‌ಪಿಆರ್‌ಇಇ ಯೋಜನೆಯು, ಇಎಸ್‌ಐ ಕಾಯ್ದೆಯನ್ನು ಪಾಲಿಸದ ಉದ್ಯೋಗದಾತರನ್ನು ದೋಷಮುಕ್ತಗೊಳಿಸಿಬಿಡುತ್ತದೆ. ಸ್ವಯಂಪ್ರೇರಿತ ಕಾನೂನು ಪಾಲನೆಯನ್ನು ಉತ್ತೇಜಿಸುವ ಹೆಸರಿನಲ್ಲಿ, ಮಾಲಕರು ತೆರಬೇಕಾದ ಬಾಕಿಗಳನ್ನು, ದಂಡಗಳನ್ನು ಮಾಫಿ ಮಾಡಿ ಅವರಿಗೆ ಪ್ರಯೋಜನ ಕಲ್ಪಿಸುತ್ತದೆ. ಈ ಯೋಜನೆಯ ಮೊದಲ ಹಂತ 2016ರಲ್ಲಿ ಆರಂಭವಾಯಿತು. ಅಂದಿನಿಂದ ಇದುವರೆಗೆ ಇಎಸ್‌ಐ ಕಾರ್ಪೊರೇಷನ್ ಮಾಲಕರ ವಂತಿಗೆ, ಬಡ್ಡಿ ಮತ್ತು ದಂಡಗಳ ಮನ್ನಾದಿಂದಾಗಿ ಸರಕಾರ ಕಳೆದುಕೊಂಡಿರುವ ಮೊತ್ತ ಎಷ್ಟು ಎಂದು ಸರಕಾರ ಬಹಿರಂಗ ಪಡಿಸಬೇಕು ಎಂದು ತಪನ್ ಸೆನ್ ಹೇಳಿದ್ದಾರೆ.

ಈ ಕಾಯ್ದೆಯು ಫಲಾನುಭವಿಯ ಅರ್ಹತೆಯನ್ನು ಉದ್ಯೋಗದ ಶಾಶ್ವತತೆಗೆ ತಳುಕು ಹಾಕುವುದಿಲ್ಲ. ಕಾರ್ಮಿಕರ ಹಕ್ಕುಗಳನ್ನು ಖಚಿತಪಡಿಸುವುದು ಮಾಲಕರು ಮತ್ತು ಸರ್ಕಾರದ ಕರ್ತವ್ಯವಾಗಿದೆ. ಆದ್ದರಿಂದ ಮಾಲಕರಿಂದ "ಸ್ವಯಂಪ್ರೇರಿತ ಕಾನೂನು ಪಾಲನೆ"ಯನ್ನು ಅವಲಂಬಿಸುವ ಬದಲು ಎಲ್ಲಾ ಅರ್ಹ ಸಂಸ್ಥೆಗಳು ಮತ್ತು ಕಾರ್ಮಿಕರನ್ನು ಇಎಸ್‌ಐ ಯೋಜನೆಯಡಿಯಲ್ಲಿ ತರಲು ತಕ್ಷಣದ ಕ್ರಮ ಅಗತ್ಯ.

ಇದರ ಜೊತೆಗೆ, ಇಎಸ್‌ಐ ಕಾರ್ಪೊರೇಷನ್ ಪ್ರಕಟಿಸಿರುವ ಕ್ಷಮಾದಾನ ಯೋಜನೆ 2025, 1 ಅಕ್ಟೋಬರ್ 2025 ರಿಂದ 30 ಸೆಪ್ಟೆಂಬರ್ 2026 ರವರೆಗೆ 'ಒಂದು ಬಾರಿ ವಿವಾದ ಪರಿಹಾರ'ದ ಹೆಸರಿನಲ್ಲಿ ಮಾಲಕರಿಗೆ ನೀಡಿರುವ ಅಪರಾಧ ಮನ್ನಾ ಪ್ಯಾಕೇಜ್ ಆಗಿದೆ. ಮಾಲಕರು ಕಾನೂನು ಪಾಲಿಸದಿರುವುದಕ್ಕೆ ದಂಡ ಅಥವ ಬಡ್ಡಿ ವಸೂಲು ಮಾಡದೆ ಅವರ ಮೇಲಿನ ಕೇಸುಗಳನ್ನು ಹಿಂದಕ್ಕೆ ಪಡೆಯುವ ಅಧಿಕಾರವನ್ನು ಪ್ರಾದೇಶಿಕ ನಿರ್ದೇಶಕರುಗಳಿಗೆ ಈ ಯೋಜನೆ ಕೊಡುತ್ತದೆ.

ಉದ್ಯೋಗದಾತರು ಪಾವತಿಸಬೇಕಾದ ಮೊತ್ತದ ಮೇಲೆ ಗರಿಷ್ಠ ಹಾನಿ ದರವನ್ನು ವಾರ್ಷಿಕ ಶೇ. 25ರಿಂದ ತಿಂಗಳಿಗೆ ಶೇ.1 ಕ್ಕೆ ಇಳಿಸಲಾಗಿದೆ. ಇದು ಇಎಸ್‌ಐ ಕಾಯ್ದೆಯನ್ನು ಉಲ್ಲಂಘಿಸುವವರನ್ನು ದೋಷಮುಕ್ತಗೊಳಿಸಿ, ಕಾರ್ಮಿಕರ ಹಿತಾಸಕ್ತಿಗಳನ್ನು ಹಾಳುಮಾಡುತ್ತದೆ. ಇದಲ್ಲದೆ ಇಎಸ್‌ಐ ಕಾರ್ಪೊರೇಷನ್ ಮಂಜೂರು ಮಾಡಿರುವ "ದತ್ತಿ ಆಸ್ಪತ್ರೆಗಳ" ಪಾಲುದಾರಿಕೆಯ ಪೈಲಟ್ ಯೋಜನೆ ಇಎಸ್‌ಐ ನಿಧಿಯನ್ನು ಖಾಸಗಿ ಆಸ್ಪತ್ರೆ ಗುಂಪುಗಳಿಗೆ ವರ್ಗಾಯಿಸುವ, ಸ್ವಂತ ಔಷಧಾಲಯಗಳು ಮತ್ತು ಆಸ್ಪತ್ರೆಗಳನ್ನು ನಿರ್ಮಿಸುವ ಪ್ರಯತ್ನಗಳನ್ನು ಹಳಿತಪ್ಪಿಸುವ ಮತ್ತು ಇಎಸ್‌ಐ ಕಾರ್ಪೊರೇಷನ್‌ನ ಶಾಸನಾತ್ಮಕ ಕರ್ತವ್ಯವನ್ನು ಹೊರಗುತ್ತಿಗೆಗೆ ವಹಿಸುವ ಯೋಜನೆಯಾಗುತ್ತದೆ ಎಂಬ ಸಂದೇಹವನ್ನು ಸಿಐಟಿಯು ವ್ಯಕ್ತಪಡಿಸಿದೆ,

ಸಂಕ್ಷಿಪ್ತವಾಗಿ ಹೇಳುವುದಾದರೆ, ಉದ್ದೇಶಪೂರ್ವಕವಾಗಿ ಕಾಯ್ದೆ ಪಾಲಿಸದ ಮತ್ತು ಲಕ್ಷಾಂತರ ಅರ್ಹ ಉದ್ಯೋಗಿಗಳ ನೋವುಗಳಿಗೆ – ಮತ್ತು ಸಾವಿಗೆ ಕಾರಣವಾಗಿರುವ ಉದ್ಯೋಗದಾತ ಸಮೂಹಗಳನ್ನು ಅಪರಾಧ ಮುಕ್ತಗೊಳಿಸುವುದು ಮತ್ತು ಪಾರುಮಾಡುವುದೇ ಈ ಸಭೆಯಲ್ಲಿ ಘೋಷಿಸಲಾದ ಈ ಎಲ್ಲ ಯೋಜನೆಗಳ ಏಕೈಕ ಉದ್ದೇಶ. ಸರಕಾರದ ಇಂತಹ ಘನ ಆಫರ್‌ಗಳು ಬೇಕಿಲ್ಲ, ಬಲವಾದ ಕಾನೂನು ಕ್ರಮ ಮತ್ತು ಕಾರ್ಮಿಕರ ಹಕ್ಕುಗಳ ಸಂಪೂರ್ಣ ಜಾರಿ ಆಗಬೇಕಾಗಿದೆ ಎಂದು ಸಿಐಟಿಯು ಆಗ್ರಹಿಸಿದೆ.

ಮಾಲಕರಿಗೆ 'ಸುಗಮ ವ್ಯಾಪಾರದ ಉತ್ತೇಜನೆ'ಗೂ ಇಎಸ್‌ಐ ಯೋಜನೆಯ ಮೂಲ ಉದ್ದೇಶಗಳಿಗೂ ಏನೇನೂ ಹೊಂದಿಕೆಯಿಲ್ಲ, ವಾಸ್ತವವಾಗಿ ಅದರ ಉಲ್ಲಂಘನೆಯೇ ಆಗುತ್ತದೆ. ಅಂತೆಯೇ, "ಎಸ್‌ಪಿಆರ್‌ಇಇ" ಮತ್ತು ಕಾರ್ಮಿಕ ಸಚಿವಾಲಯದ ಇತರ ಉತ್ತೇಜನಾ ಯೋಜನೆಗಳು ಶಾಸನಾತ್ಮಕ ಬಾಧ್ಯತೆಗಳನ್ನು ಪಾಲಿಸದಿರುವುದನ್ನು ಉತ್ತೇಜಿಸುವ ವಂಚಕ ತಂತ್ರಗಳಾಗಿವೆ. ಅವು ಸಾಮಾಜಿಕ ಭದ್ರತಾ ಸಂಹಿತೆ ಮತ್ತು ನಾಲ್ಕು ಕಾರ್ಮಿಕ ಸಂಹಿತೆಗಳ ನಿಬಂಧನೆಗಳನ್ನು ಜಾರಿಗೆ ತರುವ ನಿರ್ಲಜ್ಜ ಪ್ರಯತ್ನಗಳಾಗಿವೆ. ಕಾರ್ಮಿಕ ವರ್ಗವು ಈ ದುಷ್ಟ ಯೋಜನೆಗಳನ್ನು ವಿರೋಧಿಸಬೇಕು ಎಂದು ಸಿಐಟಿಯು ಕರೆ ನೀಡಿದೆ.

25 ಕೋಟಿಗಿಂತಲೂ ಹೆಚ್ಚು ಕಾರ್ಮಿಕರು-ರೈತರು ಭಾಗವಹಿಸಿದ ಜುಲೈ ೯ರ ಯಶಸ್ವೀ ಸಾರ್ವತ್ರಿಕ ಮುಷ್ಕರ: ಕೇಂದ್ರ ಕಾರ್ಮಿಕ ಸಂಘಗಳ ಅಭಿನಂದನೆ

ಹತ್ತು ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದ, ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಹಲವು ಕೃಷಿ ಕೂಲಿಕಾರ ಸಂಘಟನೆಗಳು ಬೆಂಬಲಿಸಿದ್ದ ಜುಲೈ 9ರ ಸಾರ್ವತ್ರಿಕ ಮುಷ್ಕರ ಭವ್ಯ ಯಶಸ್ಸನ್ನು ಗಳಿಸಿದೆ ಎಂದು ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ವಲಯವಾರು ಒಕ್ಕೂಟಗಳ ವೇದಿಕೆಯ ಜಂಟಿ ಪತ್ರಿಕಾ ಹೇಳಿಕೆ ತಿಳಿಸಿದೆ. ಇದಕ್ಕೆ ದೇಶದ ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು ಮತ್ತು ಜನತೆಯನ್ನು ಅದು ಅಭಿನಂದಿಸಿದೆ.

ದೇಶಾದ್ಯಂತ ಮುಷ್ಕರ ಕಾರ್ಯಾಚರಣೆಗಳಲ್ಲಿ, ರಾಸ್ತಾ ರೋಕೋ, ರೈಲ್ ರೋಕೋ ಕಾರ್ಯಾಚರಣೆಗಳಲ್ಲಿ 25 ಕೋಟಿಗಿಂತಲೂ ಹೆಚ್ಚು ಮಂದಿ ಭಾಗವಹಿಸಿದರು ಎಂದು ಪ್ರಾಥಮಿಕ ವರದಿಗಳಿಂದ ತಿಳಿದು ಬಂದಿದೆ ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಹೇಳಿವೆ. ಔಪಚಾರಿಕ ಮತ್ತು ಅನೌಪಚಾರಿಕ ವಲಯಗಳೆರಡರಲ್ಲೂ ಕಾರ್ಮಿಕರು ಮುಷ್ಕರ ನಡೆಸಿದ್ದಾರೆ. ಸರಕಾರೀ ಇಲಾಖೆಗಳು, ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕರು ಮತ್ತು ನೌಕರರು ಭಾಗವಹಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ, ಬ್ಲಾಕ್ ಮಟ್ಟಗಳಲ್ಲಿ ಅನೌಪಚಾರಿಕ ವಲಯದ ಕಾರ್ಮಿಕರು, ಕೃಷಿ ಕೂಲಿಕಾರರು, ರೈತರು ಮತ್ತು ಇತರ ವಿಭಾಗಗಳ ಜನರನ್ನು ದೊಡ್ಡ ಸಂಖ್ಯೆಯಲ್ಲಿ ಅಣಿನೆರೆಸಲು ಸಾಧ್ಯವಾಗಿದೆ. ಹಲವು ರಾಜ್ಯಗಳಲ್ಲಿ ವಿದ್ಯಾರ್ಥಿಗಳು ಮತ್ತು ಯುವಜನರು ಭಾಗವಹಿಸಿರುವುದು ಕಂಡು ಬಂದಿದೆ. ಇದರಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕೃಷಿ ಕೂಲಿಕಾರ ಸಂಘಟನೆಗಳ ಘಟಕಗಳು ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಜಂಟಿ ಪತ್ರಿಕಾ ಹೇಳಿಕೆ ತಿಳಿಸಿದೆ.

ಕಲ್ಲಿದ್ದಲು, ಕಬ್ಬಿಣ, ತಾಮ್ರ, ಅಲ್ಯುಮಿನಿಯಂ, ಬಾಕ್ಸೈಟ್, ಚಿನ್ನ ಮತ್ತು ಇತರ ಗಣಿಗಳು, ಉಕ್ಕು, ಬ್ಯಾಂಕ್, ಎಲ್‌ಐಸಿ, ಜಿಐಸಿ, ಕೇಂದ್ರ ಮತ್ತು ರಾಜ್ಯ ಸರಕಾರೀ ಇಲಾಖೆಗಳು, ಪೆಟ್ರೋಲಿಯಂ, ವಿದ್ಯುತ್, ಅಂಚೆ, ಗ್ರಾಮೀಣ ಡಾಕ್ ಸೇವಾ, ಟೆಲಿಕಾಂ, ಅಣುಶಕ್ತಿ, ಸಿಮೆಂಟ್, ಬಂದರು ಮತ್ತು ಹಡಗುಕಟ್ಟೆಗಳು, ಚಹಾ ತೋಟಗಳು, ಸೆಣಬು ಗಿರಣಿಗಳು, ಸಾರ್ವಜನಿಕ ಸಾರಿಗೆ ಮತ್ತು ಇತರ ಸಾರಿಗೆಗಳಲ್ಲಿ ನೌಕರರು ಮತ್ತುಕಾರ್ಮಿಕರುಗಮನಾರ್ಹ ಸಂಖ್ಯೆಯಲ್ಲಿ ಮುಷ್ಕರ ನಡೆಸಿ ರ್‍ಯಾಲಿಗಳಲ್ಲಿ ಭಾಗವಹಿಸಿದರು. ವಿವಿಧಕೈಗಾರಿಕಾ ಪ್ರದೇಶಗಳಲ್ಲಿ, ಕೆಲವು ಬಹುರಾಷ್ಟ್ರೀಯ ಕಂಪನಿಗಳ ನೌಕರರೂ ಭಾಗವಹಿಸಿದರು.

ರಕ್ಷಣಾ ವಲಯದಲ್ಲೂ, ಈ ಮೊದಲೇ ನಿರ್ಧರಿಸಿದಂತೆ ನೌಕರರು, ಕಾರ್ಮಿಕರು ಒಂದು ಗಂಟೆ ಮುಷ್ಕರ ಪ್ರತಿಭಟನೆಗಳಲ್ಲಿ ಭಾಗವಹಿಸಿ ತಮ್ಮ ಬೆಂಬಲವನ್ನು ದಾಖಲಿಸಿದರು. ರೈಲ್ವೆ ಸಂಘಗಳು ಸೌಹಾರ್ದ ಕಾರ್ಯಾಚರಣೆಗಳನ್ನು ಸಂಘಟಿಸಿದವು.

ಹಲವೆಡೆಗಳಲ್ಲಿ ಕಟ್ಟಡ, ಬೀಡಿ, ಅಂಗನವಾಡಿ, ಆಶಾ, ಮಧ್ಯಾಹ್ನದ ಊಟ ಮತ್ತು ಇತರ ಸ್ಕೀಮ್ ನೌಕರರು ಮುಷ್ಕರ ನಡೆಸಿದ್ದಲ್ಲದೆ, ರಾಸ್ತಾರೋಕೋ, ರೈಲ್‌ರೋಕೋ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದರು. ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ಸಾಮಾಜಿಕ ಕಾರ್ಯಕರ್ತರು ಮೆರವಣಿಗೆಗಳು, ಧರಣಿಗಳಲ್ಲಿ ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದರು. ಹಲವೆಡೆಗಳಲ್ಲಿ ಮಾರುಕಟ್ಟೆಗಳು ಮುಚ್ಚಿದ್ದವು.

ಪುದುಚೇರಿ, ಅಸ್ಸಾಂ, ಬಿಹಾರ್, ಝಾರ್ಖಂಡ್, ತಮಿಳುನಾಡು, ಪಂಜಾಬ್, ಕೇರಳ, ಪಶ್ಚಿಮ ಬಂಗಾಲ, ಒಡಿಶಾ, ಕರ್ನಾಟಕ, ಗೋವ, ಮೇಘಾಲಯ, ಮಣಿಪುರ ಮುಂತಾದ ರಾಜ್ಯಗಳಲ್ಲಿ ಬಂದ್ ರೀತಿಯ ಸನ್ನಿವೇಶ ಉಂಟಾಯಿತು. ರಾಜಸ್ತಾನ ಹರಿಯಾಣ, ತೆಲಂಗಾಣ, ಆಂಧ್ರಪ್ರದೇಶ ಮುಂತಾದೆಡೆಗಳಲ್ಲಿ ಭಾಗಶಃ ಬಂದ್ ಕಾರ್ಯಾಚರಣೆಗಳು ಕಂಡು ಬಂದವು. ಇತರ ರಾಜ್ಯಗಳಿಂದಲೂ ಇಂತಹ ವರದಿಗಳು ಬರುತ್ತಿವೆ ಎಂದು ಪತ್ರಿಕಾ ಹೇಳಿಕೆ ತಿಳಿಸಿದೆ.

ಹಲವೆಡೆಗಳಲ್ಲಿ ಕೇಂದ್ರ ಸರಕಾರ, ಕೆಲವು ರಾಜ್ಯ ಸರಕಾರಗಳು ಮತ್ತು ಕೆಲವು ಮಾಲಕರು ಒಡ್ಡಿದ ಅಡ್ಡಿ-ಆತಂಕಗಳನ್ನು, ಬೆದರಿಕೆಗಳನ್ನು ಲೆಕ್ಕಿಸದೆ ಕಾರ್ಯಾಚರಣೆ ಯಶಸ್ವಿಯಾಗಿ ನಡೆಯಿತು.

ಇದು ಮುಂಬರುವ ದಿನಗಳಲ್ಲಿ ಬಹಳಷ್ಟು ವಲಯಗಳ ಮಟ್ಟದಲ್ಲಿ ನಡೆಯಲಿರುವ ದೀರ್ಘ ಸಮರಗಳ ಆರಂಭವಷ್ಟೇ. ಇವು ದೃಢ ನಿರ್ಧಾರದ ಐಕ್ಯ ಪ್ರತಿರೋಧಗಳ ಮೇಲೆ ಗಮನ ಕೇಂದ್ರೀಕರಿಸಲಿದ್ದು, ಇನ್ನೂ ದೊಡ್ಡದಾದ ರಾಷ್ಟ್ರೀಯ ಮಟ್ಟದ ಐಕ್ಯಕಾರ್ಯಾಚರಣೆಗೆ ನಾಂದಿಯಾಗಲಿವೆ ಎಂದು ಈ ಜಂಟಿ ಹೇಳಿಕೆ ತಿಳಿಸಿದೆ.

ದಿಲ್ಲಿಯಲ್ಲಿ ಕಾರ್ಮಿಕ ಸಂಘಗಳು ಮುಷ್ಕರ ನಡೆದ ಕೈಗಾರಿಕಾ ಪ್ರದೇಶಗಳಲ್ಲಿ ಮೆರವಣಿಗೆಗಳ ನಂತರ ನವದೆಹಲಿಯ ಜಂತರ್ ಮಂತರ್‌ನಲ್ಲಿ ಒಂದು ಸಾರ್ವಜನಿಕ ರ್‍ಯಾಲಿ ನಡೆಯಿತು. ಇದನ್ನು ಉದ್ದೇಶಿಸಿ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಮುಖಂಡರು ಮಾತನಾಡಿದರು. ಅಖಿಲ ಭಾರತ ಕಿಸಾನ್ ಸಭಾ ಮತ್ತು ಕೃಷಿ ಕೂಲಿಕಾರರ ಸಂಘದ ಮುಖಂಡರೂ ಮಾತನಾಡಿದರು.


ಭಾರತೀಯರ ಮೇಲಿನ ಸಾಲದ ಹೊರೆ ಮತ್ತಷ್ಟು ಭಾರ

.... ಪುಟ 16 ರಿಂದ

ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೆ, ಮತ್ತೊಂದೆಡೆ, ಕಾರ್ಪೊರೇಟ್ ಕುಳಗಳು ಸರ್ಕಾರದಿಂದ ಭಾರಿ ಸಬ್ಸಿಡಿಗಳನ್ನು ಪಡೆಯುತ್ತಿವೆ. ಇದೂ ಅಲ್ಲದೆ, ಬ್ಯಾಂಕುಗಳಿಂದ ಸಾಲ ಪಡೆದು ಮರುಪಾವತಿ ಮಾಡದೇ, ಲಕ್ಷಾಂತರ ಕೋಟಿ ಸಾಲ ಮನ್ನಾ ಮಾಡಿಸಿಕೊಳ್ಳುತ್ತಿದ್ದಾರೆ. 2014-24ರ ನಡುವೆ, ಬ್ಯಾಂಕುಗಳು ಕಾರ್ಪೊರೇಟ್‌ಗಳಿಗೆ ನೀಡಲಾದ 16.61 ಲಕ್ಷ ಕೋಟಿ ರೂ. ಸಾಲವನ್ನು ಮನ್ನಾ ಮಾಡಿವೆ. ಮತ್ತೊಂದೆಡೆ, 'ಕನಿಷ್ಠ ಬಾಕಿ' ಹೆಸರಿನಲ್ಲಿ ದಂಡ, ಹಣ ವರ್ಗಾವಣೆ ಶುಲ್ಕ ಸೇರಿದಂತೆ ಹಲವು ರೀತಿಯ ದಂಡ, ಶುಲ್ಕಗಳ ಹೆಸರಿನಲ್ಲಿ ಸಾಮಾನ್ಯ ಗ್ರಾಹಕರಿಂದ ಬ್ಯಾಂಕುಗಳು ಹಣ ಸುಲಿಗೆ ಮಾಡುತ್ತಿವೆ.

ಕಾರ್ಪೊರೇಟ್‌ಗಳಿಗೆ ಲಕ್ಷಾಂತರ ಕೋಟಿ ಪಾವತಿಸುತ್ತಿರುವ ಸರ್ಕಾರವು ಶ್ರೀಸಾಮಾನ್ಯರ ಬಗ್ಗೆ ಆಸಕ್ತಿ ಹೊಂದಿಲ್ಲ. ಉದ್ಯೋಗಾವಕಾಶಗಳನ್ನು ಸುಧಾರಿಸುವುದರ ಜೊತೆಗೆ, ಸಾಲಗಳನ್ನು ಮನ್ನಾ ಮಾಡುವುದು ಮತ್ತು ಬಡವರನ್ನು ಸಾಲ ಮುಕ್ತಗೊಳಿಸುವುದು ಸಹ ಅಗತ್ಯವಾಗಿದೆ. ಕಾರ್ಪೊರೇಟ್‌ಗಳ ಮೇಲೆ ಸಂಪತ್ತು ತೆರಿಗೆ ವಿಧಿಸಬೇಕು ಮತ್ತು ಅದನ್ನು ಬಡವರ ಅಭಿವೃದ್ಧಿಗೆ ಖರ್ಚು ಮಾಡಬೇಕು. ಆಗ ಮಾತ್ರ ಸಾಮಾನ್ಯ ಜನರಿಗೆ ನಿಜವಾದ ಸ್ವಾತಂತ್ರ್ಯ ಸಿಗುತ್ತದೆ.

ನೆಹರೂ-ಮಹಾಲನೋಬಿಸ್ ಕಾರ್ಯತಂತ್ರವನ್ನು ತೆಗಳುತ್ತಿರುವುದೇಕೆ?





ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಭೂಸುಧಾರಣೆಗಳನ್ನು ಕೈಗೊಳ್ಳಲು ಅಸಮರ್ಥವಾಗಿದ್ದ ಕಾರಣದಿಂದಾಗಿ ಬಡತನವನ್ನು ನಿವಾರಿಸುವಲ್ಲಿ ನೆಹರೂ-ಮಹಾಲನೋಬಿಸ್ ಕಾರ್ಯತಂತ್ರವು ಅಸಮರ್ಪಕವಾಗಿದ್ದರೂ ಸಹ, ದುಡಿಯುವ ಜನತೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಅದು ನವ ಉದಾರವಾದಿ ಕಾರ್ಯತಂತ್ರಕ್ಕಿಂತ ಶ್ರೇಷ್ಠವಾಗಿತ್ತು. ಈ ನವ ಉದಾರವಾದಿ ಕಾರ್ಯತಂತ್ರವು ದೇಶವನ್ನು ಮತ್ತೊಮ್ಮೆ ವಸಾಹತುಶಾಹಿ ಅವಧಿಯ ಆರ್ಥಿಕ ನೀತಿ-ವ್ಯವಸ್ಥೆಯ ನಿಟ್ಟಿನಲ್ಲಿ ಹಿಂದಕ್ಕೆ ತಳ್ಳುತ್ತದೆ. ಮುಂಬರುವ ದಿನಗಳಲ್ಲಿ, ದೇಶದಲ್ಲಿ ಬಡತನ ಕಣ್ಮರೆಯಾಗುತ್ತಿದೆ ಎಂಬ ಮಾತುಗಳು ಹೆಚ್ಚೆಚ್ಚಾಗಿ ಕೇಳಿಬರಲಿವೆ ಮತ್ತು ಮುಂದುವರೆದ ಬಂಡವಾಳಶಾಹಿ ದೇಶಗಳ ಬೇಡಿಕೆಗಳಿಗಾಗಿ ನಮ್ಮ ರೈತರ ಭೂಮಿಯನ್ನು ತೆರೆದು ಕೊಡಲು ಅನುಕೂಲವಾಗುವಂತೆ ಅದರ ಮೇಲಿನ ಅಳಿದುಳಿದ ನಿರ್ಬಂಧಗಳನ್ನು ಕೂಡ ಕೈಬಿಡಬೇಕು ಎಂದು ಹೇಳಲಾಗುತ್ತದೆ. ನೆಹರೂವಾದಿ ಕಾರ್ಯತಂತ್ರದ ಮೇಲಿನ ಪ್ರಸ್ತುತ ದಾಳಿಯು ಇದಕ್ಕೆ ಒಂದು ಪೀಠಿಕೆಯಾಗಿದೆ.

1991ರ ಹಿಂದೆ ಜಾರಿಯಲ್ಲಿದ್ದ ನಿಯಂತ್ರಣ ನೀತಿಗಳ ತಳದಲ್ಲಿದ್ದ ನೆಹರೂ-ಮಹಾಲನೋಬಿಸ್ ಕಾರ್ಯತಂತ್ರವನ್ನು ಈಗ ಮೋದಿ ಮಂದೆ ಮಾತ್ರವಲ್ಲದೆ, ಕಾಂಗ್ರೆಸ್ ಪಕ್ಷದೊಳಗಿನ ಮತ್ತು ಹೊರಗಿನ ಕೆಲವು ನವ ಉದಾರವಾದಿ ಗುಂಪುಗಳು ಕೂಡ ಮನಸ್ಸಿಗೆ ಬಂದಂತೆ ತೆಗಳುತ್ತಿವೆ. ನವ ಉದಾರವಾದವು ಸಿಕ್ಕಿಕೊಂಡಿರುವ ಬಿಕ್ಕಟ್ಟು ಆಳಗೊಳ್ಳುತ್ತಿರುವಾಗ ಅದರ ಬಗ್ಗೆ ಉಂಟಾಗಿರುವ ಭ್ರಮನಿರಸನವೂ ಹೆಚ್ಚು ವ್ಯಾಪಕಗೊಳ್ಳುತ್ತಿರುವಾಗ, ನಿಯಂತ್ರಣ ನೀತಿಗಳ ಆಳ್ವಿಕೆಗೆ ಹೋಲಿಸಿದರೆ ನವ ಉದಾರವಾದಿ ಆಳ್ವಿಕೆಯು ಹೆಚ್ಚು ಪ್ರಯೋಜನಗಳನ್ನು ತಂದಿದೆ ಎಂಬುದಾಗಿ ಅದರ ಬೆಂಬಲಿಗರು ಇನ್ನಷ್ಟು ಅಬ್ಬರದಿಂದ ಹೇಳಲಾರಂಭಿಸಿದ್ದಾರೆ. ನಿಯಂತ್ರಣ ನೀತಿಗಳ ಆಳ್ವಿಕೆಯನ್ನು ದೂಷಿಸುವುದು ಅವರಿಗೆ ಅನಿವಾರ್ಯವಾಗುತ್ತದೆ ಮತ್ತು ಪ್ರಸ್ತುತ ಸರ್ಕಾರದ ಪಕ್ಷ ವಹಿಸುವುದರಿಂದ ಅವರಿಗೆ "ಅಧಿಕ ಪ್ರಯೋಜನ"ವೂ ಲಭಿಸುತ್ತದೆ.

ನವ ಉದಾರವಾದದ ಈ ಟೀಕೆ-ಟಿಪ್ಪಣಿಗಳು ಹೊರಬರುವ ಬಹಳ ಹಿಂದೆಯೇ, ನೆಹರೂವಾದಿ ಕಾರ್ಯತಂತ್ರವನ್ನು ಒಂದು ಸಂಪೂರ್ಣ ವಿಭಿನ್ನ ನೆಲೆಯಲ್ಲಿ ಎಡಪಂಥೀಯರು ಟೀಕಿಸುತ್ತಿದ್ದರು. ನಿಯಂತ್ರಣ ನೀತಿಗಳ ಬಗ್ಗೆ ಎಡಪಂಥೀಯರ ಮತ್ತು ನವ ಉದಾರವಾದಿ ಟೀಕೆಗಳ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸುವುದು ಬಹಳ ಮುಖ್ಯವಾಗಿದೆ. ಕಾರ್ಮಿಕರ ಅಂತಾರಾಷ್ಟ್ರೀಯ ವಿಭಜನೆಯ ವಸಾಹತುಶಾಹಿ ಮಾದರಿಯನ್ನು ಮುರಿಯಲು, ಉತ್ಪಾದಕ ಸರಕುಗಳನ್ನು ತಯಾರಿಸುವ ದೇಶೀಯ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು, ತಾಂತ್ರಿಕ ಸ್ವಾವಲಂಬನೆಯನ್ನು ಸಾಧಿಸಲು, ಸಾರ್ವಜನಿಕ ವಲಯವನ್ನು ಬೆಳವಣಿಗೆಯ ಪ್ರಮುಖ ಸಾಧನವಾಗಿ ಬಳಸಲು, ಎಲ್ಲ ಖನಿಜ ಸಂಪನ್ಮೂಲಗಳನ್ನು ರಾಷ್ಟ್ರೀಕರಣಗೊಳಿಸಲು, ಪ್ರಮುಖ ಬ್ಯಾಂಕುಗಳು ಮತ್ತು ವಿಮಾ ಕಂಪನಿಗಳನ್ನು ರಾಷ್ಟ್ರೀಕರಣಗೊಳಿಸಲು ಮತ್ತು ವಸಾಹತುಶಾಹಿ ಯುಗದಲ್ಲಿ ವಿದೇಶಿ ಬಂಡವಾಳ ಆಕ್ರಮಿಸಿಕೊಂಡಿದ್ದ ಅನುಕೂಲ ಸ್ಥಾನದಿಂದ ಅದನ್ನು ತೆಗೆದುಹಾಕಲು ನೆಹರೂ ಕಾರ್ಯತಂತ್ರದ ಪ್ರಯತ್ನವನ್ನು ಎಡಪಂಥೀಯರು ಬೆಂಬಲಿಸಿದರು. ನವ ಉದಾರವಾದಿ ವಿಶ್ವ ದೃಷ್ಟಿಕೋನದಿಂದ ವಿರೋಧಿಸಲ್ಪಟ್ಟ ಈ ಪ್ರತಿಯೊಂದು ಕ್ರಮಗಳನ್ನೂ ಎಡಪಂಥೀಯರು ಬೆಂಬಲಿಸಿದ್ದರು.

ವರ್ಗ-ವಿರೋಧವನ್ನು ದುರ್ಬಲಗೊಳಿಸಿದ ಕಾರ್ಯತಂತ್ರ

ನೆಹರೂ ಅವರ ಕಾರ್ಯತಂತ್ರದ ಬಗ್ಗೆ ಎಡಪಂಥೀಯರ ಟೀಕೆಯ ಒತ್ತು ಬೇರೊಂದು ವಿಷಯದ ಮೇಲಿತ್ತು. ಈ ಕಾರ್ಯತಂತ್ರವು ದೇಶೀಯ ಮಾರುಕಟ್ಟೆ ಆಧಾರಿತ ಬೆಳವಣಿಗೆಯನ್ನು ಕಲ್ಪಿಸಿಕೊಂಡಿತ್ತು. ಭಾರತದಂತಹ ಒಂದು ಅರ್ಥವ್ಯವಸ್ಥೆಯಲ್ಲಿ ಆಂತರಿಕ ಮಾರುಕಟ್ಟೆಯ ಬೆಳವಣಿಗೆಯು ಮೂಲಭೂತವಾಗಿ ಕೃಷಿಯ ಬೆಳವಣಿಗೆ ಮೇಲೆ ಅವಲಂಬಿತವಾಗಿರುವುದರಿಂದ, ಕಾರ್ಯತಂತ್ರದ ಯಶಸ್ಸು ಉನ್ನತ ಕೃಷಿ ಬೆಳವಣಿಗೆಯ ದರವನ್ನು ಸಾಧಿಸುವುದರ ಮೇಲೆ ಅವಲಂಬಿತವಾಗಿರುತ್ತದೆ. ಕೃಷಿಯ ಉನ್ನತ ಬೆಳವಣಿಗೆಗಾಗಿ ಭೂಸುಧಾರಣೆಗಳು ಅತ್ಯಗತ್ಯವಾಗುತ್ತವೆ. ಆದ್ದರಿಂದ, ನೆಹರೂ ಕಾರ್ಯತಂತ್ರದ ಬಗ್ಗೆ ಎಡಪಂಥೀಯರು ಮಾಡಿದ್ದ ಟೀಕೆಯೆಂದರೆ ಅದು ಭೂ ಮಾಲೀಕತ್ವದ ಕೇಂದ್ರೀಕರಣವನ್ನು ಮುರಿಯದಿರುವುದು ಮಾತ್ರವಲ್ಲದೆ, ನಿಜ ಕೃಷಿಕರಿಗೆ/ಗೇಣಿದಾರರಿಗೆ ಸಾಗುವಳಿಯ ಭದ್ರತೆಯನ್ನು ಒದಗಿಸದೆ ಆಂತರಿಕ ಮಾರುಕಟ್ಟೆ ಆಧಾರಿತ ಅಭಿವೃದ್ಧಿಯನ್ನು ಪ್ರಯತ್ನಿಸುತ್ತಿದೆ ಎಂಬುದು. ಅಂತಹ ಒಂದು ಪರಿಸ್ಥಿತಿಯಲ್ಲಿ, ನಿಯಂತ್ರಣ ನೀತಿಗಳ ಅಡಿಯಲ್ಲಿ ಉಂಟಾಗುವ ಬೆಳವಣಿಗೆಯು, ಬೃಹತ್ ಪ್ರಮಾಣದ ನಿರುದ್ಯೋಗವನ್ನು ನಿವಾರಿಸುವಲ್ಲಿ ಮತ್ತು ಆ ಮೂಲಕ ವಸಾಹತುಶಾಹಿಯ ಬಳುವಳಿಯಾಗಿ ದೇಶದಲ್ಲಿ ನೆಲೆಸಿದ್ದ ಬಡತನವನ್ನು ನಿವಾರಿಸುವಲ್ಲಿ ಬಹಳವಾಗಿ ನಿರ್ಬಂಧಿತವಾಗಿರುತ್ತದೆ ಎಂಬುದು ಎಡಪಂಥೀಯರ ವಾದವಾಗಿತ್ತು.

ನಿಜಕ್ಕೂ ಸಂಭವಿಸಿದ್ದುದು ಇದುವೇ. ಈ ವಿದ್ಯಮಾನದ ಕಾರಣದಿಂದಾಗಿಯೇ ನವ ಉದಾರವಾದವು ಜಾರಿಗೆ ಬರುವುದನ್ನು ತಡೆಯುವಷ್ಟು ವರ್ಗ ವಿರೋಧವು ಬಲಶಾಲಿಯಾಗಿರಲಿಲ್ಲ. ನಿಜ, ಸಾಗುವಳಿದಾರರ ಹಕ್ಕುಗಳನ್ನು ಗುರುತಿಸುವುದೂ ಸಹ ಎಷ್ಟೊಂದು ವ್ಯತ್ಯಾಸವನ್ನು ಉಂಟುಮಾಡುತ್ತದೆ ಎಂಬುದನ್ನು ಪಶ್ಚಿಮ ಬಂಗಾಳದಲ್ಲಿ ತೋರಿಸಲಾಗಿದೆ. "ಆಪರೇಷನ್ ಬರ್ಗಾ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ನಂತರ, 90ರ ದಶಕದ ಪಶ್ಚಿಮ ಬಂಗಾಳದಲ್ಲಿ ಕೃಷಿ ಬೆಳವಣಿಗೆಯ ದರವು ದೇಶದ ಎಲ್ಲ ರಾಜ್ಯಗಳಿಗಿಂತಲೂ ಅತಿ ಹೆಚ್ಚಿನದಾಗಿತ್ತು. ಈ ನಿಟ್ಟಿನಲ್ಲಿ ನಿಯಂತ್ರಣ ನೀತಿಗಳ ನೆಹರೂವಾದಿ ಕಾರ್ಯತಂತ್ರವು ವಿಫಲವಾಯಿತು.

ನವ-ಉದಾರವಾದಿಗಳ ಮೋಸಭರಿತ ತರ್ಕ

ಆದರೆ, ನೆಹರೂವಾದಿ ಕಾರ್ಯತಂತ್ರದ ಬಗ್ಗೆ ನವ ಉದಾರವಾದಿ ಟೀಕೆಯು ಸಂಪೂರ್ಣವಾಗಿ ವಿಭಿನ್ನವಾಗಿತ್ತು. ಅದು ಬೌದ್ಧಿಕ-ಕೈಚಳಕವನ್ನು ಆಧರಿಸಿತ್ತು- "ಒಳ-ಮುಖಿ" ಅಭಿವೃದ್ಧಿ ಕಾರ್ಯತಂತ್ರವನ್ನು "ಹೊರ-ಮುಖಿ" ಅಭಿವೃದ್ಧಿ ಕಾರ್ಯತಂತ್ರದೊಂದಿಗೆ ಹೋಲಿಸಿತು; ಪೂರ್ವ ಏಷ್ಯಾದ ದೇಶಗಳ ಅನುಭವದ ಆಧಾರದ ಮೇಲೆ "ಹೊರ-ಮುಖಿ" ಅಭಿವೃದ್ಧಿ ಕಾರ್ಯತಂತ್ರವು ಹೆಚ್ಚಿನ ಬೆಳವಣಿಗೆಯ ದರಗಳನ್ನು ಕಂಡಿದೆ ಎಂದಿತು. ಆದ್ದರಿಂದ, ನೆಹರೂ ಅವರ "ಒಳ-ಮುಖಿ" ಅಭಿವೃದ್ಧಿ ಕಾರ್ಯತಂತ್ರದ ಬದಲಿಗೆ, ಪೂರ್ವ ಏಷ್ಯಾದ ದೇಶಗಳು ಅನುಸರಿಸಿದ ರೀತಿಯ "ಹೊರ-ಮುಖಿ" ಅಭಿವೃದ್ಧಿ ಕಾರ್ಯತಂತ್ರವನ್ನು ಭಾರತವು ಒಂದು ವೇಳೆ ಅನುಸರಿಸಿದ್ದರೆ ಅದು ಇನ್ನೂ ಹೆಚ್ಚು ಒಳ್ಳೆಯದಾಗುತ್ತಿತ್ತು ಎಂದಿತು. ಈ "ಹೊರ-ಮುಖಿ" ಅಭಿವೃದ್ಧಿ ಕಾರ್ಯತಂತ್ರವು ಅರ್ಥವ್ಯವಸ್ಥೆಯನ್ನು ಸರಕುಗಳು, ಸೇವೆಗಳು ಮತ್ತು ಹಣಕಾಸು ಸೇರಿದಂತೆ ಬಂಡವಾಳದ ಒಳಹರಿವಿಗೆ ತೆರೆದಿಡುತ್ತದೆ ಮತ್ತು ಅದಕ್ಕಾಗಿ ಸರ್ಕಾರದ ಮೇಲೆ "ವಿತ್ತೀಯ ಜವಾಬ್ದಾರಿ" ಕಾಯ್ದೆಯನ್ನು (ಅಲ್ಪ ವಿತ್ತೀಯ ಕೊರತೆಗಳು) ಜಾರಿಗೊಳಿಸಲಾಗುತ್ತದೆ ಮತ್ತು ಕೂಲಿಯನ್ನು ಕೆಳಮಟ್ಟದಲ್ಲಿ ಇಡುವ ಮೂಲಕ ಮತ್ತು ಕಾರ್ಮಿಕ ಮುಷ್ಕರಗಳ ಸಂಭವವನ್ನು ಕಡಿಮೆಮಾಡುವ ಮೂಲಕ ಅರ್ಥವ್ಯವಸ್ಥೆಯನ್ನು "ಹೂಡಿಕೆದಾರ ಸ್ನೇಹಿ"ಯನ್ನಾಗಿ ಮಾಡುತ್ತದೆ ಎಂದು ಹೇಳಲಾಯಿತು.

ಇದು ಸೈದ್ಧಾಂತಿಕವಾಗಿಯೂ ಮತ್ತು ಪೂರ್ವ ಏಷ್ಯಾದ ಅನುಭವದ ಒಂದು ಅರ್ಥವಿವರಣೆಯಾಗಿಯೂ ಸಹ ಮೋಸದಿಂದ ಕೂಡಿದ ತರ್ಕವಾಗಿತ್ತು. ನಂತರ ನಡೆಸಿದ ಸಂಶೋಧನೆಯು ಪೂರ್ವ ಏಷ್ಯಾ ವಿದ್ಯಮಾನವು ಸರಕುಗಳು, ಸೇವೆಗಳು ಮತ್ತು ಹಣಕಾಸು ಸೇರಿದಂತೆ ಬಂಡವಾಳದ ಮುಕ್ತ ಹರಿವಿನೊಂದಿಗೆ ನವ ಉದಾರವಾದಿ ಅಭಿವೃದ್ಧಿಯ ಒಂದು ಪ್ರಕರಣವಲ್ಲ ಎಂಬುದನ್ನು ಮತ್ತು ಸರ್ಕಾರದ ಮಧ್ಯಪ್ರವೇಶವಿಲ್ಲದ ಅಭಿವೃದ್ಧಿಯ ಒಂದು ಪ್ರಕರಣವಲ್ಲ ಎಂಬುದನ್ನು ತೋರಿಸಿದೆ. ಸೈದ್ಧಾಂತಿಕವಾಗಿ, "ಹೊರ-ಮುಖಿ" ಅಭಿವೃದ್ಧಿ ಕಾರ್ಯತಂತ್ರದ ವಾದವನ್ನು ಪ್ರತಿಯೊಂದು ದೇಶವೂ ಒಂದು "ಸಣ್ಣ ದೇಶ"ದಂತೆಯೇ ಮತ್ತು ಅದು ತನಗೆ ಸಾಧ್ಯವಾದಷ್ಟು ಪ್ರಮಾಣದ ರಫ್ತುಗಳನ್ನು ಮಾಡಬಹುದು ಎಂಬ ಊಹೆಯ ಮೇಲೆ ಮಂಡಿಸಲಾಯಿತು. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಯಾವುದೇ ಅವಧಿಯಲ್ಲಿ ಒಂದು ನಿರ್ದಿಷ್ಟ ಗಾತ್ರದ ವಿಶ್ವ ಬೇಡಿಕೆ ಮಾತ್ರ ಇರುತ್ತದೆ, ಆದ್ದರಿಂದ ಒಂದು ದೇಶವು ಅತಿ ಹೆಚ್ಚು ರಫ್ತು ಮಾಡಿದಾಗ ಅದು ಮತ್ತೊಂದು ದೇಶಕ್ಕೆ ಹೊರೆಯಾಗುತ್ತದೆ/ ನಷ್ಟವಾಗುತ್ತದೆ. ಆದ್ದರಿಂದ, ಪ್ರತಿಯೊಂದು ದೇಶವೂ ಪೂರ್ವ ಏಷ್ಯಾದ ಕಾರ್ಯತಂತ್ರವನ್ನೇ ಅನುಸರಿಸಿದರೂ ಸಹ, ಪೂರ್ವ ಏಷ್ಯಾದ ದೇಶಗಳಂತೆ ಯಶಸ್ವಿಯಾಗುವುದು ಸಾಧ್ಯವಿಲ್ಲ ಎಂಬ ಅಂಶವನ್ನು ಸಂಪೂರ್ಣವಾಗಿ ಮರೆಮಾಚಲಾಯಿತು.

ಅವನತಿಯ ಸ್ಪರ್ಧೆ ಅಸಮಾನತೆಯ ಪ್ರಪಾತಕ್ಕೆ

ನವ ಉದಾರವಾದವು ವಾಸ್ತವವಾಗಿ ಜಾಗತಿಕ ದಕ್ಷಿಣದ ದೇಶಗಳನ್ನು ಪರಸ್ಪರರ ವಿರುದ್ಧ ಎತ್ತಿಕಟ್ಟಿದೆ. ಇದು ಪ್ರತಿಯೊಂದು ದೇಶವನ್ನೂ, ಇತರ ದೇಶಗಳಿಗೆ ಹೋಲಿಸಿದರೆ ತನ್ನ ಕೂಲಿಯ ಮಟ್ಟವನ್ನು ಇನ್ನೂ ಕೆಳಮಟ್ಟಕ್ಕೆ ಇಳಿಸುವ ಮತ್ತು ಕಾರ್ಮಿಕರ ಕೆಲಸದ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸುವ ಒಂದು ಅವನತಿಯ ಸ್ಪರ್ಧೆಗಿಳಿಯುವತ್ತ ತಳ್ಳಿದೆ. ಈ ದೇಶಗಳಲ್ಲಿ ರೈತ ಕೃಷಿಗೆ ಮತ್ತು ಕಿರು ಉತ್ಪಾದನೆಗೆ ಒದಗಿಸುತ್ತಿದ್ದ ಪ್ರಭುತ್ವದ ಬೆಂಬಲವನ್ನು ಹಂತ ಹಂತವಾಗಿ ಹಿಂತೆಗೆದುಕೊಳ್ಳಲಾಗಿದೆ. ಹಾಗಾಗಿ, ಕಿರು ಉತ್ಪಾದಕರು ಮತ್ತು ರೈತರು ತೀವ್ರ ಸಂಕಷ್ಟಗಳಿಗೆ ಸಿಲುಕಿದ್ದಾರೆ. ನವ ಉದಾರವಾದೀ ಬಂಡವಾಳಶಾಹಿಯ ಬಿಕ್ಕಟ್ಟಿನಿಂದಾಗಿ ಈ ಎಲ್ಲ ಲಕ್ಷಣಗಳೂ ಉಲ್ಬಣಗೊಂಡಿವೆ. ಇದು ಒಟ್ಟಾರೆ ವಿಶ್ವ ಬೇಡಿಕೆಯ ಗಾತ್ರದ ತೀವ್ರ ಇಳಿಕೆಗೆ ಕಾರಣವಾಗಿದೆ.

ನವ ಉದಾರವಾದದ ಪ್ರತಿಪಾದಕರು ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ನಿಯಂತ್ರಣ ನೀತಿಗಳ ಯುಗಕ್ಕೆ ಹೋಲಿಸಿದರೆ ಜಿಡಿಪಿಯ ಬೆಳವಣಿಗೆಯು ವೇಗವರ್ಧನೆಯನ್ನು ಕಂಡಿದೆ ಎಂಬುದನ್ನು ಒತ್ತಿಹೇಳುತ್ತಾರೆ. ಈ ವೇಗವರ್ಧನೆಯೇ ಒಂದು ಗಂಭೀರ ಅನುಮಾನದ ವಿಷಯವಾಗಿದೆ. ಭಾರತ ಸರ್ಕಾರದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರರೂ ಸಹ ಜಿಡಿಪಿಯ ಅಧಿಕೃತ ಬೆಳವಣಿಗೆಯ ದರವು ಒಂದು ದೊಡ್ಡ ಅತಿ-ಅಂದಾಜು ಎಂದು ಹೇಳಿದ್ದಾರೆ. ಜೊತೆಗೆ, ಜಿಡಿಪಿಯು ಕೆಲವರ ಜೇಬಿಗೆ ಮಾತ್ರ ಹೋದರೆ ಉಳಿದವರ ಹೊಟ್ಟೆ ತುಂಬುವುದಿಲ್ಲ. ಆದ್ದರಿಂದ, ನಿಯಂತ್ರಣ ನೀತಿಗಳ ಆಳ್ವಿಕೆಯ ಮತ್ತು ನವ ಉದಾರವಾದಿ ಆಳ್ವಿಕೆಯ ಅವಧಿಗಳ ಸಾಪೇಕ್ಷ ಕಾರ್ಯಕ್ಷಮತೆಯ ಬಗ್ಗೆ ತೀರ್ಪು ನೀಡಬೇಕಾದರೆ ನಾವು ದುಡಿಯುವ ಜನತೆಯ ನಿಜ ಪರಿಸ್ಥಿತಿಗಳನ್ನು ನೋಡಬೇಕಾಗುತ್ತದೆ.

ನವ ಉದಾರವಾದಿ ಆಳ್ವಿಕೆಯ ಜಮಾನದಲ್ಲಿ ಶ್ರೀಮಂತರಿಗೆ ಹೋಲಿಸಿದರೆ ದುಡಿಯುವ ಜನರು ತುಲನಾತ್ಮಕವಾಗಿ ಹೀನಾಯವಾದ ಸ್ಥಿತಿಯಲ್ಲಿದ್ದಾರೆ ಎಂಬ ಅಂಶದ ಬಗ್ಗೆ ಅನುಮಾನಪಡುವ ಅಗತ್ಯವಿಲ್ಲ. ಈ ನಿಟ್ಟಿನಲ್ಲಿ ಒಂದು ಅತ್ಯಂತ ಸಮಗ್ರವಾದ ಅಧ್ಯಯನವನ್ನು ಥಾಮಸ್ ಪಿಕೆಟ್ಟಿ ಮತ್ತು ಇತರರು ನಡೆಸುವ ಒಂದು ಸಂಸ್ಥೆ ಮಾಡಿದೆ. ಈ ಅಧ್ಯಯನದ ವರದಿಯ ಪ್ರಕಾರ, ಸ್ವಾತಂತ್ರ್ಯ ಸಮಯದ ರಾಷ್ಟ್ರೀಯ ಆದಾಯದಲ್ಲಿ ಜನಸಂಖ್ಯೆಯ ಮೇಲ್ತುದಿಯ ಶೇ. 1ರಷ್ಟು ಮಂದಿಯ ಪಾಲು ಸುಮಾರು ಶೇ. 12ರಷ್ಟಿತ್ತು. ಇದು 1982ರ ಹೊತ್ತಿಗೆ ಶೇ. 6ಕ್ಕೆ ಇಳಿದಿತ್ತು. ಅದರ ನಂತರ ಏರಿಕೆ ಆರಂಭವಾಗಿ, 2023ರ ವೇಳೆಗೆ ಸುಮಾರು ಶೇ. 23ರ ಮಟ್ಟವನ್ನು ತಲುಪಿತ್ತು. ಲಭ್ಯವಿರುವ ಕಳೆದ ಒಂದು ಶತಮಾನದ ಅಂದಾಜುಗಳಲ್ಲಿ ಇದು ಅತಿ ಹೆಚ್ಚಿನ ಮಟ್ಟದ್ದಾಗಿದೆ. ಆದ್ದರಿಂದ, ವಸಾಹತುಶಾಹಿ ಕಾಲದಲ್ಲಿಯೂ ಸಹ ಕಂಡುಬರದ ವರಮಾನ ಅಸಮಾನತೆಗಳ ಅಂತರದಲ್ಲಿ ನವ ಉದಾರವಾದಿ ಯುಗವು ಒಂದು ಅಭೂತಪೂರ್ವ ಮಟ್ಟದ ಹೆಚ್ಚಳವನ್ನು ಕಂಡಿದೆ.

ನವ ಉದಾರವಾದಿ ಆಳ್ವಿಕೆಯ ಪುಟ 15 ಕ್ಕೆ

ಬಿಹಾರದ 2 ಕೋಟಿ ಮತದಾರರಿಗೆ 'ವೋಟ್‌ಬಂದಿ' ಭೀತಿ

-ಆಧಾರ್ ಏಕಿಲ್ಲ-ಚುನಾವಣಾ ಆಯೋಗಕ್ಕೆ ಸುಪ್ರಿಂ ಕೋರ್ಟ್ ಪ್ರಶ್ನೆ

ಈ ವರ್ಷದ ನವಂಬರಿನಲ್ಲಿ ವಿಧಾನಸಭಾ ಚುನಾವಣೆ ನಡೆಯಬೇಕಾದ ಬಿಹಾರಿನಲ್ಲಿ ಜೂನ್ 24 ರಂದು ಪ್ರಾರಂಭವಾದ ಭಾರತದ ಚುನಾವಣಾ ಆಯೋಗ(ಇಸಿಐ)ದ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಎಂಬುದು ಸುಮಾರು 2ರಿಂದ 3 ಕೋಟಿ ನಾಗರಿಕರ ಮತದಾನದ ಹಕ್ಕನ್ನು ಕಸಿದುಕೊಳ್ಳಬಹುದೇ ಎಂಬ ಭೀತಿಯೊಂದಿಗೆ, ತೀವ್ರ ರಾಜಕೀಯ ಮತ್ತು ಕಾನೂನು ಹೋರಾಟವನ್ನು ಹುಟ್ಟುಹಾಕಿದೆ. ಅದೀಗ ದೇಶದ ಸರ್ವೋಚ್ಚ ನ್ಯಾಯಾಲಯವನ್ನೂ ತಲುಪಿದೆ. ಇಬ್ಬರು ನ್ಯಾಯಾಧೀಶರ ಸುಪ್ರಿಂ ಕೋರ್ಟ್ ಪೀಠ ಚುನಾವಣಾ ಆಯೋಗದ ವಕೀಲರಿಗೆ ಕೆಲವು ತೀಕ್ಷ್ಣ ಪ್ರಶ್ನೆಗಳನ್ನು ಕೇಳಿದರೂ ಎಸ್‌ಐಆರ್ ಪ್ರಕ್ರಿಯೆಯನ್ನು ಮುಂದುವರೆಸಲು ಅವಕಾಶ ನೀಡಿರುವುದು ಈ ಭೀತಿ ಮುಂದುವರೆಯುವಂತೆ ಮಾಡಿದೆ.

ಬಿಹಾರದ ಎಸ್‌ಐಆರ್ ನ್ನು ಆರಂಭಿಸಿರುವ ಮತ್ತು ಅದನ್ನು ನಡೆಸುತ್ತಿರುವ ರೀತಿಗಳೇ ಹಲವಾರು ಪ್ರಶ್ನೆಗಳನ್ನು ಎಬ್ಬಿಸಿವೆ.

ಇತ್ತೀಚೆಗಷ್ಟೇ ರಾಜ್ಯ ಚುನಾವಣಾ ಯಂತ್ರ ಮತದಾರ ಪಟ್ಟಿಗಳ ಪರಿಷ್ಕರಣೆ ನಡೆಸಿತ್ತು. 'ವಿಶೇಷ ಸಾರಾಂಶ ಪರಿಷ್ಕರಣೆ' ಎಂದು ಹೆಸರಿಸಲಾಗಿದ್ದ ಇದು ಜೂನ್ 2024ರಿಂದ ಜನವರಿ 2025ರ ವರೆಗೆ ನಡೆದು ಈಗಾಗಲೇ ಹೊಸ ಮತದಾರ ಪಟ್ಟಿಯನ್ನು ಇನ್ನೇನು ಪ್ರಕಟಿಸುವ ನಿರೀಕ್ಷೆಯಿತ್ತು. ಅದರ ಪ್ರಕಾರ ಬಿಹಾರದ ಮತದಾರರ ಸಂಖ್ಯೆ 7,80,22,933(ದಿ ರಿಪೋರ್ಟರ್ಸ್ ಕಲೆಕ್ಟಿವ್). ಆದರೆ ಇದ್ದಕ್ಕಿದ್ದಂತೆ ಕನಿಷ್ಠ 7 ತಿಂಗಳ ಕೆಲಸ ಕಸದ ಬುಟ್ಟಿ ಸೇರಿದೆ. ಏಕೆಂದರೆ ಜೂನ್ 24 ರಂದು ಚುನಾವಣಾ ಆಯೋಗ ಮತದಾರರ ಪಟ್ಟಿಗಳನ್ನು ಆಮೂಲಾಗ್ರವಾಗಿ ಬದಲಿಸುವ 'ವಿಶೇಷ ತೀವ್ರ ಪರಿಷ್ಕರಣೆ' ನಡೆಸುವುದಾಗಿ ಪ್ರಕಟಿಸಿತು.ಮನೆ-ಮನೆಗೆ ಹೋಗಿ ಈ ಪರಿಷ್ಕರಣೆ ನಡೆಯಲಿದೆ ಎಂದು ಹೇಳಿತು. "ಕಳೆದ 20 ವರ್ಷಗಳ ದೀರ್ಘ ಅವಧಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಸೇರಿಸುವುದು, ತೆಗೆಯುವುದು ನಡೆದಿದೆಯಾದ್ದರಿಂದ ಗಹನವಾದ ಬದಲಾವಣೆಗಳು ನಡೆದಿರುವುದನ್ನ ಆಯೋಗ ಗಮನಿಸಿದೆ. ತ್ವರಿತ ನಗರೀಕರಣ ಮತ್ತು ಮತ್ತೆ-ಮತ್ತೆ ವಲಸೆ ನಿಯಮಿತ ಪ್ರವೃತ್ತಿಯಾಗಿ ಬಿಟ್ಟಿದೆ"- ಇದು ಈ 'ತೀವ್ರ' ಪರಿಷ್ಕರಣೆಗೆ ಆಯೋಗ ಕೊಟ್ಟಿರುವ ಕಾರಣ. ಆದರೆ, ಬಿಹಾರದ ಚುನಾವಣಾ ಕಚೇರಿಯ ದಾಖಲೆಗಳಲ್ಲಿ ಈ ಹಿಂದೆ 2003ರಲ್ಲಿ ತೀವ್ರ ಪರಿಷ್ಕರಣೆಯ ನಂತರ ಕಳೆದ ಎರಡು ದಶಕಗಳಲ್ಲಿ ಇದಕ್ಕೆ ಸಾಕ್ಷಿಯೇನೂ ದೊರೆಯುವುದಿಲ್ಲ ಎಂದು 'ರಿಪೋರ್ಟರ್ಸ್ ಕಲೆಕ್ಟಿವ್'ನ ತನಿಖಾ ಪತ್ರಕರ್ತರು ಹೇಳುತ್ತಾರೆ. ಇತ್ತೀಚಿನ 'ಸಾರಾಂಶ' ಪರಿಷ್ಕರಣೆಯ ನಂತರವೂ ಆಯೋಗ ಆ ಪರಿಷ್ಕರಣೆಯಲ್ಲಿ ಏನಾದರೂ ಕುಂದು-ಕೊರತೆಗಳನ್ನು ಆಯೋಗ ದಾಖಲಿಸಿರಲಿಲ್ಲವಂತೆ.

ಆದರೂ, ಬಿಹಾರದ ಮತದಾರ ಪಟ್ಟಿಗಳಲ್ಲಿ ಅಷ್ಟೊಂದು ಕುಂದು ಕೊರತೆಗಳಿದ್ದರೆ, ಕಳೆದ ಎರಡು ದಶಕಗಳಲ್ಲಿ ನಡೆದ ಐದು ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಗಳ ಫಲಿತಾಂಶಗಳ ಕತೆ ಏನು ಎಂದೂ ಕೆಲವರು ಪ್ರಶ್ನಿಸಿದ್ದಾರೆ.

ಇಷ್ಟೇ ಅಲ್ಲ, ಸ್ವತಂತ್ರ ಭಾರತದ ಚುನಾವಣಾ ಇತಿಹಾಸದಲ್ಲೇ ಅಭೂತಪೂರ್ವವಾದ ಈ 'ತೀವ್ರ' ಪರಿಷ್ಕರಣೆಗೆ ಆಯೋಗದ ವಿಧಿಸಿದ ಈ ಕೆಳಗಿನ ನಿಬಂಧನೆಗಳು ಮತ್ತು ಬಿಗಿಯಾದ ಗಡುವುಗಳು ಬೇರೆಯದೇ ಪ್ರಶ್ನೆಗಳನ್ನು ಎತ್ತಿವೆ:

2003 ರ ವರೆಗೆ ನೊಂದಾಯಿಸಿದ್ದ ಮತದಾರು, ತಾವು ಆ ವರ್ಷದ ಮತದಾರ ಪಟ್ಟಿಯಲ್ಲಿ ಇದ್ದಿದ್ದ ಬಗ್ಗೆ ಸಾಕ್ಷ್ಯ ಒದಗಿಸಬೇಕು.

2003ರ ಪಟ್ಟಿಯಲ್ಲಿ ಹೆಸರಿರದ 40ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಮತದಾರರು, ತಮ್ಮ ಪೌರತ್ವ, ಗುರುತು ಮತ್ತು ನಿವಾಸದ ದಾಖಲೆಗಳನ್ನು ಒದಗಿಸಬೇಕು.

21 ರಿಂದ 40 ವರ್ಷ ವಯಸ್ಸಿನ ಮತದಾರರು ತಮ್ಮ ತಂದೆ-ತಾಯಿ 2003ರ ಪಟ್ಟಿಯಲ್ಲಿ ಮತದಾರರಾಗಿದ್ದ ಬಗ್ಗೆ ಸಾಕ್ಷ್ಯ ಒದಗಿಸಬೇಕು, ಇಲ್ಲವೇ ತಮ್ಮ ಗುರುತು ಮತ್ತು ಪೌರತ್ವವನ್ನು ಮತ್ತು ತಮ್ಮ ತಂದೆ-ತಾಯಿಯ ಗುರುತು ಮತ್ತು ಪೌರತ್ವವನ್ನು ಸಾಬೀತು ಪಡಿಸಬೇಕು.

2004ರ ನಂತರ ಹುಟ್ಟಿದ, 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮತದಾರರು ಕೂಡ ಇದೇ ರೀತಿಯಲ್ಲಿ ತಮ್ಮ ತಂದೆ-ತಾಯಿ 2003ರ



ಪಟ್ಟಿಯಲ್ಲಿ ಮತದಾರರಾಗಿದ್ದ ಬಗ್ಗೆ ಸಾಕ್ಷ್ಯ ಒದಗಿಸಬೇಕು, ಇಲ್ಲವೇ ತಮ್ಮ ಗುರುತು ಮತ್ತು ಪೌರತ್ವದ ಮತ್ತು ತಮ್ಮ ತಂದೆ-ತಾಯಿಯ ಗುರುತು ಮತ್ತು ಪೌರತ್ವದ ದಾಖಲೆಗಳನ್ನು ಕೊಡಬೇಕು..

ಅಂದರೆ, ಜನವರಿ 1, 2003 ರ ವೇಳೆಗೆ ನೋಂದಾಯಿಸಲಾದ 4.96 ಕೋಟಿ ಮತದಾರರೊಂದಿಗೆ, ಬಿಹಾರದ ಎಲ್ಲಾ 7.9 ಕೋಟಿಯಷ್ಟು ಮತದಾರರು ಗಣತಿ ಪ್ರಪತ್ರ(ಫಾರ್ಮ್)ಗಳನ್ನು ಸಲ್ಲಿಸಬೇಕು. ಅವರ ಜನ್ಮ ದಿನಾಂಕ ಮತ್ತು ಸ್ಥಳವನ್ನು ಸಾಬೀತುಪಡಿಸಲು ಹೆಚ್ಚುವರಿ ದಾಖಲೆಗಳನ್ನು ಒದಗಿಸಬೇಕು. 1987 ರ ನಂತರ ಜನಿಸಿದವರಿಗೆ, ಅವರ ಪೋಷಕರು 2003 ರ ಪಟ್ಟಿಯಲ್ಲಿ ಇಲ್ಲದಿದ್ದರೆ, ಅವರ ಗುರುತಿನ ಪುರಾವೆ ಸಹ ಕಡ್ಡಾಯವಾಗಿದೆ.

ಇವನ್ನೆಲ್ಲ ತಮ್ಮ ಗಣನೆ ಪ್ರಪತ್ರದೊಂದಿಗೆ ಸಲ್ಲಿಸಲು ಇರುವ ಅವಧಿ ಕೇವಲ ಒಂದು ತಿಂಗಳು-ಜೂನ್ 26 ರಿಂದ ಜುಲೈ 25ರ ಒಳಗೆ. ಆಗಸ್ಟ್ 1, 2025ರಂದು ಕರಡು ಮತದಾರ ಪಟ್ಟಿ ಪ್ರಕಟಿಸಲಾಗುವುದು. ಆ ಬಗ್ಗೆ ಆಕ್ಷೇಪಣೆಗಳು, ಬದಲಾವಣೆಗಳನ್ನು ತಿಳಿಸಲು ಕೊಟ್ಟಿರುವ ಅವಧಿ ಮತ್ತೆ ಒಂದು ತಿಂಗಳು ಮಾತ್ರ. ಆಕ್ಷೇಪಣೆಗಳನ್ನು/ತಪ್ಪುಗಳನ್ನು ಬಿಹಾರ ಚುನಾವಣೆಯ ಅಧಿಸೂಚನೆಯ ಮೊದಲು ಸರಪಡಿಸಲಾಗುತ್ತದೆಯೇ ಎಂಬ ಪ್ರಶ್ನೆಯೂ ಎದ್ದಿದೆ.

2003ರ ಪರಿಷ್ಕರಣೆ ಕಾರ್ಯಕ್ಕೆ ಒಂದು ವರ್ಷದ ವರೆಗೆ ಹಿಡಿಯಿತು, ಇತ್ತೀಚೆಗಷ್ಟೇ, ನಡೆಸಿದ 'ಸಾರಾಂಶ' ಪರಿಷ್ಕರಣೆಗೂ ಕನಿಷ್ಠ 7 ತಿಂಗಳು ಬೇಕಾಯಿತು ಎಂಬುದನ್ನು ಇಲ್ಲಿ ಗಮನಿಸಬೇಕು. ಆದರೆ 'ತೀವ್ರ' ಪರಿಷ್ಕರಣೆಯನ್ನು ಮೂರೇ ತಿಂಗಳಲ್ಲಿ ಮುಗಿಸಬೇಕಾಗಿದೆ!

ಮತ್ತೊಂದು ಗಮನಾರ್ಹ ಸಂಗತಿಯೆಂದರೆ, ಆಯೋಗ ಜನನ ಪ್ರಮಾಣಪತ್ರಗಳು, ಪಾಸ್‌ಪೋರ್ಟ್‌ಗಳು ಮತ್ತು ಜಾತಿ ಪ್ರಮಾಣಪತ್ರಗಳಂತಹ 11 ದಾಖಲೆಗಳ ಪಟ್ಟಿಯನ್ನು ನಿರ್ದಿಷ್ಟಪಡಿಸಿದೆ, ಆದರೆ ಬಿಹಾರದ ಬಡ ಮತ್ತು ಅಂಚಿನಲ್ಲಿರುವ ಸಮುದಾಯಗಳಿಗೆ ಅತ್ಯಂತ ಸುಲಭವಾಗಿ ಲಭ್ಯವಿರುವ ಗುರುತಿನ ದಾಖಲೆಗಳಾದ ಆಧಾರ್, ಮತದಾರರ ಗುರುತಿನ ಚೀಟಿ ಮತ್ತು ಪಡಿತರ ಚೀಟಿಯನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿಲ್ಲ..

ಈ ದಾಖಲೆಗಳನ್ನು ಹೊರಗಿಡುವುದು, ವಿಶೇಷವಾಗಿ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಮುಸ್ಲಿಮರು ಸೇರಿದಂತೆ ಅಂಚಿನಲ್ಲಿರುವ ಗುಂಪುಗಳಲ್ಲಿ ಆಕ್ರೋಶವನ್ನು ಹುಟ್ಟುಹಾಕಿದೆ. ಬಡತನದ ಪ್ರಮಾಣ ಹೆಚ್ಚಿರುವ ರಾಜ್ಯದಲ್ಲಿ ನಗರದ ಜನದಟ್ಟಣೆಯ ಕೊಳೆಗೇರಿಗಳು ಮತ್ತು ಗ್ರಾಮೀಣ ಹೊರವಲಯಗಳಲ್ಲಿ, ಆಗಾಗ ಪ್ರವಾಹಗಳಿಗೆ ಉತ್ತಾಗುವ ಪ್ರದೇಶಗಳ ಅನೇಕ ನಿವಾಸಿಗಳು ಚುನಾವಣಾ ಆಯೋಗ ಪಟ್ಟಿ ಮಾಡಿದ ದಾಖಲೆಗಳಲ್ಲಿ ಹೆಚ್ಚಿನವನ್ನು ಹೊಂದಿಲ್ಲ.

ಉದ್ಯೋಗವನ್ನು ಅರಸಿ ರಾಜ್ಯದಿಂದ ಹೊರಗೆ ಹೋದವರ ಸಂಖ್ಯೆ 1.76 ಕೋಟಿ ಎಂದು ಅಂದಾಜಿಸಲಾಗಿದೆ, ಇವರು ಊರಿಗೆ ಬಂದು ಒಂದು ತಿಂಗಳೊಳಗೆ ಅಗತ್ಯವಿರುವ ದಾಖಲೆಗಳನ್ನು ಒದಗಿಸುವುದು ಹರಸಾಹಸವೇ ಸರಿ.

ಇವರೆಲ್ಲರೂ ಮತದಾನದ ಬಹುಮೂಲ್ಯ ಹಕ್ಕನ್ನು ಕಳಕೊಳ್ಳುವ ಸಂಭವವಿದೆ, ಮತ್ತು ಇಂತವರ ಸಂಖ್ಯೆ 2 ರಿಂದ 3 ಕೋಟಿ ಆಗಬಹುದು ಎಂದು ಹೇಳಲಾಗುತ್ತಿದೆ.

ಸುಪ್ರೀಂ ಕೋರ್ಟ್ ವಿಚಾರಣೆ

-ಮತದಾರ ಪಟ್ಟಿ ಪರಿಷ್ಕರಣೆಯೇ? ಅಥವ ಪೌರತ್ವ ಪರೀಕ್ಷಣೆಯೇ?

ಈ ಹಿನ್ನೆಲೆಯಲ್ಲಿ ಜುಲೈ 10 ರಂದು ಸುಪ್ರೀಂ ಕೋರ್ಟ್ ಪೀಠ ಈ ಪರಿಷ್ಕರಣೆ ಪ್ರಕ್ರಿಯೆಯನ್ನು ತಡೆಯದಿರುವುದು ಸಹಜವಾಗಿಯೇ ಆತಂಕ ಉಂಟು ಮಾಡಿದೆ. ಆದರೂ ವಿಚಾರಣೆಯ ಸಂದರ್ಭದಲ್ಲಿ, ನ್ಯಾಯಮೂರ್ತಿಗಳಾದ



ಸುಧಾಂಶು ಧುಲಿಯಾ ಮತ್ತು ಜೋಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು ಆಯೋಗದ ವಕೀಲರು, ಆಧಾರ್ ಪೌರತ್ವದ ದಸ್ತಾವೇಜು ಅಲ್ಲವಾದ್ದರಿಂದ ಅದನ್ನು ಸ್ವೀಕರಿಸಬಹುದಾದ ದಾಖಲೆಗಳ ಪಟ್ಟಿಯಲ್ಲಿ ಸೇರಿಸಿಲ್ಲ ಎಂದು ಸಮರ್ಥಿಸಿಕೊಂಡರೂ, ಆಧಾರ್ನ್ನು ಮಾನ್ಯ ದಾಖಲೆಯಾಗಿ ಸ್ವೀಕರಿಸುವುದನ್ನು ಪರಿಗಣಿಸಬೇಕೆಂದು ಆಯೋಗಕ್ಕೆ ಹೇಳಿದೆ. ಸರಕಾರ ಹಲವಾರು ಪ್ರಮಾಣ ಪತ್ರಗಳಿಗೆ ಆಧಾರ್ ನ್ನು ಪರಿಗಣಿಸುತ್ತಿರುವಾಗ, 11 ದಾಖಲೆಗಳ ಪಟ್ಟಿಯಿಂದ ಅದನ್ನು ಹೊರಗಿಡುವುದು ಸಮಸ್ಯಾತ್ಮಕವಾಗಿದೆ ಎಂದು ಪೀಠ ಒತ್ತಿಹೇಳಿತು. ಅದೇ ರೀತಿಯಲ್ಲಿ ಮತದಾರರ ಗುರುತಿನ ಚೀಟಿ ಮತ್ತು ಪಡಿತರ ಚೀಟಿಗಳನ್ನು ಕೂಡ ಮಾನ್ಯ ದಾಖಲೆಗಳಾಗಿ ಸ್ವೀಕರಿಸುವುದನ್ನು ಪರಿಗಣಿಸಬೇಕೆಂದೂ ಪೀಠ ಹೇಳಿದೆ. ಆಯೋಗ ಪಟ್ಟಿ ಮಾಡಿರುವ 11 ದಾಖಲೆಗಳೂ ಪೌರತ್ವದ ದಾಖಲೆಗಳೇನಲ್ಲ ಎಂದೂ ಪೀಠ ಟಿಪ್ಪಣಿ ಮಾಡಿತು.

ಈ ಪರಿಷ್ಕರಣೆಯ ಸಮಯ ಮತ್ತು ಅವಧಿಯನ್ನೂ ಸಹ ನ್ಯಾಯಾಲಯವು ಪ್ರಶ್ನಿಸಿತು, ಇದನ್ನು ಚುನಾವಣೆಗಳಿಗೆ ಹತ್ತಿರದಲ್ಲಿ ಏಕೆ ನಡೆಸಲಾಗುತ್ತಿದೆ ಮತ್ತು ಸಾಮಾನ್ಯವಾಗಿ ಗೃಹ ಸಚಿವಾಲಯದ ವ್ಯಾಪ್ತಿಯಲ್ಲಿರುವ ಜವಾಬ್ದಾರಿಯಾದ ಪೌರತ್ವ ಪರಿಶೀಲನೆಯ ಮೇಲೆ ಆಯೋಗ ಏಕೆ ಗಮನಹರಿಸುತ್ತಿದೆ ಎಂದು ಕೇಳಿತು. ಈ ಪರಿಷ್ಕರಣೆಯ ಅಡಿಯಲ್ಲಿ "ನೀವು ಪೌರತ್ವವನ್ನು ಪರೀಕ್ಷಿಸಬೇಕೆಂದಿದ್ದರೆ, ನೀವು ಬೇಗನೇ ಕಾರ್ಯ ಪ್ರವೃತ್ತರಾಗಬೇಕಿತ್ತು; ಇದೀಗ ವಿಳಂಬವಾಗಿದೆ" ಎನ್ನುತ್ತ ನ್ಯಾಯಪೀಠ "ಮತದಾನದ ಹಕ್ಕು? ಈ ಪ್ರಶ್ನೆ ಒಂದು ಮಹತ್ವದ ಪ್ರಶ್ನೆ ಎಂಬುದರಲ್ಲಿ ಸಂದೇಹವೇ ಇಲ್ಲ, ಇದು ಪ್ರಜಾಪ್ರಭುತ್ವದ ಮೂಲಕ್ಕೇ ಹೋಗುತ್ತದೆ" ಎಂದು ಟಿಪ್ಪಣಿ ಮಾಡಿತು.

ನ್ಯಾಯಪೀಠ ವಿಚಾರಣೆಯ ನಂತರ ಹೊರಡಿಸಿದ ತನ್ನ ಆದೇಶದಲ್ಲಿ ಈ ಪರಿಷ್ಕರಣೆಯನ್ನು ಪ್ರಶ್ನಿಸಿರುವ ಅರ್ಜಿದಾರರು ಮೂರು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ ದು ಹೇಳಿದೆ: 1. ಈ ವಿಶೇಷ ತೀವ್ರ ಪರಿಷ್ಕರಣೆ ನಡೆಸುವ ಚುನಾವಣಾ ಆಯೋಗದ ಅಧಿಕಾರ; 2. ಅದು ಅಂಗೀಕರಿಸಿರುವ ವಿಧಾನ ಮತ್ತು ಅದನ್ನು ಕೈಗೊಂಡಿರುವ ರೀತಿ ಮತ್ತು 3. ಇದನ್ನು ಕೈಗೊಂಡಿರುವ ಸಮಯ- ಇದರಲ್ಲಿ, ಕರಡು ಮತದಾರ ಪಟ್ಟಿಗಳ ಸಿದ್ಧತೆ, ಆಕ್ಷೇಪಣೆಗಳು ಇತ್ಯಾದಿ ಮತ್ತು ಅಂತಿಮ ಮತದಾರ ಪಟ್ಟಿಯ ಪ್ರಕಟಣೆಯ ಸಮಯ ಪಟ್ಟಿಯೂ ಸೇರಿದೆ. ಇವುಗಳ ಬಗ್ಗೆ ವಿಚಾರಣೆಯ ಅಗತ್ಯವಿದೆ. ಆದ್ದರಿಂದ ಮುಂದಿನ ವಿಚಾರಣೆಯನ್ನು, ಕರಡು ಮತದಾರರ ಪಟ್ಟಿ ಪ್ರಕಟವಾಗುವ ಮೊದಲು, ಜುಲೈ 28ಕ್ಕೆ ನಿಗದಿಪಡಿಸಲಾಗಿದೆ, ಜುಲೈ 21 ರೊಳಗೆ ಚುನಾವಣಾ ಆಯೋಗ ಪ್ರತಿ-ಅಫಿಡವಿಟ್ ಸಲ್ಲಿಸತಕ್ಕದ್ದು ಎಂದು ಈ ➚

ನೆಹರೂ–ಮಹಾಲನೋಬಿಸ್ ಕಾರ್ಯತಂತ್ರವನ್ನು... ಪುಟ 13 ರಿಂದ

ಅವಧಿಯಲ್ಲಿ ದುಡಿಯುವ ಜನತೆಯ ಜೀವನ ಪರಿಸ್ಥಿತಿಗಳು ಸಂಪೂರ್ಣ ಹದಗೆಡುತ್ತಿರುವ ಬಗ್ಗೆ ಇನ್ನೂ ಹೆಚ್ಚು ಅರ್ಥಪೂರ್ಣವಾದ ಪುರಾವೆಗಳಿವೆ. ಈ ಅವಧಿಯಲ್ಲಿ ದೇಶದಲ್ಲಿ ಸಂಭವಿಸಿದ ರೈತರ ಆತ್ಮಹತ್ಯೆಗಳ ಬೃಹತ್ ಅಲೆಯ ಪುರಾವೆಯಂತೂ ಇದ್ದೇ ಇದೆ. ಆದರೂ, ಗ್ರಾಮೀಣ ಭಾರತದ ಜನತೆಯ ಸರಾಸರಿ ದೈನಿಕ ಕ್ಯಾಲೋರಿ ಸೇವನೆಯ ಒಂದು ನಿರ್ದಿಷ್ಟ ಸೂಚಕವನ್ನೇ ತೆಗೆದುಕೊಳ್ಳೋಣ. ಹಿಂದಿನ ಯೋಜನಾ ಆಯೋಗವು 1973–74ರಲ್ಲಿ ಮೊದಲ ಬಾರಿಗೆ ದೇಶದ ಬಡತನವನ್ನು ವ್ಯಾಖ್ಯಾನಿಸಲು ಕೈಗೊಂಡ ಗ್ರಾಹಕ ವೆಚ್ಚಗಳ ಕುರಿತ ರಾಷ್ಟ್ರೀಯ ಮಾದರಿ ಸಮೀಕ್ಷೆಯ ದತ್ತಾಂಶದ ಆಧಾರದ ಮೇಲೆ ಬಡತನವನ್ನು ಅಂದಾಜಿಸಲು ಗ್ರಾಮೀಣ ಭಾರತದ ಪ್ರತಿ ವ್ಯಕ್ತಿಯ ದೈನಿಕ 2200 ಕ್ಯಾಲೋರಿಗಳ ಸೇವನೆಯನ್ನು ಒಂದು ಮಾನದಂಡವಾಗಿ ತೆಗೆದುಕೊಂಡಿತ್ತು. ಆಗ ಕ್ಯಾಲೋರಿಗಳ ಸೇವನೆಯ ಈ ಮಾನದಂಡದ ಕೆಳಗಿದ್ದ ಗ್ರಾಮೀಣ ಜನಸಂಖ್ಯೆಯ ಪ್ರಮಾಣವು ಶೇಕಡಾ 56.4ರಷ್ಟಿತ್ತು. 1993–94ರಲ್ಲಿ ದೇಶದಲ್ಲಿ ನವ ಉದಾರೀಕರಣ ನೀತಿಗಳನ್ನು ಜಾರಿಗೊಳಿಸಿದ ಕೇವಲ ಎರಡು ವರ್ಷಗಳ ನಂತರ, ಈ ಪ್ರಮಾಣವು ಶೇ. 58.5ಕ್ಕೆ ಏರಿತ್ತು. 2011–12ರ ವೇಳೆಗೆ ಈ ಪ್ರಮಾಣವು ಗಣನೀಯವಾಗಿ ಶೇ. 67ಕ್ಕೆ ಏರಿತು ಮತ್ತು 2017–18ರ ವೇಳೆಗೆ ಶೇ. 80ರ ಮಟ್ಟವನ್ನು ತಲುಪಿತು ಎಂದು ಹೇಳಲಾಗಿದೆ. ಈ ಸನ್ನಿವೇಶದಲ್ಲಿ ಮೋದಿ ಸರ್ಕಾರವು ರಾಷ್ಟ್ರೀಯ ಮಾದರಿ ಸಮೀಕ್ಷೆಯು ಅಂಕಿ–ಅಂಶಗಳನ್ನು ಸಂಗ್ರಹಿಸುವ ವಿಧಾನವನ್ನೇ ಬದಲಾಯಿಸಿತು. ಹಾಗಾಗಿ, ಹಿಂದಿನ ಅಂಕಿ–ಅಂಶಗಳೊಂದಿಗಿನ ಹೋಲಿಕೆಯನ್ನು ಈಗ ಮಾಡಲಾಗದು.



ಸಾಮ್ರಾಜ್ಯಶಾಹಿ ಕಾರ್ಯತಂತ್ರಕ್ಕೆ ಪೀಠಿಕೆ

ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ನೆಹರೂವಾದಿ ಕಾರ್ಯತಂತ್ರದ ಅಡಿಯಲ್ಲಿ ಗ್ರಾಮೀಣ ಬಡತನದ ಅನುಪಾತದಲ್ಲಿ ಯಾವುದೇ ಹೆಚ್ಚಳ ಕಂಡುಬರುವುದಿಲ್ಲ. ಸ್ವಾತಂತ್ರ್ಯದ ಸಮಯದಲ್ಲಿದ್ದ ಕೆಟ್ಟ ಪರಿಸ್ಥಿತಿಗೆ ಹೋಲಿಸಿದರೆ, ಈ ಮಾನದಂಡದ ಪ್ರಕಾರ, ಬಡತನದಲ್ಲಿ ಸ್ವಲ್ಪ ಇಳಿಕೆ ಇದ್ದಿರಲೇಬೇಕು. ಆದರೆ ಅದನ್ನು ಸಮರ್ಥಿಸುವ ಯಾವುದೇ ಅಂಕಿಅಂಶಗಳು ನಮ್ಮಲ್ಲಿ ಲಭ್ಯವಿಲ್ಲ. ಆದರೂ, 1973–74 ಮತ್ತು 1993–94ರ ನಡುವೆ ಗ್ರಾಮೀಣ ಬಡತನದ ಅನುಪಾತವು ಸರಿಸುಮಾರು ಬದಲಾಗದೇ ಉಳಿದಿತ್ತು ಎಂಬುದು ನೆಹರೂವಾದಿ ಕಾರ್ಯತಂತ್ರದ ಬಗ್ಗೆ ಎಡಪಂಥವು ಮಾಡಿದ ವಿಮರ್ಶೆಯು ಅಂಗೀಕಾರಾರ್ಹವಾಗಿತ್ತು ಎಂಬುದನ್ನು ಒತ್ತಿಹೇಳುತ್ತದೆ. ಆದರೆ, ನವ ಉದಾರವಾದಿ ಆಳ್ವಿಕೆಯ ಅವಧಿಯು ಗ್ರಾಮೀಣ ಬಡತನದ ಅನುಪಾತದಲ್ಲಿ ಒಂದು ತೀವ್ರ ಏರಿಕೆಯನ್ನು ಕಂಡಿದೆ. ಭೂಸುಧಾರಣೆಗಳನ್ನು ಕೈಗೊಳ್ಳಲು ಅಸಮರ್ಥವಾಗಿದ್ದ ಕಾರಣದಿಂದಾಗಿ ಬಡತನವನ್ನು ನಿವಾರಿಸುವಲ್ಲಿ ನೆಹರೂವಾದಿ ಕಾರ್ಯತಂತ್ರವು ಅಸಮರ್ಪಕವಾಗಿದ್ದರೂ ಸಹ, ದುಡಿಯುವ ಜನತೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಅದು ನವ ಉದಾರವಾದಿ ಕಾರ್ಯತಂತ್ರಕ್ಕಿಂತ ಶ್ರೇಷ್ಠವಾಗಿತ್ತು.

ಈ ನವ ಉದಾರವಾದಿ ಕಾರ್ಯತಂತ್ರವು ದೇಶವನ್ನು ಮತ್ತೊಮ್ಮೆ ವಸಾಹತುಶಾಹಿ ಅವಧಿಯ ಆರ್ಥಿಕ ನೀತಿ–ವ್ಯವಸ್ಥೆಯ ನಿಟ್ಟಿನಲ್ಲಿ ಹಿಂದಕ್ಕೆ ತಳ್ಳುತ್ತದೆ. ಇದು ಸಹ ಸರಕು–ಸೇವೆಗಳು ಮತ್ತು ಹಣಕಾಸು ಸೇರಿದಂತೆ ಬಂಡವಾಳದ ಮುಕ್ತ ಹರಿವಿನಿನ (ವಾಸ್ತವವಾಗಿ ಹೆಚ್ಚಿನ ಬಂಡವಾಳವು ದೇಶಕ್ಕೆ ಹರಿಯದಿದ್ದರೂ) ಅವಧಿ. ಭೂ–ಇಳುವರಿಯನ್ನು ಹೆಚ್ಚಿಸುವ ಸಲುವಾಗಿ ಸಾರ್ವಜನಿಕ ಹೂಡಿಕೆ ಇಲ್ಲದಿರುವಾಗ ಮತ್ತು ಇಂತಹ ಹೂಡಿಕೆಯನ್ನು ನವ ಉದಾರವಾದವು ಉದ್ದೇಶಪೂರ್ವಕವಾಗಿ ತಡೆಯುವ ಸನ್ನಿವೇಶದಲ್ಲಿ, ಗಾತ್ರದಲ್ಲಿ ಸೀಮಿತವಾಗಿರುವ ಮತ್ತು ವೃದ್ಧಿಸಲಾಗದ ಭಾರತದ ಭೂಪ್ರದೇಶವನ್ನು ಸ್ಥಳೀಯ ಜನತೆಗೆ ನಷ್ಟವನ್ನು ಉಂಟುಮಾಡಿ, ಮುಂದುವರೆದ ಬಂಡವಾಳಶಾಹಿ ದೇಶಗಳ (ಮೆಟ್ರೊಪಾಲಿಟನ್) ಬೇಡಿಕೆಗಳಿಗಾಗಿ ತೆರೆದಿಡುತ್ತದೆ. ಇದೇ ನವ ಉದಾರವಾದಿ ಕಾರ್ಯತಂತ್ರ. ಆದ್ದರಿಂದ, ಸ್ಥಳೀಯ ಜನತೆಗೆ ಪೌಷ್ಟಿಕಾಂಶದ ವಂಚನೆಯು ನವ ಉದಾರವಾದಿ ಕಾರ್ಯತಂತ್ರದ ಒಂದು ಅನಿವಾರ್ಯ ಫಲಿತಾಂಶವಾಗಿದೆ. ಈ ಕಾರ್ಯತಂತ್ರವು ವಿಶ್ವ ಬ್ಯಾಂಕ್, ಐಎಂಎಫ್ ಮತ್ತು ಮುಂದುವರಿದ ದೇಶಗಳ ಸರ್ಕಾರಗಳ ಬೆಂಬಲವನ್ನು ಹೊಂದಿರುವ ಸಾಮ್ರಾಜ್ಯಶಾಹಿ ಕಾರ್ಯತಂತ್ರವನ್ನು ಪ್ರತಿನಿಧಿಸುತ್ತದೆ.

ಇನ್ನು ಮುಂದೆ ಆಹಾರ ಧಾನ್ಯಗಳ ಖರೀದಿ ಮತ್ತು ಸಾರ್ವಜನಿಕ ವಿತರಣೆಗಾಗಿ ಸರ್ಕಾರದ ಮಧ್ಯಪ್ರವೇಶವು ಅಗತ್ಯವಿಲ್ಲ ಎಂದು ಬಿಂಬಿಸುವಂತೆ ಮಾಡುವ ಸಲುವಾಗಿ ಮುಂಬರುವ ದಿನಗಳಲ್ಲಿ ದೇಶದಲ್ಲಿ ಬಡತನ ಕಣ್ಮರೆಯಾಗುತ್ತಿದೆ ಎಂಬ ಮಾತುಗಳು ಹೆಚ್ಚೆಚ್ಚಾಗಿ ಕೇಳಿಬರಲಿವೆ. ಆದ್ದರಿಂದ ಭಾರತದ ಭೂಪ್ರದೇಶವನ್ನು ಮುಂದುವರೆದ ಬಂಡವಾಳಶಾಹಿ ದೇಶಗಳ ಬೇಡಿಕೆಗಳಿಗಾಗಿ ಮುಕ್ತಗೊಳಿಸುವ ಸಲುವಾಗಿ ಭೂಮಿಯ ಮೇಲಿನ ಅಳಿದುಳಿದ ನಿರ್ಬಂಧಗಳನ್ನು ಕೈಬಿಡಬೇಕು ಎಂದು ಹೇಳಲಾಗುತ್ತದೆ. ನೆಹರೂವಾದಿ ಕಾರ್ಯತಂತ್ರದ ಮೇಲಿನ ಪ್ರಸ್ತುತ ದಾಳಿಯು ಇದಕ್ಕೆ ಒಂದು ಪೀಠಿಕೆಯಾಗಿದೆ.

ಆದೇಶದಲ್ಲಿ ಹೇಳಲಾಗಿದೆ.

ಅಲ್ಲದೆ, ಈ ವಿಷಯಗಳು ಕರಡು ಮತದಾರ ಪಟ್ಟಿ ಪ್ರಕಟಣೆಗೆ ನಿಗದಿ ಮಾಡಿರುವ ಆಗಸ್ಟ್ 1 ರೊಳಗೆ ಸೂಕ್ತ ನ್ಯಾಯಪೀಠದ ಮುಂದೆ ವಿಚಾರಣೆಗೆ ಬರಲಿರುವುದರಿಂದ , ಮಧ್ಯಂತರ ತಡೆಯಾಜ್ಞೆಯನ್ನು ನೀಡಬೇಕಾದ ಸಂದರ್ಭವಿಲ್ಲ,ಅಲ್ಲದೆ ಅರ್ಜಿದಾರರು ಈ ಹಂತದಲ್ಲಿ ಅದನ್ನು ಒತ್ತಾಯ ಮಾಡುತ್ತಿಲ್ಲ ಕೂಡ. ಚುನಾವಣಾ ಆಯೋಗದ ಉತ್ತರವನ್ನು ಅವಲಂಬಿಸಿ ಅರ್ಜಿದಾರರು ಮುಂದಿನ ವಿಚಾರಣೆಯ ಸಂದರ್ಭದಲ್ಲಿ ತಡೆಯಾಜ್ಞೆಗೆ ಒತ್ತಾಯಿಸಬಹುದು ಎಂದು ನ್ಯಾಯ ಪೀಠದ ಆದೇಶ ತಿಳಿಸಿದೆ.

ಆದರೂ, ಜುಲೈ 26 ರ ಗಣತಿ ಫಾರ್ಮ್‌ಗಳನ್ನು ಸಲ್ಲಿಸುವ ಗಡುವು ಸಮೀಪಿಸುತ್ತಿರುವಾಗ, ಪರಿಷ್ಕರಣೆಯನ್ನು ನಿಲ್ಲಿಸಲು ನ್ಯಾಯಾಲಯ ನಿರಾಕರಿಸಿರುವುದು ಅನೇಕರನ್ನು ಆತಂಕಕ್ಕೆ ದೂಡಿದೆ.

ಅಲ್ಲದೆ, ಬುಡಮಟ್ಟದಲ್ಲಿ ಈ ಪರಿಷ್ಕರಣೆಗೆ ಸಂಬಂಧಪಟ್ಟಂತೆ ಇನ್ನಷ್ಟು ಸಮಸ್ಯೆಗಳು ಹುಟ್ಟಿಕೊಂಡಿವೆ. ಜುಲೈ 10 ರವರೆಗೆ, ಒಟ್ಟು 5,22,44,956 ಗಣತಿ ಫಾರ್ಮ್ಗಳನ್ನು ಸಂಗ್ರಹಿಸಲಾಗಿದೆ, ಇದು ಬಿಹಾರದಲ್ಲಿ ಒಟ್ಟು 7,89,69,844 (ಸುಮಾರು 7.90 ಕೋಟಿ) ಮತದಾರರಲ್ಲಿ 66.16% ಆಗಿದೆ ಎಂದು ಹೇಳಲಾಗಿದೆ. ಈ ನಡುವೆ ಆಯೋಗದ ಪ್ರಕಟಣೆಗಳು ಗೊಂದಲವನ್ನು ಹೆಚ್ಚಿಸಿವೆ ಎಂದು ಹೇಳಲಾಗಿದೆ. ಮತದಾರರು ಅಗತ್ಯ ದಾಖಲೆಗಳಿಲ್ಲದೆಯೂ ಫಾರ್ಮ್‌ಗಳನ್ನು ಸಲ್ಲಿಸಬಹುದಾಗಿದೆ ಎಂದು ಪಾಟ್ನಾ ಪತ್ರಿಕೆಗಳಲ್ಲಿ ಆಯೋಗದ ಮುಖಪುಟದ ಜಾಹೀರಾತುಗಳು ಪ್ರಕಟವಾಗಿವೆ. ಆದರೆ, ಅತ್ತ ಚುನಾವಣಾ ನೋಂದಣಿ ಅಧಿಕಾರಿಗಳು (ಇಆರ್‌ಒಗಳು) ಸ್ಥಳೀಯ ತನಿಖೆ ಅಥವಾ ಇತರ ಪುರಾವೆಗಳ ಮೂಲಕ ಅರ್ಹತೆಯನ್ನು ಪರಿಶೀಲಿಸಲಾಗುವುದು ಎಂದು ಹೇಳುತ್ತಿದ್ದಾರಂತೆ. ಅಗತ್ಯ ದಾಖಲೆಗಳಿಲ್ಲದ ಫಾರ್ಮ್‌ಗಳನ್ನು ಏನೆಂದು ಪರಿಗಣಿಸಲಾಗುತ್ತದೆ ಎಂಬ ಬಗ್ಗೆ ಸ್ಪಷ್ಟತೆ ಇದ್ದಂತೆ ಕಾಣುತ್ತಿಲ್ಲ.

"ದಾಖಲೆಗಳಿಲ್ಲದೆ ನಾವು ಫಾರ್ಮ್‌ಗಳನ್ನು ಸಲ್ಲಿಸಬಹುದು ಎಂದು ಜಾಹೀರಾತಿನಲ್ಲಿ ಹೇಳಲಾಗಿತ್ತು, ಆದರೆ ಬಿಎಲ್‌ಒ ನನಗೆ ಜನ್ಮ ಪ್ರಮಾಣಪತ್ರ ಬೇಕು, ಇಲ್ಲವಾದರೆ ಗಣನೆ ಮಾಡಲಾಗುವುದಿಲ್ಲ ಎಂದು ಹೇಳಿದರು" ಎಂದು ಹಲವು ಮತದಾರರು ದೂರುತ್ತಿದ್ದಾರಂತೆ. ಆಯೋಗದ ಸಾರ್ವಜನಿಕ ಹೇಳಿಕೆಗಳು ಮತ್ತು ಬ್ಲಾಕ್ ಮಟ್ಟದ ಅಧಿಕಾರಿ(ಬಿಎಲ್‌ಒ)ಗಳಿಗೆ ನೀಡಿದ ಸೂಚನೆಗಳ ನಡುವಿನ ವ್ಯತ್ಯಾಸಗಳಿರುವುದು ವರದಿಯಾಗಿದೆ.

ಅಲ್ಲದೆ ಹಲವೆಡೆಗಳಲ್ಲಿ ಕಳಪೆ ಇಂಟರ್ನೆಟ್ ಸಂಪರ್ಕ ಸವಾಲುಗಳನ್ನು ಇನ್ನಷ್ಟು ಹೆಚ್ಚಿಸಿದೆ.

‘ವೋಟ್‌ಬಂದಿ’ ರಾಜಕೀಯ?

ಒಟ್ಟಾರೆಯಾಗಿ, ಚುನಾವಣಾ ಆಯೋಗದ ಈ ಕ್ರಮದ ಉದ್ದೇಶವೇ ನಿರ್ದಿಷ್ಟ ಜನವಿಭಾಗಗಳ ಮತದಾನದ ಹಕ್ಕನ್ನು ಕಸಿದುಕೊಳ್ಳುವುದು ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ ಎಂದು ಹಲವು ರಾಜಕೀಯ ವಿಶ್ಲೇಷಕರು ಹೇಳುತ್ತಿದ್ದಾರೆ. ಬಿಹಾರದ ನಂತರ ಇದನ್ನು ಪಶ್ಚಿಮ ಬಂಗಾಲದಲ್ಲಿ, ನಂತರ ಇಡೀ ದೇಶದಲ್ಲಿ ಪ್ರಯೋಗಿಸಲಾಗುತ್ತದೆ–ಇದು ದೇಶದಲ್ಲಿ ಪ್ರಜಾಪ್ರಭುತ್ವವನ್ನು ಸೀಮಿತಗೊಳಿಸುವ ಮುಂದಿನ ಹೆಜ್ಜೆಯಾಗಲಿದೆ ಮತ್ತು ಎನ್.ಆರ್.ಸಿ.ಯನ್ನು ಹಿಂಬಾಗಿಲಿನಿಂದ ತರುವ ಪ್ರಯತ್ನವಾಗಿದೆ ಎಂದು ಅವರು ಆತಂಕ ವ್ಯಕ್ತಪಡಿಸುತ್ತಿದ್ದಾರೆ

ಬಿಹಾರದಲ್ಲಂತೂ ಜನಸಾಮಾನ್ಯರು ಇದು ತಮ್ಮ ಬದುಕನ್ನೇ ಅಲ್ಲಾಡಿಸಿದ ‘ನೋಟ್‌ಬಂದಿ’(ನೋಟುರದ್ಧತಿ) ತರಹ ‘ವೋಟ್‌ಬಂದಿ’ ಕಾರ್ಯಾಚರಣೆ ಎಂದು ಹೇಳಲಾರಂಭಿಸಿದ್ದಾರೆ ಎಂದು ವರದಿಯಾಗಿದೆ. ಜುಲೈ 9 ರಂದು, ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ದಿನ,ಅದರೊಂದಿಗೇ ದೊಡ್ಡ ಪ್ರಮಾಣದಲ್ಲಿ ‘ವೋಟ್‌ಬಂದಿ’ ವಿರುದ್ಧ ಪ್ರತಿಭಟನೆ ಕಂಡಿರುವುದು ಇದಕ್ಕೆ ಸಾಕ್ಷಿ. ‘ಇಂಡಿಯ’ ಬಣದ ರಾಜಕೀಯ ಪಕ್ಷಗಳು ಕರೆ ನೀಡಿದ ಪ್ರತಿಭಟನೆಗೆ ಪಾಟ್ನಾದಲ್ಲಿ ಬೃಹತ್ ಸ್ಪಂದನೆ ವ್ಯಕ್ತಗೊಂಡಿತು.

ತುರ್ತು ಪರಿಸ್ಥಿತಿಯ ಮೊದಲಿನ 1974 ರ ಚಳುವಳಿಯ ಉತ್ಸಾಹ ಪಾಟ್ನಾದಲ್ಲಿ ಮರುಕಳಿಸಿದಂತಿತ್ತು ಎಂದು ವರದಿಯಾಗಿದೆ. ‘ಇಂಡಿಯ’ ಬಣದ ರಾಜ್ಯ ಘಟಕದಂತಿರುವ ‘ಮಹಾಗತ್‌ಬಂಧನ್’ ಪಕ್ಷಗಳ ರಾಷ್ಟ್ರೀಯ ನಾಯಕರ ನೇತೃತ್ವದಲ್ಲಿ ಬಿಹಾರ ವಿಧಾನಸಭೆಯ ಬಳಿಯ ಚುನಾವಣಾ ಆಯೋಗದ ಕಚೇರಿಗೆ ಬೃಹತ್ ಮೆರವಣಿಗೆ ಹೊರಟಿತು. ತೆರೆದ ಜೀಪಿನಲ್ಲಿ, ಸಂಸತ್ತಿನಲ್ಲಿ ಕಾಂಗ್ರೆಸ್ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಎಂ ಎ ಬೇಬಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ ರಾಜಾ, ಸಿಪಿಐ (ಎಂಎಲ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಮತ್ತು ವಿಐಪಿ ನಾಯಕ ಮುಖೇಶ್ ಸಹಾನಿ ನೇತೃತ್ವದಲ್ಲಿ ಚುನಾವಣಾ ಆಯೋಗದ ಕಚೇರಿಗೆ ಮೆರವಣಿಗೆ ನಡೆಯಿತು. 1942 ರ ಕ್ವಿಟ್ ಇಂಡಿಯಾ ಚಳುವಳಿಯ ಸಮಯದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಶಕ್ತಿಗೆ ಧೈರ್ಯದಿಂದ ಸವಾಲುಹಾಕಿದ್ದ ಪಾಟ್ನಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸ್ಮರಣೆಯಲ್ಲಿ ನಿರ್ಮಿಸಲ್ಪಟ್ಟಿರುವ ಪ್ರಸಿದ್ಧ ಏಳು ಹುತಾತ್ಮರ ಪ್ರತಿಮೆಯ ಬಳಿ ಬಿಹಾರ ವಿಧಾನಸಭಾ ಪ್ರದೇಶಕ್ಕೆ ಪೊಲೀಸ್ ಬ್ಯಾರಿಕೇಡ್ ಹಾಕಲಾಗಿತ್ತು. ಈ ಐತಿಹಾಸಿಕ ಹಿನ್ನೆಲೆಯಲ್ಲಿ, ಮಹಾಗಠಬಂಧನ್ ನಾಯಕರು ನೆರೆದಿದ್ದ ಜನಸಮೂಹವನ್ನು ಉದ್ದೇಶಿಸಿ, ಪ್ರಜಾಪ್ರಭುತ್ವವನ್ನು ಉಳಿಸಲು ಮತ್ತು ಸಂವಿಧಾನದಲ್ಲಿ ಪ್ರತಿಪಾದಿಸಲಾದ ಭಾರತದ ಕಲ್ಪನೆಯನ್ನು ಎತ್ತಿಹಿಡಿಯಲು ಕರೆ ನೀಡಿದರು.

ಇತ್ತೀಚಿನ ಮಹಾರಾಷ್ಟ್ರ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಚುನಾವಣಾ ಫಲಿತಾಂಶಗಳಲ್ಲಿ ಕೈಚಳಕ ನಡೆಸಿ ಅದನ್ನು ತಮ್ಮ ಪರವಾಗಿ ತಿರುಗಿಸಿಕೊಂಡರು ಎಂಬುದನ್ನು ನೆನಪಿಸುತ್ತ, ಮತದಾರರನ್ನು, ವಿಶೇಷವಾಗಿ ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು, ವಲಸೆ ಕಾರ್ಮಿಕರು ಮತ್ತು ಇತರ ಅಂಚಿನಲ್ಲಿರುವ ವರ್ಗಗಳ ಮತದಾನದ ಹಕ್ಕನ್ನು ವಂಚಿಸಿ ಅಕ್ರಮವಾಗಿ ಅಧಿಕಾರವನ್ನು ವಶಪಡಿಸಿಕೊಳ್ಳುವ ಹುನ್ನಾರದಿಂದ ಬಿಹಾರದಲ್ಲಿ ಇದೇ ರೀತಿಯ ತಂತ್ರಗಳನ್ನು ಅತ್ಯಂತ ಒರಟು ರೀತಿಯಲ್ಲಿ ಪ್ರಯೋಗಿಸುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಅವರು ಎಚ್ಚರಿಸಿದರು.

ಬಿಜೆಪಿ–ಜೆಡಿ(ಯು) ಮೈತ್ರಿಕೂಟವು ವ್ಯಾಪಕ ಸಾರ್ವಜನಿಕ ಅಸಮಾಧಾನವನ್ನು ಎದುರಿಸುತ್ತಿದೆ ಮತ್ತು ಮುಂಬರುವ ಚುನಾವಣೆಗಳಲ್ಲಿ ಘೋರ ಸೋಲನ್ನು ಎದುರಿಸಬೇಕಾಗಿದೆ ಎಂಬ ಬುಡಮಟ್ಟದಿಂದ ಬರುತ್ತಿರುವ ವರದಿಗಳಿಗೆ ಪ್ರತಿಕ್ರಿಯೆಯಾಗಿ, ಅವರು ಈಗ ಚುನಾವಣಾ ಆಯೋಗದ ಸಾಂವಿಧಾನಿಕ ಸ್ವಾಯತ್ತತೆಯನ್ನು ನಾಶಮಾಡಲು ಮತ್ತು ಅದು ಆಳುವ ಪಕ್ಷದ ನಿರ್ದೇಶನಗಳ ಅಡಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದೂ ‘ಇಂಡಿಯ’ ಬಣದ ಮುಖಂಡರು ಜನರನ್ನು ಎಚ್ಚರಿಸಿದರು.

ಈಗ ಜುಲೈ 26 ರ ಗಡುವು ಸಮೀಪಿಸುತ್ತಿದ್ದಂತೆ, ಬಿಹಾರದ ನಿವಾಸಿಗಳ ಆತಂಕ ಹೆಚ್ಚುತ್ತಿದೆ. ಸಾಕ್ಷರತಾ ಪ್ರಮಾಣ ಕಡಿಮೆ ಇರುವ ಮತ್ತು ದಾಖಲೆಗಳ ಲಭ್ಯತೆ ಸೀಮಿತವಾಗಿರುವ ಗ್ರಾಮೀಣ ಪ್ರದೇಶಗಳಲ್ಲಿ, ಈ ಎಸ್‌ಐಆರ್ (ವಿಶೇಷ ತೀವ್ರ ಪರಿಷ್ಕರಣೆ) ಭಯದ ವಾತಾವರಣವನ್ನು ಸೃಷ್ಟಿಸಿದೆ. ಜನರು ತಮ್ಮ ಮತವನ್ನು ಮಾತ್ರವಲ್ಲದೆ ತಮ್ಮ ಪಡಿತರ ಮತ್ತು ಪಿಂಚಣಿಗಳನ್ನು ಸಹ ಕಳೆದುಕೊಳ್ಳುವ ಬಗ್ಗೆ ಚಿಂತಿತರಾಗಿದ್ದಾರೆ ಎಂದು ವರದಿಯಾಗಿದೆ (ನ್ಯೂಸ್ ಕ್ಲಿಕ್, ಜುಲೈ11).

ಚುನಾವಣಾ ಆಯೋಗ ಸುಪ್ರಿಂ ಕೋರ್ಟಿನ ಪೀಠ ಸೂಚಿಸಿದಂತೆ ಆಧಾರ್, ಮತದಾರ ಚೀಟಿ ಮತ್ತು ರೇಷನ್ ಕಾರ್ಡನ್ನು ಗುರುತಿನ ದಾಖಲೆಗಳಾಗಿ ಸ್ವೀಕರಿಸಲು ಸಿದ್ಧವಾಗುತ್ತದೆಯೇ, ಇಲ್ಲವಾದರೆ ಸುಪ್ರಿಂ ಕೋರ್ಟ್ ಏನು ಹೇಳಲಿದೆ–ಕಾದು ನೋಡಬೇಕಾಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE July 14-20, 2025 Price: Rs. 10/- Date of Publication: 11 July 2025 RNI No. KARKAN/2006/17926 Posted on 15-07-2025
Posted at BG PSO, BG - 560026 **Posted at Periodical Rate -** Rs. 2



ಚಿಲಿ ಪ್ರಗತಿಪರ ಕೂಟದ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಕಮ್ಯುನಿಸ್ಟ್ ಜಾರಾ

ಎನ್.ಕೆ.ವಸಂತರಾಜ್

'ಚಿಲಿಗಾಗಿ ಐಕ್ಯತೆ' (ಯುನಿಟಿ ಫಾರ್ ಚಿಲಿ)ಯ ಅಧ್ಯಕ್ಷೀಯ ಅಭ್ಯರ್ಥಿಯ ಆಯ್ಕೆಗೆ ನಡೆದ ಪ್ರಾಥಮಿಕ ಚುನಾವಣೆಗಳಲ್ಲಿ ಭಾರೀ ಜಯ ಗಳಿಸಿದ್ದಾರೆ. ಅವರು ನಾಲ್ಕು ಸ್ಪರ್ಧಿಗಳಿದ್ದ ಚುನಾವಣೆಯಲ್ಲಿ ಶೇ. 60ರಷ್ಟು ಮತ ಗಳಿಸಿದ್ದಾರೆ. ಚುನಾವಣಾ ಪೂರ್ವ ವಿಶ್ಲೇಷಣೆಗಳ ಪ್ರಕಾರ ಮೊದಲ ಸ್ಥಾನದಲ್ಲಿದ್ದ ಅವರ ಸಮೀಪದ ಪ್ರತಿಸ್ಪರ್ಧಿ ಸೋಶಲಿಸ್ಟ್ (ಡೆಮೊಕ್ರಾಟಿಕ್ ಸೋಶಲಿಸಂ) ಪಕ್ಷದ ಕೆರೊಲಿನಾ ತೊಹಾ ಶೇ.27.7 ಮತ ಗಳಿಸಿದರು.

ಎಡ–ನಡುಪಂಥೀಯ ಎಂದು ಪರಿಗಣಿಸಲಾದ ಸೋಶಲಿಸ್ಟ್ ಪಕ್ಷ ಚಿಲಿಯ ದೊಡ್ಡ ಪಕ್ಷವಾಗಿದ್ದು, ಸರ್ವಾಧಿಕಾರಿ ಪಿನೊಶೆ ಆಡಳಿತದ ಕೊನೆಯ ನಂತರ ಎರಡು ದಶಕಗಳ ಕಾಲ ಸರಕಾರ ನಡೆಸಿತ್ತು. 'ಚಿಲಿಗಾಗಿ ಐಕ್ಯತೆ' 2022ರಲ್ಲಿ ರಚಿತವಾದ ಹೆಚ್ಚು ಕಡಿಮೆ ಎಲ್ಲ ಎಡ, ಪ್ರಗತಿಪರ, ಪ್ರಜಾಸತ್ತಾತ್ಮಕ ಪಕ್ಷಗಳ ಕೂಟ. ಇದರಲ್ಲಿ ಎಡಪಂಥೀಯವಾದ ಎಲ್ಲ ಎಡಪಕ್ಷಗಳೂ ಇದ್ದು ಹಲವು ನಡುಪಂಥೀಯ ಪ್ರಗತಿಪರ ಪಕ್ಷಗಳೂ ಇವೆ. 1973ರಲ್ಲಿ ಚುನಾಯಿತ ಸೋಶಲಿಸ್ಟ್ ಅಧ್ಯಕ್ಷ ಅಲೆಂದೆ ಅವರ ಕೊಲೆ ಮಾಡಿ ಕುಖ್ಯಾತ ರಕ್ತಸಿಕ್ತ ಮಿಲಿಟರಿ ಕ್ಷಿಪ್ರಕ್ರಾಂತಿ ಮೂಲಕ ಅಧಿಕಾರಕ್ಕೆ ಬಂದ ಸರ್ವಾಧಿಕಾರಿ ಪಿನೊಶೆ ಜತೆ ಸಹಕರಿಸಿದ್ದ, ಸಂಬಂಧ ಹೊಂದಿದ್ದ ಉಗ್ರ ಬಲಪಂಥೀಯ ಶಕ್ತಿಗಳನ್ನು ಸೋಲಿಸಲು ಈ ಕೂಟವನ್ನು ರಚಿಸಲಾಗಿತ್ತು.

ವಿಜಯದ ಘೋಷಣೆ ನಂತರ ನಡೆದ ರ್ಯಾಲಿಯಲ್ಲಿ "ಉಗ್ರಬಲಪಂಥದಿಂದ ಬಂದಿರುವ ಬೆದರಿಕೆಯನ್ನು ನಾವು ಐಕ್ಯತೆ, ಸಂವಾದ ಮತ್ತು ಆಶಾಭಾವನೆಯಿಂದ ಎದುರಾಗಬೇಕಿದೆ. ಎಲ್ಲರೂ ಕೈಜೋಡಿಸಿ ಯಾವುದೇ ಒಡಕಿಲ್ಲದೆ ಚಿಲಿಯ ಉಗ್ರಬಲಪಂಥದ ವಿರುದ್ಧ ಅತ್ಯಂತ ವಿಶಾಲ ರಂಗ ರಚಿಸಿ ಸೋಲಿಸಬೇಕಾಗಿದೆ" ಎಂದು ಜಾರಾ "ಚಿಲಿಗಾಗಿ ಐಕ್ಯತೆ" ರಂಗದ ಪಕ್ಷಗಳ ನಾಯಕರು, ಕಾರ್ಯಕರ್ತರು, ಬೆಂಬಲಿಗರಿಗೆ ಕರೆ ಕೊಟ್ಟರು. ಇದೇ ರಂಗದ ಅಭ್ಯರ್ಥಿಯಾಗಿದ್ದ ಅಧ್ಯಕ್ಷ ಬೊರಿಕ್, ಜಾರಾ ಅವರನ್ನು ಅಭಿನಂದಿಸುತ್ತಾ "ಜಾರಾ ಅವರು ಪ್ರಗತಿಪರ ಶಕ್ತಿಗಳನ್ನು ಉತ್ತಮ ಭವಿಷ್ಯದತ್ತ ಮುನ್ನಡೆಸುವ ಕೆಲಸಕ್ಕೆ ತಕ್ಷಣ ಸನ್ನದ್ಧರಾಗುತ್ತಾರೆ. ಮುಂಬರುವ ಸ್ಪರ್ಧೆ ಸುಲಭಸಾಧ್ಯವಾದ್ದಲ್ಲ. ಆದರೆ ಜಾರಾ ಅವರಿಗೆ ಸವಾಲಿನ ಸಮರಗಳ ಅನುಭವವಿದೆ. ನ್ಯಾಯಯುತ, ಸುಭದ್ರ ಮತ್ತು ಸಂತೋಷಭರಿತ ನಾಡನ್ನು ಕಟ್ಟಲು, ನಮ್ಮ ದೇಶದ ಬಹುಸಂಖ್ಯಾತರನ್ನು ಅಣಿನೆರೆಸಲು ಒಟ್ಟಿಗೆ ಐಕ್ಯತೆಯಿಂದ ಕೆಲಸ ಮಾಡೋಣ" ಎಂದು ಹಾರೈಸಿದ್ದಾರೆ.

ಕಳೆದ ಬಾರಿ ಪ್ರಾಥಮಿಕ ಚನಾವಣೆಯಲ್ಲಿ ಗೆದ್ದಿದ್ದ ಹೊಸ ಎಡಪಂಥೀಯ ಪಕ್ಷಗಳ ಕೂಟ 'ವಿಶಾಲ ರಂಗ'ದ ಅಭ್ಯರ್ಥಿ ಗೊನ್ಸಾಲೊ ವಿಂಟರ್ ಶೇ. 9ರಷ್ಟು ಮತ ಪಡೆದು ಮೂರನೇ ಸ್ಥಾನ ಪಡೆದಿದ್ದಾರೆ. ಕಳೆದ ಬಾರಿ ಈ ಕೂಟದ ಅಭ್ಯರ್ಥಿ ಗೇಬ್ರಿಯಲ್ ಬೊರಿಕ್ ಪ್ರಾಥಮಿಕದಲ್ಲಿ ಮತ್ತು ಎರಡನೇ ಸುತ್ತಿನಲ್ಲಿ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಿಲಿಯ ಸಂವಿಧಾನದ ಪ್ರಕಾರ ಅನುಕ್ರಮ ಅವಧಿಗಳಲ್ಲಿ ಒಬ್ಬರೇ ಅಧ್ಯಕ್ಷರಾಗುವಂತಿಲ್ಲ. ಹಾಗಾಗಿ ಬೊರಿಕ್ ಸ್ಪರ್ಧಿಸುವಂತಿಲ್ಲ. ಸಾಮಾಜಿಕ ಹಸಿರು ಪಕ್ಷದ ಶೇ. 2.7 ಮತ ಪಡೆದ ಅಭ್ಯರ್ಥಿ ಜೈಮೆ ಮುಲೆಟ್ ನಾಲ್ಕನೇ ಸ್ಥಾನದಲ್ಲಿದ್ದರು.

ಚಿಲಿಯ ಕಮ್ಯುನಿಸ್ಟ್ ಪಕ್ಷ ಒಟ್ಟು ಎಲ್ಲ ಎಡ ಪ್ರಗತಿಪರ ಪ್ರಜಾಸತ್ತಾತ್ಮಕ ಶಕ್ತಿಗಳ ಕೂಟದ ಪರವಾಗಿ ಮೊದಲ ಬಾರಿಗೆ ಅಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. ಇದು ಕಮ್ಯುನಿಸ್ಟ್ ಪಕ್ಷದ ನೂರಕ್ಕೂ ಹೆಚ್ಚು ದೀರ್ಘಕಾಲದ ಇತಿಹಾಸದಲ್ಲೇ ಅಪೂರ್ವ ಕ್ಷಣ. ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಜೆನೆಟ್ ಜಾರಾ ಪ್ರಸ್ತುತ ಚಿಲಿಯ ಗೇಬ್ರಿಯಲ್ ಬೊರಿಕ್ ಸಚಿವ ಸಂಘಟದಲ್ಲಿ ಕಾರ್ಮಿಕ ಮಂತ್ರಿಯಾಗಿ ಕಳೆದ 3 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಕನಿಷ್ಠ ವೇತನವನ್ನು ಗಮನಾರ್ಹವಾಗಿ ಹೆಚ್ಚಿಸಿ, ಗರಿಷ್ಠ ವಾರದ ಕೆಲಸದ ಗಂಟೆಗಳನ್ನು 45ರಿಂದ 40ಕ್ಕೆ ಇಳಿಸಿ, ಪೆನ್ಷನ್ ವ್ಯವಸ್ಥೆ ಉತ್ತಮಗೊಳಿಸಲು ಕಾನೂನು ಮತ್ತಿತರ ಕ್ರಮಗಳನ್ನು ಜಾರಿಗೊಳಿಸಿ ಜನಪ್ರಿಯರಾಗಿದ್ದರು. ಕೆಳಮಧ್ಯಮ ವರ್ಗದ ಕಾರ್ಮಿಕ ಕುಟುಂಬದಿಂದ ಬಂದಿರುವ ಜಾರಾ ಹಲವು ಕೆಲಸಗಳನ್ನು ಮಾಡಿದ ನಂತರ ವಿವಿ ಶಿಕ್ಷಣ ಪಡೆದರು. ಅವರು ಸೋಶಲಿಸ್ಟ್ ಅಧ್ಯಕ್ಷ ಮಿಶೆಲ್ ಬಶೆಲೆಟ್ ಅವರ ತಂಡದಲ್ಲಿ ಸಾಮಾಜಿಕ ಭದ್ರತೆಯ ಅಂಡರ್ ಸೆಕ್ರೆಟರಿಯಾಗಿದ್ದು ಆಡಳಿತದ ಅನುಭವ ಹೊಂದಿದ್ದಾರೆ. ಜಾರಾ 14 ವರ್ಷ ಹದಿಹರೆಯದಲ್ಲೇ ಯುವ ಕಮ್ಯುನಿಸ್ಟ್ ಲೀಗ್ ಸೇರಿದ್ದು, ವಿವಿ ವಿದ್ಯಾರ್ಥಿ ಚಳುವಳಿಯಲ್ಲೂ ಭಾಗವಹಿಸಿದ್ದರು. ಆ ನಂತರ ಟ್ರೇಡ್ ಯುನಿಯನ್, ಸರಕಾರ, ಶೈಕ್ಷಣಿಕ ಸಂಸ್ಥೆಗಳಲ್ಲಿ ಕೆಲಸ ಮಾಡಿದ ಜಾರಾ ಸಾರ್ವಜನಿಕ ಸಮಸ್ಯೆಗಳ ಅಪಾರ ಜ್ಞಾನ ಮತ್ತು ಪ್ರಾಯೋಗಿಕ ಅನುಭವ ಹೊಂದಿದ್ದಾರೆ.

ಮೂರನೇ ಬಾರಿಗೆ ಸ್ಪರ್ಧಿಸಿರುವ, ಹಿಂದಿನ ಚುನಾವಣೆಯಲ್ಲಿ ಮೊದಲ ಸುತ್ತಿನಲ್ಲಿ ಗೆದ್ದಿದ್ದ ಮತ್ತು ಎರಡನೇ ಸುತ್ತಿನಲ್ಲಿ ಶೇ. 46ರಷ್ಟು ಮತ ಗಳಿಸಿದ್ದ ಜೋಸ್ ಅಂಟೋನಿಯೊ ಕಾಸ್ಟ್ ಜಾರಾ ಅವರ ಪ್ರಮುಖ ಸ್ಪರ್ಧಿಯಾಗಿರುತ್ತಾರೆ. ಜರ್ಮನಿಯಿಂದ ವಲಸೆ ಬಂದ ಕಾಸ್ಟ್ ಅವರ ತಂದೆ ನಾಜಿ ಪಕ್ಷದ ಸದಸ್ಯರಾಗಿದ್ದರಂತೆ. ಕಾಸ್ಟ ಸ್ವತಃ ಪಿನೋಶೇ ಸರ್ವಾಧಿಕಾರಿ ಮತ್ತು ಉಗ್ರ ಬಲಪಂಥೀಯ ನೀತಿಗಳ ಕಟು ಬೆಂಬಲಿಗರಾಗಿದ್ದಾರೆ. ಉಳಿದ ಇಬ್ಬರು ನಿರೀಕ್ಷಿತ ಸ್ಪರ್ಧಿಗಳು ಸಹ ಜರ್ಮನ್ ಫ್ಯಾಸಿಸ್ಟ್ ಆಡಳಿತದೊಂದಿಗೆ ಸಂಬಂದವಿರುವ ಮತ್ತು ಪಿನೋಶೆ ಸರ್ವಾಧಿಕಾರಿ ಆಡಳಿತದ ಬೆಂಬಲಿಗರಾಗಿದ್ದವರು.

ಭಾರತೀಯರ ಮೇಲಿನ ಸಾಲದ ಹೊರೆ ಮತ್ತಷ್ಟು ಭಾರ

ಭಾರತೀಯ ರಿಸರ್ವ್ ಬ್ಯಾಂಕ್ (RBI) ಬಿಡುಗಡೆ ಮಾಡಿದ ಹಣಕಾಸು ಸ್ಥಿರತೆ ವರದಿಯ ಪ್ರಕಾರ, ಭಾರತದಲ್ಲಿ ವೈಯಕ್ತಿಕ ಸಾಲಗಾರರ ತಲಾ ಸಾಲವು ಕಳೆದ ಎರಡು ವರ್ಷಗಳಲ್ಲಿ ತೀವ್ರ ಏರಿಕೆ ಕಂಡಿದ್ದು, ಮಾರ್ಚ್ 2023ರಲ್ಲಿ ರೂ.3.9 ಲಕ್ಷದಿಂದ ಮಾರ್ಚ್ 2025ರಲ್ಲಿ ರೂ.4.8 ಲಕ್ಷಕ್ಕೆ ಏರಿದೆ. ಉದ್ಯೋಗ ಮತ್ತು ಉದ್ಯೋಗಾವಕಾಶಗಳ ಕೊರತೆ, ಸರ್ಕಾರದ ಆರ್ಥಿಕ ನೀತಿಗಳ ವೈಫಲ್ಯದಿಂದ ಉಂಟಾಗುವ ಹಣದುಬ್ಬರವು ಸಾಮಾನ್ಯ ಜನರನ್ನು ಆರ್ಥಿಕವಾಗಿ ಕುಗ್ಗಿಸುತ್ತಿದೆ. ಆಹಾರ, ಶಿಕ್ಷಣ, ಔಷಧ ಮತ್ತು ವಸತಿಯಂತಹ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಜನರು ಸಾಲ ಪಡೆಯಬೇಕಾದ ಪರಿಸ್ಥಿತಿ ಉದ್ಭವಿಸುತ್ತಿದೆ.

ಪ್ರತಿ ಭಾರತೀಯನ ಸರಾಸರಿ ಸಾಲವು ಮಾರ್ಚ್ 2025ರ ಹೊತ್ತಿಗೆ 4.8 ಲಕ್ಷ ರೂಪಾಯಿಗಳಾಗಿವೆ. ಮಾರ್ಚ್ 2023ರಲ್ಲಿ ಇದು 3.9 ಲಕ್ಷ ರೂ.ಗಳಷ್ಟಿತ್ತು, ಅಂದರೆ, ಕೇವಲ ಎರಡು ವರ್ಷಗಳಲ್ಲಿ ಸುಮಾರು 23 ಪ್ರತಿಶತದಷ್ಟು (90 ಸಾವಿರ ರೂ) ಹೆಚ್ಚಳವಾಗಿದೆ. ಇದು ಸಾಮಾನ್ಯ ಜನರು ಆರ್ಥಿಕವಾಗಿ ಹೇಗೆ ಕಷ್ಟಪಡುತ್ತಿದ್ದಾರೆ ಎಂಬುದರ ಸ್ಪಷ್ಟ ಸೂಚನೆಯಾಗಿದೆ. ಕಳೆದ ವರ್ಷ ವಸತಿ ನಿರ್ಮಾಣಕ್ಕಾಗಿ ತೆಗೆದುಕೊಂಡ ಸಾಲಗಳು ಜಿಡಿಪಿಯ ಶೇ. 23.1 ರಷ್ಟಿದ್ದರೆ, ಈ ವರ್ಷ ಅವು ಶೇ. 23.9 ರಷ್ಟನ್ನು ತಲುಪಿವೆ. ಮತ್ತೊಂದೆಡೆ, ಕೊರೊನಾಗೆ ಮುನ್ನ ಶೇ. 19ರಷ್ಟಿದ್ದ ನಿವ್ವಳ ಉಳಿತಾಯವು 2024ರ ವೇಳೆಗೆ ಶೇ. 13.1 ಕ್ಕೆ ಇಳಿದಿದೆ.

ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಲ

ಉದ್ಯೋಗ ಮತ್ತು ಉದ್ಯೋಗಾವಕಾಶಗಳ ಕೊರತೆ, ಸರ್ಕಾರದ ಆರ್ಥಿಕ ನೀತಿಗಳ ವೈಫಲ್ಯದಿಂದ ಉಂಟಾಗುವ ಹಣದುಬ್ಬರವು ಸಾಮಾನ್ಯ ಜನರನ್ನು ಆರ್ಥಿಕವಾಗಿ ಕುಗ್ಗಿಸುತ್ತಿದೆ. ಆದಾಯಕ್ಕಿಂತ ಹೆಚ್ಚಿನ ಖರ್ಚುಗಳನ್ನು ಪೂರೈಸಲು ಸಾಲವನ್ನು ಅವಲಂಬಿಸಬೇಕಾಗಿರುವುದು ಒಂದು ಪ್ರವೃತ್ತಿಯಾಗುತ್ತಿದೆ. ಆಹಾರ, ಶಿಕ್ಷಣ, ಔಷಧ ಮತ್ತು ವಸತಿಯಂತಹ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಜನರು ಸಾಲ ಪಡೆಯಬೇಕಾದ ಪರಿಸ್ಥಿತಿ ಉದ್ಭವಿಸುತ್ತಿದೆ. ಚಿಲ್ಲರೆ ಸಾಲಗಳಲ್ಲಿ ಶೇ. 91 ರಷ್ಟು ವೈಯಕ್ತಿಕ ಸಾಲಗಳಾಗಿವೆ ಎಂಬುದು ಗಮನಾರ್ಹ ಇವುಗಳಲ್ಲಿ ಶೇ. 55ರಷ್ಟು ಬಳಕೆ ವೆಚ್ಚಗಳಾಗಿವೆ! ಅಂದರೆ, ಅವರು ತಿಂಗಳಿಂದ ತಿಂಗಳಿಗೆ ಬದುಕಲು ಬ್ಯಾಂಕುಗಳು ಮತ್ತು ಹಣಕಾಸು ಕಂಪನಿಗಳ ಮೇಲೆ ಅವಲಂಬಿತರಾಗುತ್ತಿದ್ದಾರೆ.

ನವ ಉದಾರವಾದಿ ಆರ್ಥಿಕ ನೀತಿಗಳ ಪರಿಣಾಮ

ಸಾಮಾನ್ಯ ಜನರ ಸಾಲದ ಹೆಚ್ಚಳಕ್ಕೂ ಸರ್ಕಾರಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಭಾವಿಸುವುದು ತಪ್ಪಾಗುತ್ತದೆ. ವಾಸ್ತವವಾಗಿ, ಸರ್ಕಾರಗಳು ಅನುಸರಿಸುತ್ತಿರುವ ನವ ಉದಾರವಾದಿ ಆರ್ಥಿಕ ನೀತಿಗಳು ಪ್ರತಿ ಹಂತದಲ್ಲೂ ಸಾಮಾನ್ಯ ಜನರ ಜೀವನದ ಮೇಲೆ ಪರಿಣಾಮ ಬೀರುತ್ತಿವೆ. 2016ರಲ್ಲಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರವು, 500 ಮತ್ತು 1000 ಮುಖಬೆಲೆಯ ನೋಟುಗಳನ್ನು ರದ್ದುಗೊಳಿಸುವ ನಿರ್ಧಾರ ತೆದುಕೊಂಡಿದ್ದು ಸಾಮಾನ್ಯ ಜನರ ಜೀವನವನ್ನು ಅಸ್ತವ್ಯಸ್ತಗೊಳಿಸಿದೆ. ಇದರಿಂದ ದೊಡ್ಡ ಸಂಖ್ಯೆಯ ಸಣ್ಣ ಕೈಗಾರಿಕೆಗಳು ಸಂಕಷ್ಟಕ್ಕೆ ಸಿಲುಕಿವೆ. ಇದು ಅಸಂಘಟಿತ ವಲಯದ ಮೇಲೆ ತೀವ್ರವಾಗಿ ಪರಿಣಾಮ ಬೀರಿದೆ, ಉದ್ಯೋಗಗಳು ನಷ್ಟವಾಗಿವೆ ಮತ್ತು ಜನರು ಸಾಲ ಅವಲಂಬಿಸುವುದನ್ನು ಬಿಟ್ಟು ಬೇರೆ ದಾರಿಯಿಲ್ಲ ಎಂಬಂತಾಗಿದೆ. ಸರ್ಕಾರ ಜಾರಿಗೆ ತಂದಿರುವ ಜಿಎಸ್‌ಟಿ ನೀತಿಯು ಲಕ್ಷಾಂತರ ಸಣ್ಣ ಉದ್ಯಮಗಳು ಮತ್ತು ಅವುಗಳನ್ನು ಅವಲಂಬಿಸಿರುವ ಜನರ ಮೇಲೂ ತೀವ್ರ ಪರಿಣಾಮ ಬೀರಿದೆ.

ಸರ್ಕಾರಿ ಅಂಕಿಅಂಶಗಳ ಪ್ರಕಾರ, 2022–23ರ ವೇಳೆಗೆ ಉತ್ಪಾದನಾ ವಲಯದಲ್ಲಿ ಸಣ್ಣ ಕೈಗಾರಿಕೆಗಳ ಸಂಖ್ಯೆ (ಅಸಂಘಟಿತ ವಲಯ) ಶೇಕಡಾ 9.3ಕ್ಕೆ ಇಳಿದಿದೆ. ಈ ಕೈಗಾರಿಕೆಗಳಲ್ಲಿ ಶೇ. 15ರಷ್ಟು ಕಾರ್ಮಿಕರು ತಮ್ಮ ಉದ್ಯೋಗಗಳನ್ನು ಕಳೆದುಕೊಂಡಿದ್ದಾರೆ. ಕೊರೊನಾ ಪೂರ್ವ ಅಂಕಿಅಂಶಗಳ ಪ್ರಕಾರ, ದೇಶದಲ್ಲಿ ಪ್ರತಿ ವರ್ಷ 20 ಲಕ್ಷದವರೆಗೆ ಈ ರೀತಿಯ ಹೊಸ ಕೈಗಾರಿಕೆಗಳು ಸ್ಥಾಪನೆಯಾಗುತ್ತಿದ್ದವು. ದೇಶವು ಅಷ್ಟರ ಮಟ್ಟಿಗೆ ಉದ್ಯೋಗಾವಕಾಶಗಳನ್ನು ಕಳೆದುಕೊಂಡಿದೆ.

ಮೈಕ್ರೋ ಫೈನಾನ್ಸ್ ಕಂಪನಿಗಳ ಸುಳಿಯಲ್ಲಿ

ಅದೇ ಸಮಯದಲ್ಲಿ, ಸಾಲದೊಂದಿಗೆ ಆರ್ಥಿಕ ಚಕ್ರವನ್ನು ಚಾಲನೆ ಮಾಡುವ ತಂತ್ರಕ್ಕೆ ಸರ್ಕಾರ ತೆರೆದುಕೊಂಡಿದೆ. ಪರಿಣಾಮವಾಗಿ, ಮೈಕ್ರೋ ಫೈನಾನ್ಸ್ ಕಂಪನಿಗಳು ಮತ್ತು ಸಾಲದ ಅಪ್ಲಿಕೇಶನ್‌ಗಳು ಮೊಬೈಲ್ ಫೋನ್‌ಗಳಲ್ಲಿ ಲಭ್ಯವಾಗಿವೆ. 'Financial Inclusion' ಎಂಬ ಈ ಪ್ರಕ್ರಿಯೆಯಲ್ಲಿ, ಶ್ರೀಸಾಮಾನ್ಯರು ಸಹ ಇದರ ಭಾಗವಾಗಿದ್ದಾರೆ. 2023ರ ಹೊತ್ತಿಗೆ, ಈ ವಲಯದಲ್ಲಿ ಸಾಲಗಾರರ ಸಂಖ್ಯೆ ಆರು ಕೋಟಿ ತಲುಪಿದೆ. ಒಟ್ಟು ಸಾಲದ ಹೊರೆಯಲ್ಲಿ ಅವರ ಪಾಲು ಶೇಕಡಾ 15ರಿಂದ 20ರಷ್ಟಿದೆ ಎಂದು ಅಂದಾಜಿಸಲಾಗಿದೆ. ಸಾಲಗಳನ್ನು ವಸೂಲಿ ಮಾಡಲು ಅಂತಹ ಕಂಪನಿಗಳು ಅನುಸರಿಸುವ ವಿಧಾನಗಳು ಬಹಳಷ್ಟು ವಿವಾದಾಸ್ಪದವಾಗಿವೆ. ಇದರಿಂದ ಸಾಲ ಪಡೆದವರು ಆತ್ಮಹತ್ಯೆ ಮಾಡಿಕೊಳ್ಳಲು ಒತ್ತಾಯಿಸಲ್ಪಡುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ.

ಕಾರ್ಪೋರೇಟ್ ಗಳ ಸಾಲ ಮನ್ನಾ! ಸಾಮಾನ್ಯ ಗ್ರಾಹಕರಿಗೆ ದಂಡ, ಶುಲ್ಕ!!

ಒಂದೆಡೆ ಸಾಲ ಮರುಪಾವತಿಸಲು ಅಸಮರ್ಥತೆಯಿಂದ ಸಾಮಾನ್ಯ ಪ್ರಜೆ

ಪುಟ 12 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**